ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 6

ಫೆಬ್ರವರಿ 08, 2009

ರೂ. 5/-


ಕನ್ನಡ ವಾರಪತ್ರಿಕೆ





ಮಂಗಳೂರು : ಮೋದಿಗೇ ಮಾದರಿಯಾಗುತ್ತಿದೆಯೇ?





ಸರ್ಕಾರದ್ದೇ ಕರಸೇವೆ: ವಿದ್ಯಾರ್ಥಿಗಳ ನಡುವೆ ವಿಭಜನೆಯ ಗೋಡೆ

ಸಿಕ್ಕಿಬಿದ್ದ ಸಂಪಂಗಿ ಭ್ರಷ್ಟರೊಳಗಿನ ಭ್ರಷ್ಟ !

ಸ್ವಾಮಿ ವಿವೇಕಾನಂದ ಮತ್ತು ಗೋ ರಕ್ಷಣೆ

ಮದ್ದೂರು : 'ಸೇಡು' ತೀರಿಸಿಕೊಂಡ ಸರ್ಕಾರ

ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆ ಮತ್ತು ಗೋರ್ಕಿ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಹಿತ್ಯದ ಉದ್ದೇಶವೇನು? ಆತ್ಮತೃಪ್ತಿಗಾಗಿಯೋ, ಅದು ಸಮಾಜಕ್ಕಾಗಿಯೋ? ಸಾಹಿತಿಗೆ ಸಾಮಾಜಿಕ ಬದ್ಧತೆ ಬೇಕೆ? ಬೇಕಿದ್ದರೆ ಎಂತಹ ಬದ್ಧತೆ ಬೇಕು?

ಕಳೆದ ವಾರದಿಂದ

1930ರ ವಿಶ್ವವ್ಯಾಪಿ ಹೋರಾಟದ ದಿನಗಳಲ್ಲಿ ಇಡೀ ಮಾನವತೆಯೇ-ಒಂದೆಡೆಯಲ್ಲಿ ಫ್ಯಾಸಿಸ್ಟ್‌ವಾದ, ಯುದ್ಧ ಹಾಗೂ ಇನ್ನೊಂದೆಡೆಯಲ್ಲಿ -ಪ್ರಜಾಪ್ರಭುತ್ವ, ಶಾಂತಿ ಮತ್ತು ಸಮಾಜವಾದದ ಮಧ್ಯೆ ಹರಿ ಹಂಚಿಹೋಗಿತ್ತೋ-ಆ ಸಂದರ್ಭದಲ್ಲಿ, ಗೋರ್ಕಿಯವರು ಎಲ್ಲಾ ಲೇಖಕರು ಮತ್ತು ಸಂಸ್ಕೃತಿಯ ನಿರ್ಮಾಪಕರೊಡನೆ "ನೀವು ಯಾವ ಕಡೆಗೆ?" ಎಂದು ಪ್ರಶ್ನಿಸಿದ್ದುದ್ದು ಇದೇ ಕಾರಣದಿಂದ.

ಒಬ್ಬ ಸೃಜನಶೀಲ ಲೇಖಕರಾಗಿರುತ್ತಾ ಅವರಿಗೆ ಎರಡು ಶಕ್ತಿಗಳ ನಡುವೆ ತಮ್ಮನ್ನು ತಟಸ್ಥವಾಗಿರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದವರ ಬಗ್ಗೆ ತೀವ್ರವಾದ ತಿರಸ್ಕಾರವಿತ್ತು."

ಓರ್ವ ದಾರ್ಶನಿಕ ವ್ಯಕ್ತಿತ್ವದ ಗೋರ್ಕಿಯವರು ವೈಚಾರಿಕ ಸ್ತರದಲ್ಲಿಯೂ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಸಕ್ರಿಯ ಮಾನವತಾವಾದದ ಸಮರ್ಥಕರಾಗಿದ್ದರು. ಗೋರ್ಕಿಯವರ 'ತಾಯಿ' ಕೃತಿಯಲ್ಲಿ ಬರುವ ಪಾತ್ರಗಳು ಬಂಡವಾಳಶಾಹಿ ವ್ಯವಸ್ಥೆಯು ಜನತೆಯನ್ನು ಯಾವ ಅಮಾನವೀಯ, ಕ್ರೂರ ಪರಿಸ್ಥಿತಿಗೆ ದೂಡಿದೆಯೊ ಅದರ ಚಿತ್ರಣವನ್ನು ಮಾತ್ರ ಮಾಡುವುದಿಲ್ಲ; ಬದಲಿಗೆ ಆ ಪಾತ್ರಗಳು ಆ ಪರಿಸ್ಥಿತಿಗಳೊಂದಿಗೆ ಹೇಗೆ ಹೋರಾಡುತ್ತವೆ ಎಂಬುದನ್ನು ಕೂಡಾ ಚಿತ್ರಿಸುತ್ತವೆ.

ಗೋರ್ಕಿಯವರಿಗೆ ವ್ಯಾಪಕ ಜೀವನಾನುಭವವಿತ್ತು. ಅವರ ಬಾಲ್ಯದ ಅನುಭವವಂತೂ ಅತ್ಯಂತ ಕಟುವಾಗಿತ್ತು. ಹರಿದ ಬಟ್ಟೆ, ಕಬ್ಬಿಣದ ಚೂರು ಮತ್ತು ರದ್ದಿಕಾಗದ ಆಯುವ ಕೆಲಸವನ್ನು ಅವರು ಮಾಡಬೇಕಾಯಿತು. ಅಲೆಮಾರಿ ಚಿಂದಿ ಆಯುವ ಹುಡುಗ ಎಂದು ಆತನ ತರಗತಿಯ ಮಕ್ಕಳು ಅಪಹಾಸ್ಯ ಮಾಡುತ್ತಿದ್ದರು. ಹೊಟ್ಟೆಹಸಿವು ನೀಗಿಸಿಕೊಳ್ಳಲು ಮರದ ದಿಮ್ಮಿಗಳ ಅಂಗಳದಿಂದ ಹಲಗೆಗಳನ್ನು ಕಳ್ಳತನ ಕೆಲಸವನ್ನೂ ಮಾಡಿದ್ದರು. ಪಾದರಕ್ಷೆ ಅಂಗಡಿಯಲ್ಲಿ ಚಾಕರಿ ಹುಡುಗನಾಗಿ ದುಡಿದಿದ್ದರು. ಇಷ್ಟೆಲ್ಲಾ ಕೆಲಸ ಮಾಡುತ್ತಿದ್ದರೂ ಗೋರ್ಕಿಯವರಿಗೆ ಹೊಟ್ಟೆ ತುಂಬ ಊಟವಾಗಲೀ, ನಿಶ್ಚಿಂತೆಯಿಂದ ಮಲಗಲು ಒಂದು ಹಾಸಿಗೆಯಾಗಲಿ ದೊರೆಯುತ್ತಿರಲಿಲ್ಲ. ಈ ಕುರಿತು ಗೋರ್ಕಿ ಹೀಗೆ ಬರೆಯುತ್ತಾರೆ:

"ನಾನು ಅಡಿಗೆ ಮನೆಯಲ್ಲಿ ಕಕ್ಕಸಿನ ಬಾಗಿಲಿಗೆ ಎದುರಿಗೆ ಹಾಗೂ ಹೊರಗೆ ಹೋಗುವ ಬಾಗಿಲಿನ ಪಕ್ಕದಲ್ಲಿ ಮಲಗುತ್ತಿದ್ದೆ. ಅಡಿಗೆಮನೆಯ ಅಗ್ಗಿಷ್ಟಿಕೆಯ ಬಿಸಿಯಿಂದ ತಲೆ ಕಾಯುತ್ತಿತ್ತು. ಬಾಗಿಲ ಕಡೆಯಿಂದ ಬೀಸಿಕೊಂಡು ಬರುತ್ತಿದ್ದ ಕೊರೆಯುವ ಗಾಳಿಯಿಂದಾಗಿ ಕಾಲುಗಳು ಮರಗಟ್ಟಿ ಹೋಗುತ್ತಿದ್ದುವು. ರಾತ್ರಿ ಮಲಗುವಾಗ ನೆಲದ ಮೇಲೆ ಹಾಸಿದ್ದ ಚಾಪೆಯನ್ನು ಸುತ್ತಿ ಕಾಲಿನ ಮೇಲೆ ಹಾಕಿ ಕೊಳ್ಳುತ್ತಿದ್ದೆ" ಗೋರ್ಕಿ ಹಡಗಿನ ಕೂಲಿಯಾಳಾಗಿಯೂ ದುಡಿದಿದ್ದರು. ಪಾತ್ರೆ ಪಗಡೆ ತೊಳೆಯುವ ಕ್ಲೀನರ್ ಕೆಲಸವನ್ನು ಮಾಡಿದ್ದರು. ಕೆಲವೊಮ್ಮೆ ಜೀವನದ ಪರಿಸ್ಥಿತಿಗಳು ಮನುಷ್ಯನನ್ನು ಕ್ರಾಂತಿಕಾರಿ ಪರಿವರ್ತನೆಯಡೆಗೆ ದೂಡಿ ಬಿಡುತ್ತವೆ ಎಂಬುದಕ್ಕೆ ಇದು ಒಂದು ಮಹತ್ವದ ಉದಾಹರಣೆ. ಆದರೆ, ಇಂತಹುದೇ ಪರಿಸ್ಥಿತಿಗಳು ಹಿಂದಿ ಸಾಹಿತ್ಯದ ಮಹತ್ವದ ಲೇಖಕ ಅಜ್ಞೇಯರನ್ನು ದಂಗೆಕೋರನನ್ನಾಗಿ ಮಾಡುತ್ತವೆ. ಅಜ್ಞೇಯರ "ಶೇಖರ್: ಏಕ್ ಜೀವನೀ" ಕಾದಂಬರಿಯ ನಾಯಕ ಓರ್ವ ದಂಗೆಕೋರ. ಆದರೆ ಕ್ರಾಂತಿಕಾರಿ ಅಲ್ಲ. ಆದ್ದರಿಂದ, ಆತನ ಮನಸ್ಸಿಗೆ ಸದಾ ಅನ್ನಿಸುವುದು ಹೀಗೆ: "Better to be a dog, a pig, a rat, a stinking worm than to be a man whom no one trusts" ಇಂತವೆಲ್ಲಾ ಕ್ರಾಂತಿ ವಿರೋಧಿ ಟ್ರಾಟ್‌ಸ್ಕಿವಾದದ ಅಥವಾ ಬುಕಾರಿನ್ ವಾದದ ಪರಿಣಾಮವಾಗಿಯೂ ಸಂಭವಿಸುತ್ತದೆ. ಗೋರ್ಕಿಯವರ ತಾಯಿ ಕಾದಂಬರಿಯಲ್ಲಿನ ವಸ್ತು ಒಂದು ರೀತಿಯಲ್ಲಿ ದಸ್ತಾವೇಜಿನ ಸ್ವರೂಪದ್ದು. ಆದರೆ, ಗೋರ್ಕಿ ಅದನ್ನೊಂದು ಮಹಾನ್ ಕಲಾಕೃತಿಯಾಗಿಸುತ್ತಾರೆ. ಅದರಲ್ಲಿನ ಬಹುತೇಕ ಪಾತ್ರಗಳು ವಾಸ್ತವ ಜೀವನಕ್ಕೆ ಸಂಬಂಧಿಸಿದವು. ಪಾವೆಲ್ ಹಾಗೂ ಆತನ ಸಂಗಾತಿಗಳು ಗಿಳಿಪಾಠ ಒಪ್ಪಿಸುವ ಕಮ್ಯೂನಿಷ್ಟ್ ಪಾತ್ರಗಳಲ್ಲ. ವಾಸ್ತವ ಜೀವನದಿಂದ ಮೂಡಿಬಂದ ಜೀವಂತ ಮತ್ತು ವಿಕಾಸಶೀಲ ಪಾತ್ರಗಳು. ಇಲ್ಲಿ ಸಂಪೂರ್ಣ ತುಳಿತಕ್ಕೊಳಗಾದ, ಅಸಹಾಯಕ, ಓದು ಬರಹ ಬಾರದ, ಧರ್ಮಭೀರು ನೀಲೊವ್ನ ದುರ್ಲಂಘ್ಯ ಅಡತಡೆಗಳನ್ನು ದಾಟುತ್ತಾ ಸೆಣಸುತ್ತಾ 'ತಪ್ತಳಾದ ನೀಲೊನ್ನ ಚೊಕ್ಕ ಚಿನ್ನ'ವಾಗಿ ಹೊರಬರುತ್ತಾಳೆ. ಯುಗಧರ್ಮವನ್ನು, ಕಾಲದೇಶವನ್ನು ಯಾವುದೇ ಕೃತಿಯು ಮೀರುವುದು ಸಾಧ್ಯವಿಲ್ಲ. ಆದರೆ, ರಶ್ಯಾ ಯಾವ ಕಾಲ ಘಟ್ಟವನ್ನು ಹಾದು ಹೋಗುವಾಗ ಗೋರ್ಕಿ 'ತಾಯಿ'ಯನ್ನು ರಚಿಸಿದರೋ ಅಂತಹುದೇ ಕಾಲ ಘಟ್ಟಗಳನ್ನು ಇನ್ನೂ ಹಾದು ಹೋಗಬೇಕಾದ – ಸಾಗಬೇಕಾದ ದೇಶಗಳಿಗೆ 'ತಾಯಿ' ಪ್ರೇರಣೆಯ ಮೂಲಸೆಲೆಯಾಗುತ್ತದೆ. ಅಂತೆಯೇ ಅದು ವಿಶ್ವ ಸಾಹಿತ್ಯದ, ವಿಶ್ವ ಶೋಷಿತರ ಸ್ವಾತಂತ್ರ್ಯಕ್ಕೆ ದೀವಟಿಗೆಯಾಗುತ್ತದೆ.

ಗೋರ್ಕಿಯವರ ಕೃತಿಗಳು ಮೂರು ಹಂತಗಳಲ್ಲಿ ರಚನೆಯಾಗಿವೆ. ಮೊದಲನೆಯದ್ದು 1892 ರಿಂದ 1899ರ ತನಕ, ಎರಡನೆಯದ್ದು 1899 ರಿಂದ 1907ರ ತನಕ ಮತ್ತು ಮೂರನೆಯ ಹಂತ 1907ರಿಂದ 1936ರ ತನಕ.

ಗೋರ್ಕಿಯವರು ನೂರಾರು ಕತೆಗಳನ್ನು ಬರೆದಿದ್ದಾರೆ. 'ಮಕಾರ್ ಚುದ್ರಾ', 'ಗಿಡುಗನ ಗೀತೆ', 'ಮುದುಕಿ ಇಜೆರ್ಗಿಲ್', 'ಘಂಟೆ', 'ಬೇಸರ', 'ಓದುಗ', 'ಭೇಟಿ', 'ಉಪ್ಪಿನ ಕಟ್ಟೆಯಲ್ಲಿ', 'ವಾನ್ಕ ಮಾಜಿನ್' ಇತ್ಯಾದಿ. ಈ ಕತೆಗಳೆಲ್ಲಾ ಸಾಮಾಜಿಕ ಅನ್ಯಾಯದ ಜೀವಂತ ಚಿತ್ರಣಗಳು. ಗೋರ್ಕಿಯವರ 'ಮೂವರು' ನೀಳ್ಗತೆಯ ಮೇಲೆ ಜಾರ್‌ಶಾಹಿ ನಿರ್ಬಂಧ ಹೇರಿತ್ತು.

ಗೋರ್ಕಿಯವರು ವಿಶ್ವವಿಖ್ಯಾತ ನಾಟಕಕಾರರು. 'ಬಾಳಿನ ತಳದಲ್ಲಿ', 'ಸೂರ್ಯನ ಮಕ್ಕಳು', 'ಶತ್ರುಗಳು' ಅವರ ಮಹತ್ವದ ನಾಟಕಗಳು. ಸಾಯುವುದಕ್ಕೆ ಒಂದು ವರ್ಷ ಮುಂಚೆ 1935ರಲ್ಲಿ ಅವರು 'ವಾತ್ಸ ಜೆಲೆಜ್ನೋವ' ನಾಟಕವನ್ನು ಬರೆದಿದ್ದರು.

'ತಾಯಿ' ಕಾದಂಬರಿ ಬರೆದ ನಂತರದ ಮೂರು ಆತ್ಮಕಥಾ ರೂಪದ ಕೃತಿಗಳು ಕೂಡ ಸಾಮಾಜಿಕ ವಿಕಾಸದ ನಿಯಮಗಳ ಗಾಢ ಅಧ್ಯಯನದ ಫಲ. ಗೋರ್ಕಿಯವರು ತಮ್ಮ ಬಾಳಿನ ಕೊನೆಯ ಘಟ್ಟದಲ್ಲಿ ರಚಿಸಿದ ಕೃತಿಗಳಲ್ಲಿ (ಕಾದಂಬರಿಗಳು) 'ಆರ್ತಮೋನೊವ್‌ರ ವ್ಯವಹಾರ' ಮತ್ತು 'ಕ್ಲಿಮ್ ಸಮ್‌ಗಿನ್ನನ ಬಾಳುವೆ' ವಿಶೇಷವಾಗಿ ಗಮನಾರ್ಹವಾದುದು. 'ಕ್ಲಿಮ್ ಸಮ್‌ಗಿನ್‌ನ ಬಾಳುವೆ' ನಾಲ್ಕು ಭಾಗಗಳುಳ್ಳ ಬೃಹತ್ ಕಾದಂಬರಿ. ಅದು ಅವರ ಸಾಹಿತ್ಯಕ ಯಾತ್ರೆಯ ಶಿಖರ. ಆ ಕೃತಿಯಲ್ಲಿ ಗೋರ್ಕಿಯವರು 1917 ಅಕ್ಟೋಬರ್ ಕ್ರಾಂತಿಯ ವರೆಗಿನ ನಾಲ್ಕು ದಶಕಗಳ ರಷ್ಯನ್ ಇತಿಹಾಸವನ್ನು ಅತ್ಯಂತ ಕಲಾತ್ಮಕವಾಗಿ ಅಭಿವ್ಯಕ್ತಿಸಿದ್ದಾರೆ. ಸೋವಿಯತ್ ಲೇಖಕ ಒವ್ಯಾರೆಂಕೊ ಅವರ ಪ್ರಕಾರ: "ಕ್ಲಿಮ್ ಸಮ್‌ಗಿನ್‌ನ ಬಾಳುವೆ" ವಾಸ್ತವವಾಗಿ 20ನೆಯ ಶತಮಾನದ ಅತ್ಯಂತ ಜಟಿಲವಾದ, ಗಹನವಾದ, ಮಹತ್ವ ಪೂರ್ಣವಾದ ಕೃತಿ. ಇದರ ಪುಟಗಳಲ್ಲಿ ಸುಮಾರು ಅರ್ಧ ಶತಮಾನದ ರಷ್ಯನ್ ಜನಜೀವನವೆ ಚಿತ್ರಿತವಾಗಿದೆ. ಹೊಸ ಜಗತ್ತನ್ನು ರೂಪಿಸಿದ ಒಂದು ಮಹಾಯುಗವೇ ಇಲ್ಲಿ ಇಡಿಯಾಗಿ ಅಂಕಿತಗೊಂಡಿದೆ" ನಿಜಕ್ಕೂ ಇದು ವಿಶ್ವ ಸಾಹಿತ್ಯದ ಉನ್ನತ ಶಿಖರ.

ಕೊನೆಯಲ್ಲಿ ಪ್ರಾಸಂಗಿಕವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ: ಇಂದು ಸ್ವತಃ ತಮ್ಮನ್ನು ಮಾರ್ಕ್ಸ್‌ವಾದಿಗಳೆಂದು ಕರೆದುಕೊಳ್ಳುವ ಮಹಾನ್(!) ಮಾರ್ಕ್ಸ್ ವಿರೋಧಿಗಳು ಜಗತ್ತಿನಾದ್ಯಂತ ಪ್ರಭಾವ ಬೀರುತ್ತಿದ್ದಾರೆ. ಕೇವಲ ಒಂದು ಉದಾಹರಣೆಯಾಗಿ ನಾನು 'ಡೆರಿಡಾ' ನನ್ನು ಪ್ರಸ್ತಾಪಿಸಬಯಸುತ್ತೇನೆ.

1993ರಲ್ಲಿ ಪ್ರಕಟವಾದ ಡೆರಿಡಾನ ಪುಸ್ತಕ "In certain spirit of Marx" ನೋಡುವಾಗ ಡೆರಿಡಾನ ಸುತ್ತಲೂ ಪ್ರೇತಗಳು ಸುಳಿದಾಡುವುದು ಕಾಣಿಸುತ್ತದೆ. ಆತ "ಕಮ್ಯೂನಿಷ್ಟ್ ಘೋಷಣಾ ಪತ್ರ" "ಲೂಯಿ ಬೋನಾ ಪಾರ್ಟಿನ 18ನೇಯ ಬ್ರೂಮೇರ್", "ಜರ್ಮನ್ ಐಡಿಯಾಲಜಿ", 'ಕೆಪಿಟಲ್' – ಎಲ್ಲಾ ಗ್ರಂಥಗಳನ್ನು ಚಮತ್ಕಾರ-ಪವಾಡದಂತೆ ಖಂಡಿಸಿದ್ದನ್ನು ಕಂಡರೆ – ಆತನ ಖಂಡನವಿಧಿಯು ಒಂದು ಹೊಸ ಬಗೆಯ ಪ್ರೇತವಿದ್ಯೆಯಾಗಿ ರೂಪುಗೊಂಡಂತೆ ಕಂಡು ಬರುತ್ತದೆ. ಡೆರಿಡಾ ತನ್ನ ಆ ಪುಸ್ತಕದ ಕೊನೆಯಲ್ಲಿ ಹೇಳುತ್ತಾನೆ:

"ಈಗ ಪ್ರೇತಗಳೊಡನೆ ಮಾತನಾಡುವ, ಪ್ರೇತಗಳ ಬಗೆಗೆ ಮಾತನಾಡುವ ಮತ್ತು ಪ್ರೇತಗಳ ಜತೆಗಿರುವುದನ್ನು ಬಿಟ್ಟು ಬೇರೆ ವಿಕಲ್ಪವಿಲ್ಲ."

ಎಂಥ ವಿಡಂಬನೆಯೆಂದರೆ, ಡೆರಿಡಾನಿಗೆ ಮಾರ್ಕ್ಸ್ ಕೇವಲ ಒಂದು 'ರೂಹ್' ಪ್ರೇತಾತ್ಮ. ಯಾವ ಮಾರ್ಕ್ಸ್‌ರವರು ಹೆಗೆಲರ ಶೀರ್ಷಾಸನದಲ್ಲಿರುವ "ದ್ವಂದ್ವಮಾನ ಭೌತವಾದವನ್ನು ಸರಿಯಾಗಿ ನೆಟ್ಟಗೆ ನಿಲ್ಲಿಸಿದರೋ ಅದನ್ನು ಡೆರಿಡಾ ಪುನಃ ತಲೆಕೆಳಗಾಗಿ ನಿಲ್ಲಿಸಿ ತನ್ನನ್ನು ಮಾರ್ಕ್ಸ್ ವಾರೀಸುದಾರನೆಂದು ಘೋಷಿಸಿಕೊಳ್ಳುತ್ತಾನೆ!

ಲೂಯಿ ಬೋನಾ ಪಾರ್ಟಿನಲ್ಲಿ ಮಾರ್ಕ್ಸ್:

"ಎಲ್ಲಾ ಸತ್ತ ಪೀಳಿಗೆಗಳ ಪರಂಪರೆಯು ಜೀವಿತ ಮನುಷ್ಯನ ಮನಸ್ಸಿನಲ್ಲಿ ಒಂದು ದುಃಸ್ವಪ್ನದಂತೆ ಸವಾರಿ ಮಾಡುತ್ತದೆ" ಎಂದಿದ್ದಾರೆ. ಇಂಥ ಪುನರಾವೃತ್ತಿ ಫ್ರಾನ್ಸಿನಲ್ಲಿ 1852ರಲ್ಲಿ ನಡೆದಿದ್ದರೆ ಹಿಂದುತ್ವದ ತ್ರಿಶೂಲಧಾರಿ ಬ್ರಿಗೇಡ್ 1992ರಲ್ಲಿ ಬಾಬರಿಮಸೀದಿ ಕೆಡಹಿದ ನಂತರ ಸಂಘಪರಿವಾರ ಬೆಳೆದ ಬಗೆ ಇದೇ ಬಗೆಯ ಇತಿಹಾಸದ ಪುನರಾವೃತ್ತಿ. ಇವೆಲ್ಲಾ ಅತೀತದ ಪ್ರೇತ-ಭೂತಭಾದೆಯಲ್ಲದೆ ಮತ್ತೇನು?

ಹಿಂದಿಯ ಪ್ರಖ್ಯಾತ ಲೇಖಕ ಹರಿಶಂಕರ ಪರಸಾಯಿಯವರು 'ಭೂತ್ ಕೇ ಪಾವ್ ಪೀಚೆ' – ಲೇಖನ ಬರೆದಿದ್ದರು. ಅದರಲ್ಲಿ ಅವರು ಹೀಗೆನ್ನುತ್ತಾರೆ.

"ಕೆಲವು ಮನುಷ್ಯರ ಮಿದುಳಿನ ಕಾಲುಗಳು ಹಿಂಗಡೆಗೆ ಇರುತ್ತವೆ. ಇಂತಹವರಿಗೆ ಕಳೆದು ಹೋದುದೇ ಪರಮ ಶ್ರೇಷ್ಠ ವರ್ತಮಾನ ಅತ್ಯಂತ ಹೇಯ." ನಮ್ಮದು ಋಷಿ ಪರಂಪರೆ! ನಾವು ಆರ್ಯರ ಸಂತಾನ! ಪ್ರಾಚೀನ ಕಾಲದಲ್ಲಿ ಹಾಲಿನ ನದಿಗಳು ಹರಿಯುತ್ತಿದ್ದವು. ಪ್ರಾಯಃ ಅವು ಕ್ಷೀರ-ಸಾಗರವನ್ನು ಸೇರುತ್ತಿದ್ದಿರಬೇಕು!

(ಮುಂದುವರಿಯುವುದು)

ಸಂಪಾದಕೀಯ

ಇದೀಗ ಹಿಂದುತ್ವ ತಾಲಿಬಾನ್?

ಹಿಂದುತ್ವ ಪಡೆ ಜನವರಿ 24ರಂದು ಮಂಗಳೂರಿನ ಒಂದು ಪಬ್‌ನಲ್ಲಿ ಹಿಂದುತ್ವ ಪಡೆಗಳು ಯುವತಿಯರ ಮೇಲೆ ಅತ್ಯಂತ ಖಂಡನೀಯವಾದ, ಅಸಹ್ಯಕರ ಹಲ್ಲೆ ನಡೆಸಿವೆ. 'ಶ್ರೀರಾಮ ಸೇನೆ'(ಎಸ್ಸಾರೆಸ್) ಎಂದು ಹೇಳಿಕೊಳ್ಳುವ ಒಂದು ಪಡೆ ತಾನೇ ಈ ಹಲ್ಲೆ ನಡೆಸಿದ್ದು ಎಂದು ಹೇಳಿಕೊಂಡಿದೆ. ಈ ಬಗ್ಗೆ ಅದು ಮಾಧ್ಯಮಗಳಿಗೆ ಮೊದಲೇ ತಿಳಿಸಿತ್ತಂತೆ. ಮಾಧ್ಯಮದವರೂ ಈ ಉನ್ಮತ್ತ ಕೋಮುವಾದಿ ಅಸಹಿಷ್ಣುತೆಯ ಸಂದೇಶವನ್ನು ಹರಡುವಲ್ಲಿ ಈ ಮಂದಿಯೊಂದಿಗೆ ಶಾಮೀಲಾದರು.

ಅದೇ ದಿನ ಇನ್ನೊಂದು ಘಟನೆಯಲ್ಲಿ ಅದೇ ಎಸ್ಸಾರೆಸ್‌ನವರು ಅದೇ ನೆವವನ್ನು ಮುಂದೆ ಮಾಡಿ ಒಂದು ಖಾಸಗಿ ಸಂತೋಷ ಕೂಟ ನಡೆಯುತ್ತಿದ್ದಾಗ ಒಳನುಗ್ಗಿ ಪುಂಡಾಟಿಕೆ ನಡೆಸಿದರು, ಹಲವರನ್ನು ಜಖಂಗೊಳಿಸಿದರು. ಅದೂ ಸಾಲದೆಂಬಂತೆ ಆ ಎಸ್ಸಾರೆಸ್ ಮುಖ್ಯಸ್ಥ ಈ ಪುಂಡುಗಾರಿಕೆಯ ಬಗ್ಗೆ ಖೇದ ವ್ಯಕ್ತಪಡಿಸುವುದಿರಲಿ, ಹೆಮ್ಮೆಯಿಂದ ಸಮರ್ಥಿಸಿಕೊಂಡಿದ್ದಾರೆ! "ನಮ್ಮ ಹುಡುಗರು ಸ್ವಲ್ಪ ವಿಪರೀತವಾಗಿ ವರ್ತಿಸಿರಬಹುದು. ಆದರೆ ಅವರು ಏನು ಮಾಡಿದ್ದರೂ ಈ ದೇಶದ ಮಹಿಳೆಯರ ಸಂಸ್ಕೃತಿಯನ್ನು ಉಳಿಸಲು. ಈ ಬಾರಿ ಅವರ ವಿಧಾನ ಚರ್ಚೆಯ ವಿಷಯವಾಗಬಹುದು. ಆದರೆ ಸಂಸ್ಕೃತಿಯನ್ನು ರಕ್ಷಿಸುವುದು ಅವರ ಪ್ರಾಮಾಣಿಕ ಆಶಯವಾಗಿತ್ತು ಎಂದು ನಾನು ಹೇಳಬಲ್ಲೆ" ಎಂದು ಆತ ಹೇಳಿರುವುದಾಗಿ ವರದಿಯಾಗಿದೆ.

ಇದು ಹಿಂದುತ್ವ ತಾಲಿಬಾನೀಕರಣದ ಒಂದು ಹೊಲಸು ಪ್ರದರ್ಶನವಲ್ಲದೆ ಬೇರೇನು? ಮೊನ್ನೆಮೊನ್ನೆಯಷ್ಟೇ ತಾಲಿಬಾನ್‌ಗಳು ಐವರು ಹೆಣ್ಣು ಮಕ್ಕಳನ್ನು ಅವರು ಶಾಲೆಗೆ ಹೋಗುವ ಧೈರ್ಯ ಮಾಡಿದರೆಂದು ಜೀವಂತ ಹೂತು ಹಾಕಿದ ಸುದ್ದಿಯನ್ನು ನೆನಪಿಸಿಕೊಳ್ಳಿ.



ಮಹಿಳೆಯರ 'ಸಂಸ್ಕೃತಿ ಮತ್ತು ಪರಂಪರೆ'ಯನ್ನು ರಕ್ಷಿಸುವ ಹೆಸರಿನಲ್ಲಿ ತಾಲಿಬಾನ್ ಮಹಿಳೆಯರಿಗೆ ವಸ್ತ್ರ ಸಂಹಿತೆ ಮತ್ತು ಆಚಾರ ಸಂಹಿತೆಯ ಅಪ್ಪಣೆ ಕೊಡಿಸಿದೆ. ಯಾರಾದರೂ ಆ ಅಪ್ಪಣೆಯನ್ನು ಮೀರುವ ಧೈರ್ಯ ತೋರಿದರೆ ಅವರು ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ. ಇದೇ ಧಾಟಿಯಲ್ಲಿ ಎಸ್ಸಾರೆಸ್ ಮುಖ್ಯಸ್ಥ "ಯಾರಾದರೂ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಲ್ಲಂಘಿಸಿದರೆ, ನಾವು ಪ್ರತಿಭಟನೆ ಮಾಡಲು ಹಿಂಜರಿಯುವುದಿಲ್ಲ" (ಇಲ್ಲಿ ಪ್ರತಿಭಟನೆ ಎಂಬುದನ್ನು ಹಲ್ಲೆ ಮಾಡಲು ಎಂದು ಓದಿಕೊಳ್ಳುವುದು!) ಎನ್ನುತ್ತಾರೆ.

ಜಾಗೃತಿಯ ಹೆಸರಿನಲ್ಲಿ

ಯಾವುದೇ ವಿಧದ 'ನೈತಿಕತೆ'ಯ ಪ್ರತಿಪಾದಕರೆನಿಸಿಕೊಳ್ಳುವವರು ಮಾಡುವ ಈ ರೀತಿಯ "ಜಾಗೃತಿ"ಕೋರ ದಾಳಿಗಳು ಅನಾಗರಿಕತೆಯ ಅತೀ ಹೀನ ಪ್ರದರ್ಶನ. ಅವರು ಒಂದು ಆಧುನಿಕ ನಾಗರಿಕ ಸಮಾಜದ ಮೂಲ ತತ್ವಗಳನ್ನೇ ಧ್ವಂಸ ಮಾಡುತ್ತಿದ್ದಾರೆ. ಭಾರತ ತನ್ನ ಆಧುನಿಕ ಜಾತ್ಯಾತೀತ ಗಣತಂತ್ರ ಅಸ್ತಿತ್ವದ 60 ನೇ ವರ್ಷಕ್ಕೆ ಕಾಲಿಡುತ್ತಿರುವಾಗ ಫ್ಯಾಸಿಸ್ಟ್ ಮಾದರಿಯ ಗಲಭೆಕೋರರ ಇಂತಹ ಹಲ್ಲೆಗಳು ಹೆಚ್ಚುತ್ತಿರುವುದು ಅತ್ಯಂತ ಅಸಹ್ಯದ ಸಂಗತಿ. ಆ ದಿನ ಹಲ್ಲೆಗೊಳಗಾದವರಲ್ಲಿ ಯಾರೂ ಈ ನಾಡಿನ ಕಾನೂನನ್ನು ಉಲ್ಲಂಘಿಸಿರಲಿಲ್ಲ. "ಭಾರತೀಯ ಸಂಸ್ಕೃತಿ"ಯನ್ನು ರಕ್ಷಿಸುವ ಹೆಸರಿನಲ್ಲಿ ಯುವತಿಯರ ಮೇಲೆ ಹಲ್ಲೆ ಮಾಡುವ ಮೂಲಕ ಈ 'ಜಾಗೃತಿ'ಕೋರರು ಈ ದೇಶದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಮೂಲಭೂತ ಹಕ್ಕುಗಳ ಬಗ್ಗೆ ತಮ್ಮ ಅಜ್ಞಾನವನ್ನು ಮಾತ್ರವಲ್ಲ, ಭಾರತದ ವೈವಿಧ್ಯತೆ ಮತ್ತು ಶ್ರೀಮಂತ ಸಾಂಸ್ಕೃತಿಕ ಬಹುಳತೆಯ ಬಗ್ಗೆಯೂ ತಮಗೆ ಏನೇನೂ ತಿಳುವಳಿಕೆಯಿಲ್ಲ ಎಂಬುದನ್ನು ಪ್ರದರ್ಶಿಸಿದ್ದಾರೆ. ಭಾರತದ ಆಧುನಿಕ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ' ಎಂಬ

ಪುಟ12 ಕ್ಕೆ

ಸಿಕ್ಕಿಬಿದ್ದ ಸಂಪಂಗಿ ಭ್ರಷ್ಟರೊಳಗಿನ ಭ್ರಷ್ಟ



ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆಯ ಕಸರತ್ತಿನ ಬಿಸಿ ಎಲ್ಲಾ ಪಕ್ಷಗಳಲ್ಲಿಯೂ ಏರುತ್ತಿದ್ದ ಸಮಯ. ರಾಜಕೀಯದಲ್ಲಿ ತಾವೂ ಒಂದು ಸ್ಥಾನ ಪಡೆಯಬೇಕೆಂಬ ಹಂಬಲ, ಆಶೆ, ಅದಕ್ಕೆ ತಕ್ಕಂತೆ ಹಣ, ಆಶೆ ಹೊತ್ತವರು ತಮ್ಮ ಗೆಲುವಿಗೆ ಸಹಾಯಕವಾಗುವಂತಿರುವ ಪಕ್ಷಗಳ 'ಬ್ರಾಂಡ್‌ಗಳ' ಹುಡುಕಾಟದಲ್ಲಿದ್ದವರು. ಬಿಜೆಪಿ ನಂತರ ಕಾಂಗ್ರೆಸ್, ಇಲ್ಲವಾದರೆ ಜಾತ್ಯಾತೀತ ಜನತಾದಳ ಇವು ಅಸಾಧ್ಯವೇ ಎಂದಾದರೆ ಬಿಎಸ್‌ಪಿ ಪಕ್ಷ, ಜೆಡಿಯು..... (ಕಮ್ಯೂನಿಸ್ಟರತ್ತ ಇಂತಹವರು ತಲೆ ಹಾಕುವ ನೈತಿಕ ಧೈರ್ಯವೂ, ಅದರ ಅಗತ್ಯವೂ ಇರಲಿಲ್ಲ ಎನ್ನಿ). ಹೀಗೆ ಒಂದು ಕಡೆಯಿಂದ ಇನ್ನೊಂದು ಕಡೆ ಬೆಳಿಗ್ಗೆ ಒಂದು ಪಕ್ಷ ಮಧ್ಯಾಹ್ನ ಮತ್ತೊಂದು, ಸಂಜೆ - ರಾತ್ರಿಯೊಳಗೆ ಮತ್ತೊಂದು ಪಕ್ಷಗಳ ಪ್ರವೇಶ-ನಿರ್ಗಮನ, ದೊಡ್ಡ ಜೂಜಾಟದ ವ್ಯವಹಾರವೇ ನಡೆದಿತ್ತು.

ರಾಜಕೀಯ ಆಕರ್ಷಣೆ...

ಒಂದೊಂದು ಪಕ್ಷಗಳನ್ನು ಸೇರಿದಾಗ ಆ ಪಕ್ಷದ ಆದರ್ಶ, ಅದರ ನಾಯಕತ್ವ, ಅಭಿವೃದ್ಧಿ ಯೋಜನೆ ಇತ್ಯಾದಿ 'ಮೆಚ್ಚಿಯೇ' ಸೇರುತ್ತಿದ್ದರು.(!?) ಹಾಗೇ ನಿರ್ಗಮಿಸುತ್ತಿದ್ದರು. ಹೀಗೆಯೇ ಒಟ್ಟಿನಲ್ಲಿ ಯಾವ ಈ ಪಕ್ಷಗಳಿಗೂ ತನ್ನದೇ ಒಂದು ವಿಶೇಷತೆ ವ್ಯತ್ಯಾಸ ಎಂಬುದು ತೀರಾ ಕಡಿಮೆಯಾಗಿ ಒಂದೇ ಸಾಲಿನಲ್ಲಿ ನಿಂತಿದ್ದವು. ಹೀಗಿರುವಾಗಲೇ ಆಯಾ ಪಕ್ಷಗಳು ಅಧಿಕಾರಕ್ಕೆ ಬಂದಲ್ಲಿ ಸಹ ನಂತರ ಪರಿಣಾಮಗಳ ಬಗ್ಗೆ ಒಂದು ಗಂಭೀರ ವ್ಯತ್ಯಾಸಗಳೂ ಇದ್ದುದ್ದು ನಿಜ. ಅಧಿಕಾರದ ಗದ್ದುಗೆ ಏನೇ ಆಗಲಿ ಹಿಡಿಯಲೇಬೇಕೆಂಬ ಸರ್ವಸಿದ್ಧತೆಯಲ್ಲಿ ಬಿಜೆಪಿ ಮುಂದಿತ್ತು. ಅದು ಯಶಸ್ವಿಯಾದರೆ ಅಪಾಯವೂ ಇತ್ತು. ಇಂತಹ ಸ್ಥಿತಿಯಲ್ಲಿ ಇರುವಾಗಲೇ ಹಲವು ಬಾರಿ ಧೀರ್ಘ ಅಧಿಕಾರ ಅನುಭವಿಸಿದ್ದ ಇತಿಹಾಸವಿರುವ ಪಕ್ಷದ ಹಿರಿಯ ನಾಯಕರೊಬ್ಬರೊಂದಿಗೆ ಮಾತನಾಡುತ್ತಿದ್ದಾಗ 'ಹಿರಿಯ ಅಧಿಕಾರಿಯೊಬ್ಬರಿಗೆ ಯಾಕೆ ಟಿಕೇಟ್ ನಿರಾಕರಿಸಲಾಯಿತು' ಎಂಬ ಪ್ರಶ್ನೆಯೂ ಬಂತು. ಆಗ ಅವರೆಂದರು 'ನೋಡೀ ಈ ಅಧಿಕಾರಿಗಳು, ಸರ್ವೀಸ್‌ನಲ್ಲಿ ಸಾಕಷ್ಟು ರೊಕ್ಕ ಮಾಡ್ಕೊಂಡಿರ್ತಾರೆ, ಅದನ್ನು ರಕ್ಷಿಸಿಕೊಳ್ಳಲಿಕ್ಕೆ ಒಂದು ಆಶ್ರಯಬೇಕು. ರಾಜಕೀಯ ಸ್ಥಾನಬೇಕು, ಮಂತ್ರಿಯಾದರೆ ಭಾರೀ ಚಲೋ, ಇಲ್ಲವಾದ್ರೆ ಒಬ್ಬ ಎಂ.ಎಲ್.ಎ., ಎಂ.ಪಿ.ನಾದ್ರು ಆಗಬೇಕು, ಏನ್ ಮಾಡೊಕ್ಕಾಗುತ್ತೇ. ಎಲ್ರಿಗೂ ಎಲ್ಲಿಂದ ಟಿಕೇಟ್ ತರೋದು !. ಇರೋದೇ ಇನ್ನೂರುಇಪ್ಪತ್ನಾಲ್ಕು' ಎಂದು ಬಹಳ ಮಾರ್ಮಿಕವಾಗಿ ಸತ್ಯದ ಎಳೆಯೊಂದನ್ನು ಬಿಡಿಸಿಟ್ಟರು.

ಈ ವರಸೆ ಅಧಿಕಾರಿಗಳಿಗೆ ಮಾತ್ರ ಸೀಮಿತವಿರಲಿಲ್ಲ....... ಈ ಬಾರಿ ಭೂದಂಧೆಯಲ್ಲಿ ತೊಡಗಿದ್ದವರು, ಗಣಿಗಾರಿಕೆ ವ್ಯವಹಾರಸ್ಥರು, ದಳ್ಳಾಳಿ ವ್ಯಾಪಾರಿಗಳು ಸಹ ದೊಡ್ಡ ರೀತಿಯಲ್ಲಿ ರಾಜಕೀಯ ಪ್ರವೇಶಿಸಿದ್ದರು. ಇಂತಹವರನ್ನು ಹೆಗಲು ಹತ್ತಿಕೊಂಡಂವರಲ್ಲಿ ಬಿಜೆಪಿ ಪಾಲು ದೊಡ್ಡದು.

ಸಂಪಂಗಿ ಹತ್ತಿದ ದೋಣಿ

ಅಂತಹ ತೇಲು ದೋಣಿ ಹತ್ತಿದವರಲ್ಲಿ ಭೂದಂಧೆಯಲ್ಲಿ ಕುಖ್ಯಾತಿಯಾಗಿದ್ದ ವೈ.ಸಂಪಂಗಿ ಒಬ್ಬರು. ಹಾಗೇ ಹೀಗೋ ಕೆ.ಜಿ.ಎಫ್.ಗೆ ಟಿಕೇಟ್ ಸಿಕ್ಕಿತ್ತು. ಕಾಸು ಖರ್ಚು ಮಾಡಿದ್ದು ಆಯ್ತು. ಅಲ್ಲಿನ ಜನ ಬದಲಾವಣೆಯನ್ನು ಬಯಸಿದ್ದರು. ಹೀಗಾಗಿ ಈ ಮಹಾಶಯ ವಿಧಾನಸಭೆ ಪ್ರವೇಶಿಸಿದ್ದು ಆಯ್ತು. ಬೆಂಗಳೂರಿನ ಪ್ರಧಾನವಾಗಿ ಹೊಸೂರು ರಸ್ತೆಯಲ್ಲಿ ಬಹುತೇಕ ವ್ಯಾಜ್ಯವಿರುವ ದಲಿತರ ಭೂಮಿಗಳ ವ್ಯಾಜ್ಯ ಬಿಡಿಸಿ ವ್ಯವಹಾರ ಕುದುರಿಸುತ್ತಿದ್ದವರಲ್ಲಿ ನಿಷ್ಣಾತ ಎಂದೇ ಹೆಸರು ಪಡೆದಿದ್ದ ಈ ಸಂಪಂಗಿಯೇ ಇಂದು ಲಂಚ ಪ್ರಕರಣದಲ್ಲಿ ಲೋಕಾಯುಕ್ತರ ಬಲೆಗೆ ಸಿಕ್ಕಿಹಾಕಿಕೊಂಡಿದ್ದಾನೆ. ಜೈಲು ಖಾನದಿಂದ ತಪ್ಪಿಸಿಕೊಳ್ಳಲ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುತ್ತಿದ್ದಾನೆ. ಈತನ ವಿಶೇಷ ಗುಣಗಳಿಂದಾಗಿ ದಲಿತ ಚಳುವಳಿಯಿಂದ ಬಹುದೂರ ಸಾಗಿ, ಯಾರಿಗೂ ನಿಲುಕದೇ, ಯಾರು ಹತ್ತಿರ ಸೇರಿಸದೇ 'ದಲಿತ ಹಿಂದುಳಿದ ಅಲ್ಪಸಂಖ್ಯಾತ ಸಮಿತಿ' (ಡಿ.ಹೆಚ್.ಎ.ಎಸ್)ಯೆಂಬ ಸಂಘಟನೆಯನ್ನು ಕಟ್ಟಿಕೊಂಡು ನಿರಾತಂಕವಾಗಿ ಭೂ ಸೇವೆ, ತರಹೇವಾರಿ ಜನ ಸೇವೆಗಳನ್ನು ಮಾಡಿಕೊಂಡಿದ್ದು, ಸಂಪಂಗಿ ಸುತ್ತ ಕಟ್ಟಿಕೊಂಡಿದ್ದು ಕ್ರಿಮಿನಲ್ ಪಡೆಯನ್ನು. ದುಡ್ಡು ಸೇರಿದಾಗ ಹತ್ತಿರವಾದವರು ಅಧಿಕಾರಗಳು, ರಾಜಕೀಯಸ್ಥರು, ಭೂಮಾಫಿಯಾ ಇತ್ಯಾದಿಗಳು. ಇಂತಹ ಇತಿಹಾಸ, ಭೂಗೋಳದ ಹಿನ್ನೆಲೆಯಿರುವ ಶಾಸಕರು ನಿತ್ಯ ವೃತ್ತಿಯಿಂದಾಗಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಾರೆ. ! ಸರ್ಕಾರದ ರಚನೆಗೆ ಕಿರು ಬೆರಳೆತ್ತಿರುವ ಬಿಜೆಪಿಯ ಹೆಮ್ಮೆಯ ಶಾಸಕ ಹೀಗೆ ಸಿಕ್ಕಿದ್ದು ನುಂಗಲಾಗದೆ ಬಿಜೆಪಿ ನಾಯಕಗಣ, ಮುಖ್ಯಮಂತ್ರಿಗಳು ತಮ್ಮದೇ ಆದ ವಿಚಿತ್ರ 'ಸಂಘಾವರಸೆ'ಯಲ್ಲಿ ಬಚಾವು ಮಾಡಲು ಹವಣಿಸುತ್ತಿದೆ. ಇಡೀ ಘಟನೆ ಹಿನ್ನೆಲೆಗಳನ್ನು ತಿರುಚಲು ಹೊಸ ಹೊಸ ಕಥೆಗಳ ಅಡುಗೆ ಮಾಡಲಾಗುತ್ತಿದೆ.

ಲಂಚ ಪ್ರಕರಣ ನಡೆದಿದ್ದು ಹೇಗೆ ?

ಶಾಸಕರ ಭವನದ ತಮ್ಮ ಕೊಣೆಯಲ್ಲಿ ಶಾಸಕ ಸಂಪಂಗಿ ಕುಳಿತ್ತಿದ್ದಾನೆ ಅಲ್ಲಿಗೆ ಕೆ.ಜಿ.ಎಫ್‌ನ ಅಂಡರ್‌ಸನ್‌ಪೇಟೆಯ ನಿವಾಸಿ ಫಾರೂಕ್ ಬಂದು ಶಾಸಕರಿಗೆ 50 ಸಾವಿರ ನಗದು ಹಣ 4.5 ಲಕ್ಷಗಳ ಚೆಕ್ಕನ್ನ ನೀಡುತ್ತಾನೆ ಅದನ್ನು ಸಂಪಂಗಿ ಕೈಯಲ್ಲಿರುವಾಗಲೇ ಲೋಕಾಯುಕ್ತ ಪೋಲಿಸರು ಮಧ್ಯ ಪ್ರವೇಶಿಸಿ ರೆಡ್ ಹ್ಯಾಂಡ್‌ನಲ್ಲಿ ಹಿಡಿದು ಬಿಡುತ್ತಾರೆ. ಶಾಸಕನ ಬೆಂಬಲಿಗರ ಪ್ರತಿರೋಧ ಲೆಕ್ಕಿಸದೆ ಬಂಧಿಸಿ ಲೋಕಾಯುಕ್ತರ ಕಛೇರಿಯಲ್ಲಿ ತೀವ್ರ ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮಕ್ಕಾಗಿ ನ್ಯಾಯಲಯಕ್ಕೆ ಕಳುಹಿಸಲಾಗುತ್ತದೆ. ಅಲ್ಲಿ ಜಾಮೀನು ಅರ್ಜಿ ತಿರಸ್ಕರಿಸಿ ನ್ಯಾಯಾಂಗ ಬಂಧನಕ್ಕೆ ಆದೇಶಿಸುತ್ತದೆ. ಆಗಲೇ ಎದೆ ನೋವು ಕಾಣಿಸಿಕೊಂಡಿತೆಂದು ಆಸ್ಪತ್ರೆ ಒಯ್ಯಲಾಯಿತು, ನಂತರ ಅಂತಹದೇನು ದೈಹಿಕ ತೊಂದರೆ ಇಲ್ಲವೆಂದು ತಪಾಸಣೆ ನಡೆಸಿದ ವೈದ್ಯರು ಜಯದೇವ ಆಸ್ಪತ್ರೆಯಿಂದ ಹೊರಗೆ ಕಳುಹಿಸಲು ಅಣಿಯಾಗುವಾಗಲೇ ವಿಪರೀತ ತಲೆ ನೋವು, ಮೈ ನೋವು ಎಂದು ಸನ್ಮಾನ್ಯ ಶಾಸಕರು ಆರೋಗ್ಯ ಕೆಡಿಸಿಕೊಂಡು ನಿಮಾನ್ಸ್ ಸೇರಿದ ಪ್ರಹಸನವನ್ನು ಜನ ವ್ಯಂಗದಿಂದ ನೋಡುತ್ತಿದ್ದಾರೆ.

ಕೇಸು ಹಾಕಿಸುವವನೆ.....

ಸಂಪಂಗಿ ಲಂಚ ಪಡೆದಿದ್ದಾರೂ ಯಾತಕ್ಕಾಗಿ ಅಂಡರ್‌ಸನ್ ಪೇಟೆಯ ಪೋಲಿಸ್ ಠಾಣೆಯಲ್ಲಿ ಮನೆ ನಿವೇಶನ ವಿಷಯದಲ್ಲಿ ದುರುದ್ದೇಶಪೂರಿತವಾಗಿ ಕೇಸನ್ನು ದಾಖಲಿಸಿಕೊಂಡು ಕಿರುಕುಳ, ಹಿಂಸೆ ನೀಡಲಾಗುತ್ತಿದೆ ಎಂದು ನಿವಾಸಿ ಫಾರೂಕ್ ಪರಿತಪಿಸುತ್ತಿರುವಾಗ ಅಲ್ಲಿಯ ಪೋಲಿಸ್ ಅಧಿಕಾರಿಯೇ ಆತನಿಗೆ ಸೂಚನೆ ನೀಡಿ ಶಾಸಕ ಸಂಪಂಗಿಯನ್ನ ಕಂಡರೆ 'ಬಿ' ರಿಪೋರ್ಟ್ ಹಾಕಿಸಬಹುದು ಎಂದು ದಾರಿ ತೋರಿಸಿದ್ದಾನೆ. ಅದರಂತೆ ಫಾರೂಕ್ ಶಾಸಕರನ್ನ

ಪುಟ 5ಕ್ಕೆ

ಇವು ಜಾಹೀರಾತಲ್ಲ - ಭಿನ್ನರುಚಿ



'ಸುಂದರಿ'ಯರದ್ದಲ್ಲ, 'ಸುಂದರ' ಕ್ಯಾಲೆಂಡರ್

ಕ್ಯಾಲೆಂಡರ್ ಅಂದರೆ ರೇಷ್ಮೆಸೀರೆ ಉಟ್ಟು, ಕೈಮುಗಿದು ನಿಂತ ಅಥವಾ ದೀಪ ಹಚ್ಚಿನಿಂತ ಸುಂದರಿಯರು, ಮಲ್ಲನಂತಹ ದೊರೆಗಳು ತಂದಿರುವ ಕ್ಯಾಲೆಂಡರ್ ಆದರೆ ತೊಟ್ಟ ಬಟ್ಟೆ ಕಳಚಿಟ್ಟ 'ಸುಂದರಿ' ಯರು 'ನಗುಚೆಲ್ಲಿ' ನಿಂತಿರುವುದನ್ನು ನೋಡಬಹುದು.

ಇಲ್ಲೊಂದು ಕ್ಯಾಲೆಂಡರ್ ಇದೆ. ಇದು 'ಸುಂದರಿ'ಯರ ಕ್ಯಾಲೆಂಡರ್ ಅಲ್ಲ, ಆದರೆ 'ಸುಂದರ' ಕ್ಯಾಲೆಂಡರ್ ಅನ್ನುವುದು ಮಾತ್ರ ನಿಜ.

ಮಹಿಳೆಯ ಬದುಕಿನ ವಿವಿಧ ಮಜಲುಗಳನ್ನು ಬಿಂಬಿಸುವ 'ಸುಂದರ' ಚಿತ್ರಗಳು ಇಲ್ಲಿವೆ. ಜನವರಿಯಿಂದ ಡಿಸೆಂಬರ್... ಪುಟ ಪುಟಕ್ಕೂ ಚಿತ್ರಗಳು. ವಿಶಿಷ್ಟ ಚಿತ್ರಗಳು.

ಕಾನೂನಿನ ಅರಿವು ಸಾರುವ ಮಾಹಿತಿ ವರದಕ್ಷಿಣೆ, ಭ್ರೂಣಹತ್ಯೆ, ಕೌಟುಂಬಿಕ ದೌರ್ಜನ್ಯ... ಇತ್ಯಾದಿ ಇತ್ಯಾದಿ ಕುರಿತು.

'ಎದೆಯ ಗರ್ಭದಲ್ಲಿ
ನೂರು ಕನಸು ಇದೆ
ನನಸು ಆಗದೇಕೆ
ಕನಸಲೇ ಬದುಕು ಮುಗಿಯಬೇಕೇ?'

ಎಂದು ಪ್ರಶ್ನಿಸುವಂತಹ ಕವನಗಳ ಸಾಲುಗಳು. ಹಬ್ಬ, ರಜೆಗಳ ಮಾಹಿತಿ. ಇದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೊರ ತಂದಿರುವ ಕ್ಯಾಲೆಂಡರ್ ಅಂತ ಬಹುಶಃ ಹೇಳಲೇಬೇಕಿಲ್ಲವೇನೋ.

ಆಸಕ್ತರು ಕೊಂಡು ಕೊಳ್ಳಬಹುದು. ಸಂಪರ್ಕಿಸಬಹುದಾದವರು: ಕೆ.ಎಸ್.ಲಕ್ಷ್ಮಿ 9480101468 ಕೆ.ಎಸ್.ವಿಮಲ: 9448072431

ಹೀಗೆ ಶುಭಾಶಯ ಹೇಳಬಹುದಲ್ಲವೇ?

ನೀವು ಯಾರಿಗಾದರೂ ಮುದ್ದು ಮಕ್ಕಳ, ಸುಂದರ ಹೂವುಗಳ ಅಥವಾ ಪ್ರಕೃತಿಯ ರಮ್ಯ ಚಿತ್ರವಿರುವ ಶುಭಾಶಯಗಳನ್ನು ಕಳಿಸಿದರೆ ಅದನ್ನು ನೋಡಿದವರ ಮನಸ್ಸು ಮುದಗೊಳ್ಳುತ್ತದೆ. ಹೀಗೆ ಮನಸ್ಸನ್ನು ಮುದಗೊಳಿಸುವ ಚಿತ್ರಗಳ ನಡುವೆ ಒಂದೊಂದು 'ಜೀವನಮುಖಿ' ಸಂದೇಶ ನೀಡುವ, ನೆನಪನ್ನು ತರುವ ಚಿತ್ರವನ್ನೂ ಕಳಿಸಿದರೆ ಇನ್ನೂ ಸೊಗಸಲ್ಲವೇ.

ಹಿಂದೊಮ್ಮೆ ಜಗತ್ತಿನ ಮಹೋನ್ನತ ಕಾದಂಬರಿ 'ತಾಯಿ'ಯನ್ನು 'ಸಮುದಾಯ' ರಂಗದ ಮೇಲೆ ನಾಟಕವಾಗಿ ತಂದು ಜನಮನ ಸೂರೆಗೊಂಡಿತ್ತಲ್ಲವೇ? ಅದರದ್ದೇ ಚಿತ್ರಗಳು, ಶುಭಾಶಯ ಪತ್ರಗಳ ಮೇಲೆ. ಇಂತಹ ಎರಡು





ಶುಭಾಶಯ ಪತ್ರಗಳಿವೆ. ಮೇಲೆ ಇಂತಹ ಚಿತ್ರ ಮುದ್ರಣಗೊಂಡಿರುವ ಪೆನ್ ಇತ್ಯಾದಿ ಇಡಲು ಬಳಸಬಹುದಾದ ವಿವಿದೋದ್ದೇಶ ಕಾಫಿ ಕಪ್ ಸಹ ಲಭ್ಯವಿದೆ. ಕುವೆಂಪು, ತೇಜಸ್ವಿ, ಕೆ.ವಿ.ಸುಬ್ಬಣ್ಣ ಮುಂತಾದವರ ಚಿತ್ರವುಳ್ಳ ಕಪ್‌ಗಳನ್ನು ಸಹ ಹೊರತರಲಾಗಿದೆ. ಕವಿ.ಪು.ತಿ.ನ. ಅವರ ಚಿತ್ರವಿರುವ ಶುಭಾಶಯ ಪತ್ರವು ಇತ್ತೀಚಿಗೆ ಹೊರಬಂದಿದೆ. ಬೆಲೆ : ಶುಭಾಶಯ ಪತ್ರ ರೂ:10.00 ಹೆಚ್ಚು ಖರೀ[illegible] ಮಾಡುವವರಿಗೆ ರಿಯಾಯಿತಿ ಇದೆ. ಇವನ್ನು 'ಮೇ ಫ್ಲವರ್ ಮೀಡಿಯಾ ಹೌಸ್' ಹೊರತಂದಿದೆ.

ಆಸಕ್ತರು ಸಂಪರ್ಕಿಸಬಹುದಾದ ವಿಳಾಸ : ಮೇ ಫ್ಲವರ್ ಮೀಡಿಯಾ ಹೌಸ್, ನಂ. 1, ಯುನಿಟ್ 5, ಒಂದನೇ ಮಹಡಿ, ಯಮುನಾಬಾಯಿ ರಸ್ತೆ, ಮಾಧವನಗರ, ಬೆಂಗಳೂರು-01
ಫೋನ್ :080 -22374436
ಇ ಮೇಲ್ : mayflowermh@gmail.com

ಕಾನೂನು ಸುವ್ಯವಸ್ಥೆಯ ಖಾಸಗೀಕರಣ

ಕ್ಯಾತೆ — ಶ್ರೀ

ಚರ್ಚುಗಳ ಮೇಲೆ ಧಾಳಿ ಆಯಿತು ಈಗ ಪಬ್ಬುಗಳ ಮೇಲೆ ಧಾಳಿ. ಅದನ್ನು ಸಮರ್ಥಿಸುವ ಗ್ರಹ ಸಚಿವ ಮತ್ತು ಮುಖ್ಯ ಮಂತ್ರಿ! ನಾವು ಏನು ಮಾತಾಡಿದರೂ ವಿವಾದ ಆಗುತ್ತಲ್ಲ ಯಾಕೆ ಎಂದು ಪೇಜಾವರ ಮಠಾಧೀಶರು ಪೇಚಾಡಿದ ಹಾಗೆ, ನಾವು ನಮ್ಮ ಬಾಲಕರ ಕೈಲಿ ಏನು ಮಾಡಿಸಿದರೂ ವಿವಾದ ಆಗುತ್ತಲ್ಲ ಯಾಕೆ ಅಂತ ಕಮಲ ತನಯರು ಚಿಂತಾಕ್ರಾತರಾಗಿದ್ದರು. ಇವರ ಚಿಂತೆಯನ್ನು ಹೋಗಲಾಡಿಸಲು ಉನ್ನತ ಮಟ್ಟದ ನಿಕ್ಕರ್ ಸಮಿತಿಯ ಚಿಂತನ ಬೈಠಕ್ ಇತ್ತೀಚೆಗೆ ನಡೆಯಿತು.

ಮೊದಲಿಗೆ ಭಯೋತ್ಪಾದನೆ ವಿರೋಧಿ ಕಾರ್ಯಕ್ರಮದ ಹೆಸರಲ್ಲಿ ನಿಕ್ಕರ್ ಮಕ್ಕಳಿಗೆ ಹಾಡು, ಹಸೆ, ಮಿಮಿಕ್ರಿಗಳಿಗಾಗಿ ಐದು ಕೋಟಿ ದಾನ ಧರ್ಮ ಮಾಡಿದ್ದಕ್ಕಾಗಿ ಬೈಠಕ್ ಸರ್ಕಾರವನ್ನು ಅಭಿನಂದಿಸಿತು. ಭಯೋತ್ಪಾದನೆ ನಿಂತು ಹೋದರೂ, ಅನುದಾನವನ್ನು ನಿಲ್ಲಿಸದೇ, ಪರಿವಾರ ಪಡೆಗೆ ಪ್ರತೀ ವರ್ಷ ಯಾವುದಾದರೂ ಹೆಸರಲ್ಲಿ ಹೆಚ್ಚಿಸುತ್ತಾ ಹೋಗಲಿ ಎಂದು ಸಮಿತಿ ಆದೇಶಿಸಿತು.

ಈ ನಿಕ್ಕರ್ ಸಮಿತಿಯ ಬೈಠಕ್‌ನ ಕೆಲವು ನಿರ್ಣಯಗಳು ಹೀಗಿವೆ:

1) ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಖಾಸಗೀಕರಣಗೊಳಿಸಬೇಕು.

2) ಕಾನೂನು ಸುವ್ಯವಸ್ಥೆಯನ್ನು ರಾಮ ಸೈನ್ಯ/ಹನುಮ ಸೈನ್ಯಗಳಿಗೇ ಕೊಡಬೇಕು. (ಈ ನಿರ್ಣಯಗಳಿಗೆ ಸಮರ್ಥನೆ ಏನೆಂದರೆ, ಈಗಿರುವ ಪೋಲೀಸರಿಗೆಲ್ಲ ಹೊಟ್ಟೆ ಬಂದು ಓಡಲಾಗುವುದಿಲ್ಲ. ರಾಮ/ಹನುಮ ಸೈನಿಕರು ದಿನಾ ದಂಡಾಭ್ಯಾಸ ಮಾಡುವುದರಿಂದ ಹುಡುಗಿಯರನ್ನೂ ಬಿಡದಂತೆ ಅಟ್ಟಾಡಿಸಿಕೊಂಡು ಹೋಗಿ ಸರಿಯಾಗಿ ಗೂಸಾ ಕೊಡಬಲ್ಲರು).

3) ರಾಜ್ಯದಲ್ಲಿ ಮಹಿಳೆಯರು ಕಡ್ಡಾಯವಾಗಿ ಕೇಸರೀ ಬಣ್ಣದ 'ಬುರ್ಖಾ' ಧರಿಸಬೇಕು. ಕೇಸರಿ ಬುರ್ಖಾ ಧರಿಸದೆ ಬೀದಿಗಿಳಿವ ಮಹಿಳೆಯರನ್ನು ರಾಮ/ಹನುಮ ಸೈನಿಕರು ಕಂಡಲ್ಲಿ ಥಂಡಾಡಬಹುದು ಎಂದು 'ಫತ್ವಾ' ಹೊರಡಿಸಬೇಕು. ('ಬುರ್ಖಾ' ಹಾಗೂ 'ಫತ್ವಾ' ಎಂಬ ಅನ್ಯ ಧರ್ಮೀಯ ಪದಗಳ ಬದಲು ಅದಕ್ಕೆ ಸರಿಯಾದ ಕನ್ನಡ/ಸಂಸ್ಕೃತ ಶಬ್ದವನ್ನು ಠಂಕಿಸಲು 'ವಿಕೃತ ಕರ್ನಾಟಕ'ಪತ್ರಿಕೆಯ ಚೊಟ್ಟರಿಗೆ ಸುಪಾರಿ ಕೊಡಬೇಕು)

4) ಶಾಲೆ ಕಾಲೇಜು ಕಲಿತರೆ ಕ್ಲಬ್ಬು ಪಬ್ಬುಗಳಿಗೆ ಹೋಗುತ್ತಾರೆ. ಆದ್ದರಿಂದ ಹೆಣ್ಣು ಮಕ್ಕಳಿಗೆ ಶಾಲಾ ಕಾಲೇಜು ವಿದ್ಯಾಭ್ಯಾಸ ನಿಲ್ಲಿಸಬೇಕು. ಅವರಿಗೆ ಬರೀ ಲಲಿತಾ ಸಹಸ್ರನಾಮ ಸೌಂದರ್ಯ ಲಹರಿ ಮುಂತಾದುವುಗಳನ್ನು ಕಲಿಸಬೇಕು. ಕುಡಿತದ ಅಮಲಿಗಿಂತ ಈ ಧರ್ಮದ ಅಮಲು ಎಷ್ಟು ಸೊಗಸು ಎಂಬುದನ್ನು ಅವರ ಅನುಭವಕ್ಕೆ ತರಬೇಕು.

5) ಪಬ್ಬುಗಳನ್ನು ರಾಮ/ಹನುಮ ಸೈನಿಕರಿಗೆ ಹಸ್ತಾಂತರ ಮಾಡಬೇಕು. ಅಲ್ಲಿ ಗಂಡಸರು (?) ಸೋಮರಸವನ್ನು ಹೀರುತ್ತಾ, ಹೆಂಗಸರು ಅದರ ಹತ್ತಿರ ಬರದ ಹಾಗೆ ಕಾವಲು ಕಾಯಬಹುದು.

6) ದೇವಸ್ಥಾನಗಳನ್ನು ಮಠಗಳಿಗೆ ಗಿಫ್ಟ್ ಕೊಟ್ಟಂತೆ, ಚರ್ಚುಗಳನ್ನೂ ಮಠಗಳಿಗೆ ಗಿಫ್ಟ್ ಕೊಡಬೇಕು. ಅಲ್ಲಿ ಭಗವದ್ಗೀತೆಯನ್ನು ವಾಚನ ಮಾಡಿಸಬೇಕು.

7) ರೈತರ ಹೆಸರಿನಲ್ಲಿ ಪಕ್ಷದ ಕಾರ್ಯಕರ್ತರನ್ನು ವಿದೇಶಗಳಿಗೆ ಕಳುಹಿಸಿದ ಹಾಗೇ, ರಾಮ/ಹನುಮ ಸೈನಿಕರನ್ನು ಕಾನೂನು ಸುವ್ಯವಸ್ಥೆ ಅಧ್ಯಯನಕ್ಕಾಗಿ ವಿದೇಶಗಳಿಗೆ ಕಳುಹಿಸಬೇಕು.

8) ಚರ್ಚುಗಳ ಮೇಲೆ, ಪಬ್ಬುಗಳ ಮೇಲೆ, ಹೆಣ್ಣು ಮಕ್ಕಳ ಮೇಲೆ ಅತ್ಯುತ್ತಮ ಧಾಳಿ ಮಾಡಿದ ರಾಮ/ಹನುಮ ಸೈನಿಕರಿಗೆ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಬೇಕು. (ಕಾನೂನು ಸುವ್ಯವಸ್ಥೆ ಜವಾಬ್ದಾರಿಯನ್ನು ಅವರಿಗೇ ನೀಡಿರುವುದರಿಂದ ಇದನ್ನು 'ಧಾಳಿ' ಎನ್ನದೇ 'ಕರ್ತವ್ಯ ನಿರ್ವಹಣೆ' ಎಂದು ಕರೆಯಬೇಕು)

9) ಲೋಕಾಯುಕ್ತರಿಗೆ ಸಿಗದ ಹಾಗೆ ಆಸ್ತಿ ಮಾಡುವುದು ಹೇಗೆ ಎಂಬ ಬಗ್ಗೆ ಹಿರಿಯ ಕಮಲ ತನಯರು ಕಿರಿಯರಿಗೆ ತರಬೇತಿ ನೀಡಬೇಕು. ಕಮಲದ ಶಾಸಕರನ್ನು ಬಂಧಿಸಿರುವ ಲೋಕಾಯುಕ್ತರನ್ನು ಸಸ್ಪೆಂಡ್ ಮಾಡಬೇಕು.

10) ಮಾಧ್ಯಮಗಳನ್ನು ಹತೋಟಿಯಲ್ಲಿಡಲು ಕಠಿಣ ಕಾನೂನು ಜಾರಿಗೆ ತರಬೇಕು. ಸರಕಾರದ ವಿರುದ್ಧ ಚಕಾರ ಎತ್ತುವ ಮಾಧ್ಯಮಗಳನ್ನು ಸರಿಯಾಗಿ ಮಟ್ಟ ಹಾಕಬೇಕು.

ಈ ಪರಿಯಾಗಿ ಇನ್ನು ಮುಂದೆ ಹಿಡನ್ ಅಜೆಂಡಾವನ್ನು ಸಡನ್ನಾಗಿ ಜಾರಿಗೆ ತರಬೇಕು.


ಮದ್ದೂರು ಜನತೆಯ ಮೇಲೆ ಬಿಜೆಪಿ ಸರ್ಕಾರದ ಸೇಡು

ಮದ್ದೂರು ತಾಲ್ಲೂಕಿನ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ್ದ 7 ಕೋಟಿ ರೂ.ಗಳನ್ನು ವಾಪಸ್ಸು ಪಡೆದು ಮದ್ದೂರು ಜನತೆಯ ಕೆಂಗಣ್ಣಿಗೆ ಗುರಿಯಾಗಿದೆ.

ಓಲೈಸಲು

ಉಪಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಯ ಪರ ಜನತೆಯನ್ನು ಓಲೈಸಲು ತಾಲ್ಲೂಕಿನ ಅಭಿವೃದ್ಧಿಗೆ ವೆಚ್ಚ ಮಾಡಲು 7 ಕೋಟಿ ರೂ ಬಿಡುಗಡೆ ಮಾಡಿತ್ತು. ಜಿಲ್ಲಾ ಪಂಚಾಯತ್ ಮೂಲಕ ವೆಚ್ಚ ಮಾಡಲು ಯೋಜನೆ ರೂಪಿಸಿ ತಕ್ಷಣ ಕೆಲಸ ಮಾಡುವಂತೆ ಸ್ವತಃ ಮುಖ್ಯಮಂತ್ರಿಯರೇ ಆದೇಶ ನೀಡಿದರು. ಬಹುತೇಕ ರಸ್ತೆ ನಿರ್ಮಾಣ ಮತ್ತು ಅದರ ಸುಧಾರಣೆಗೆ ಖರ್ಚು ಮಾಡಲು ಯೋಜನೆ ರೂಪಿಸಲಾಗಿತ್ತು. ಅದರಂತೆ ಟೆಂಡರ್ ಪ್ರಕ್ರಿಯೆ ಶೇ.60 ಭಾಗ ಮುಗಿದು ಕೆಲವು ಕಡೆ ಕೆಲಸ ಪ್ರಾರಂಭ ಮಾಡಿದ್ದರು. ಉಪ ಚುನಾವಣೆಯಲ್ಲಿ ಬಿಜೆಪಿ ಸೋತಿದ್ದರಿಂದ ಮುಖ್ಯಮಂತ್ರಿ ಜನತೆಯ ವಿರುದ್ಧ ಸೇಡು ತೀರಿಸಿಕೊಳ್ಳಲು ಬಿಡುಗಡೆಯಾಗಿದ್ದ 7 ಕೋಟಿ ರೂ.ಗಳನ್ನು ವಾಪಸ್ಸು ಪಡೆದಿದ್ದಾರೆ. ಈ ಸಂಬಂಧ ಲಿಖಿತ ಆದೇಶವನ್ನು ಹೊರಡಿಸಿರುವ ಮುಖ್ಯಮಂತ್ರಿ ಸಚಿವಾಲಯ, ಈ ಆದೇಶವನ್ನು ಕಡೆಗಣಿಸಿ, ಕೆಲಸ ಮುಂದುವರೆಸಿದರೆ ಅದಕ್ಕೆ ಹಣವನ್ನು ನಿಮ್ಮ ಜೇಬಿನಿಂದಲೇ ವಸೂಲು ಮಾಡಲಾಗುವುದು ಎಂದು ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗೆ ಧಮಕಿ ಹಾಕಿದ್ದಾರೆ. ಇದರಿಂದ ಬೆಚ್ಚಿಬಿದ್ದ ಅಧಿಕಾರಿಗಳು ಟೆಂಡರ್ ಪ್ರಕ್ರಿಯೆಗಳನ್ನು ರದ್ದುಗೊಳಿಸಿ ಹಣ ವಾಪಸ್ಸು ಮಾಡಿದ್ದಾರೆ.

ಉಪಚುನಾವಣೆ ಹತ್ತಿರ ಬಂದಾಗ ಬಿಜೆಪಿ ಸರ್ಕಾರ ಮದ್ದೂರು ಕ್ಷೇತ್ರದಲ್ಲಿ ಹಲವು 'ಅಭಿವೃದ್ಧಿ ಯೋಜನೆ' ಆರಂಭಿಸಿತು. ಉಪ ಚುನಾವಣೆಯಲ್ಲಿ ಜನ ತೀರ್ಪು ನೀಡಿ ಕ್ಷೇತ್ರದಲ್ಲಿ ಜೆಡಿ(ಎಸ್) ಪಕ್ಷವನ್ನು ಗೆಲ್ಲಿಸಿದರು. ಈಗ 'ಅಭಿವೃದ್ಧಿ' ಯೋಜನೆಗಳನ್ನು ರದ್ದು ಮಾಡಿ ಸ್ವತಃ ಮುಖ್ಯಮಂತ್ರಿಗಳೇ ಆದೇಶ ಹೊರಡಿಸಿದ್ದಾರೆ. ಬಿಜೆಪಿ ಪಕ್ಷಕ್ಕೆ ಜನರ ತೀರ್ಪು ಹಾಗೂ ಪ್ರಜಾಪ್ರಭುತ್ವದ ಬಗ್ಗೆ ಎಷ್ಟು ಗೌರವವಿದೆ ಎಂಬುದಕ್ಕೆ ಹಾಗೂ ಇವರು ಬಡಬಡಿಸುತ್ತಿರುವ 'ಅಭಿವೃದ್ಧಿ' ಯ ನಿಜ ಬಣ್ಣ ಏನು ಎಂಬುದಕ್ಕೆ ಇದೊಂದು ಜೀವಂತ ಸಾಕ್ಷಿಯಾಗಿದೆ.



'ತುಂಡು ಗುತ್ತಿಗೆ ಅಗ್ರಿಮೆಂಟ್ ಮೇಲೆ ಈ ಹಣ ಬಿಡುಗಡೆ ಮಾಡಿತ್ತು. ಈಗ ಏಕಾಏಕಿ ವಾಪಸ್ಸು ಕೇಳಿದರೆ ಸಾಲ-ಸೋಲ ಮಾಡಿ ಕೆಲಸ ಪ್ರಾರಂಭಿಸಿರುವ ಗುತ್ತಿಗೆದಾರರು ನೇಣು ಹಾಕಿಕೊಳ್ಳಬೇಕಾಗುತ್ತದೆ. ಅವರೆಲ್ಲ ಬಂದು ನಮ್ಮನ್ನು ದಬಾಯಿಸುತ್ತಿದ್ದಾರೆ. ಕೆಲಸ ನಿಲ್ಲಿಸಿ ಹಣ ವಾಪಸ್ಸು ಮಾಡಿ ಎಂದು ಮುಖ್ಯಮಂತ್ರಿ ಲಿಖಿತ ಆದೇಶ ನೀಡಿದ್ದಾರೆ. ನಾವು ಸರ್ಕಾರ ಹೇಳಿದಂತೆ ಕೇಳಬೇಕಾಗಿದೆ' ಎಂದು ಹೆಸರು ಹೇಳಲಿಚ್ಛಿಸದ ಮಂಡ್ಯ ಜಿಲ್ಲಾ ಪಂಚಾಯತ್‌ನ ಯೋಜನಾ ವಿಭಾಗದಲ್ಲಿ ಕೆಲಸ ಮಾಡುವ ಅಧಿಕಾರಿ ಹತಾಶರಾಗಿ ಹೇಳುತ್ತಾರೆ.

ಸಚಿವಾಲಯದ್ದೇ ಆದೇಶ

ಈ 7 ಕೋಟಿ ರೂ.ಗಳಲ್ಲಿ ಬಹುಪಾಲು ಗ್ರಾಮೀಣ ಭಾಗದ ರಸ್ತೆ ಕಾಮಗಾರಿಗಳಿಗೆ ವೆಚ್ಚ ಮಾಡಲು ಉದ್ದೇಶಲಾಗಿತ್ತು. ಆ ಪ್ರಕಾರ ಯೋಜನೆ ತಯಾರಿಸಿ, ಅಗ್ರಿಮೆಂಟ್‌ನಂತೆ ತುಂಡು ಗುತ್ತಿಗೆಯ ಮೂಲಕವೇ ಕೆಲಸ ನಿರ್ವಹಿಸಲು ಟೆಂಡರ್ ಕರೆಯಲಾಗಿತ್ತು. ಸ್ವತಃ ಮುಖ್ಯಮಂತ್ರಿ ಸಚಿವಾಲಯವೇ ತುಂಡು ಗುತ್ತಿಗೆ ನೀಡಲು ನಿರ್ದಿಷ್ಟವಾಗಿ ಸೂಚಿಸಿತ್ತು ಎಂದು ಕೂಡ ತಿಳಿಸಿದರು.

ತುಂಡು ಗುತ್ತಿಗೆ ನೀಡಿ, ಹೆಚ್ಚಿನ ಜನರಿಗೆ ಕೆಲಸ ಕೊಡುವ ಮೂಲಕ ಗ್ರಾಮಗಳ ಪ್ರಭಾವಿ ಮುಖಂಡರುಗಳನ್ನು ಒಲಿಸಿಕೊಂಡು ಗೆಲ್ಲುವ ನಿರ್ದಿಷ್ಟ ತಯಾರಿಯ ಭಾಗವಾಗಿಯೇ ಕಾಮಗಾರಿಗೆ 'ತುಂಡು ಗುತ್ತಿಗೆ' ಷರತ್ತು ಇತ್ತು ಎನ್ನುವುದು ಸ್ವಯಂವೇದ್ಯ.

ಮದ್ದೂರು ಉಪಚುನಾವಣೆಯಲ್ಲಿ ಬಿಜೆಪಿ ಸೋತನಂತರ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಕೋಪ ಬಂದಿದೆ. 'ಅಭಿವೃದ್ಧಿಗೆ ಎಲ್ಲರೂ ಸಹಕರಿಸಬೇಕು. ಯಾರೂ ರಾಜಕಾರಣ ಮಾಡಬಾರದು' ಎಂದು ಯಾವಾಗಲೂ 'ಹಿತವಚನ' ಹೇಳುವ ಮುಖ್ಯಮಂತ್ರಿ ಸ್ವತಃ ಸೇಡಿನ ರಾಜಕಾರಣಕ್ಕೆ ಇಳಿದಿದ್ದಾರೆ. ಎಲ್ಲಾ ಹಣವನ್ನು ವಾಪಸ್ಸು ಕೇಳಿದ್ದಾರೆ. ಈ ಸಂಬಂಧ ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಹಣ ವಾಪಸ್ಸು ಮಾಡಲು ತುಂಡು ಗುತ್ತಿಗೆಯೇ ಕಾರಣ ಎಂದು ಹೇಳಿಕೆ ನೀಡಿದ್ದಾರೆ. ಈ ರೀತಿ ಎರಡು ನಾಲಿಗೆಯಿಂದಾಗಿ ಮದ್ದೂರು ಹಾಗೂ ರಾಜ್ಯದ ಜನರ ಎದುರು ಹಾಸ್ಯಸ್ಪದವಾಗಿ ಮಾರ್ಪಟ್ಟಿದ್ದಾರೆ. ವಚನಭ್ರಷ್ಟತೆ ಬಗೆಯ ಊಳಿಟ್ಟು, ಬೊಬ್ಬೆ ಹಾಕಿ, ಅಧಿಕಾರಕ್ಕೆ ಬಂದ ಸರ್ಕಾರದ ವಚನ ಭ್ರಷ್ಟತೆ, ಅಭಿವೃದ್ಧಿ ವಿರೋಧಿ ಸೇಡಿನ ರಾಜಕಾರಣದ ವಿರುದ್ಧ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

■ ವರದಿಗಾರ

ಸಿಕ್ಕಿಬಿದ್ದ ಸಂಪಂಗಿ.....

ಪುಟ 3 ರಿಂದ

ಮಾತನಾಡಿದಾಗ 5 ಲಕ್ಷ ರೂಪಾಯಿಗಳನ್ನ ತನಗೆ ನೀಡಿದಲ್ಲಿ ಕೆಲಸ ಮಾಡಿಕೊಡುವುದಾಗಿ ಒ[illegible]ವಾಗಿದೆ. ಅದರಂತೆ ವ್ಯವಸ್ಥೆ ಮಾಡಿಕೊಂಡು ಫಾರೂಕ್ ಲೋಕಾಯುಕ್ತರಿಗೆ ದೂರು ನೀಡಿದ್ದಾನೆ. [illegible]ದೊಂದಿಗೆ ಬರುವ ಬಗ್ಗೆ, ಕೆಲಸ ಮಾಡಿಸಿಕೊಡಬೇಕೆಂಬ ಮಾತುಕತೆ ಹಣಕೊಟ್ಟ ನಂತರ ಪೋಲಿಸ್ ಅಧಿಕಾರಿಗೆ 'ಬುಲಾವ್' ಇತ್ಯಾದಿ. ಮೊಬೈಲ್ ಫೋನ್‌ನಲ್ಲಿ ಧ್ವನಿ ಮುದ್ರಿತವಾಗಿದೆ. ಅಂದರೆ ಶಾಸಕ-ಅಧಿಕಾರಿಗಳು ಸೇರಿ ಜನರನ್ನು ಪೀಡಿಸಿ ಹಣ ಲುಡಿ ಹೊಡೆಯುವ ವ್ಯವಸ್ಥಿತ ಜಾಲವಿದು ಹೀಗಾದಲ್ಲಿ ಸಾಮಾನ್ಯ ಜನರತ್ತ ಇಂತವರು ನೋಡುವುದಾದರೂ ಹೇಗೆ ಸಾಧ್ಯ. ಬಿಜೆಪಿ ಸರ್ಕಾರದಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿರುವುದರ ನಿತ್ಯ ನಡೆಯುವ ನಗ್ನ ನಿರ್ದಶನ ಈ ಪ್ರಕರಣವಾಗಿದೆ.

ಬಿಜೆಪಿ ಬಿನ್ನತೆ?

ತತ್ವನಿಷ್ಠ, ಶುದ್ಧ ವಿಭಿನ್ನ ಪಕ್ಷವೆಂದಲ್ಲಾ ಹೇಳಿಕೊಳ್ಳುತ್ತಿರುವ ಬಿಜೆಪಿ ಪಕ್ಷದ ಶಾಸಕರೊಬ್ಬ ಹೀಗೆ ಲಂಚ ಪಡೆಯುತ್ತಿದ್ದಾಗಲೇ ಸಿಕ್ಕಿ ಬಿದ್ದಿರುವುದು ಆ ಪಕ್ಷ, ಅದರ ಶಾಸಕರು ತಲುಪಿರುವ, ಅನೈತಿಕ ಅಧಃಪತನದ ಮತ್ತೊಂದು ಉದಾಹರಣೆಯಾಗಿದೆ. ಈ ಘಟನೆಯಿಂದ ತಮಗೆ ನಾಚಿಕೆಯಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿರುವುದು, ಅವರನ್ನು ತಕ್ಷಣ ದೆಹಲಿಯಿಂದಲೇ ಪಕ್ಷದಿಂದ ಅಮಾನತ್ತು ಮಾಡಿರುವುದಾಗಿ ರಾಜ್ಯಾಧ್ಯಕ್ಷರು ಹೇಳಿರುವುದೇನೋ ಸರಿ, ಆದರೆ ಅಂತಿಮ ಫಲಿತಾಂಶ ಏನು ಎಂಬುದೇ ಮುಖ್ಯ. ಆದರೆ ಹೀಗೆ ಬಿಜೆಪಿ ನಾಚಿಕೆ ಪಡಲು ಎಷ್ಟೊಂದು ವಿಷಯಗಳಿವೆ.! ಇದೇ ಮಹಾ ಪಕ್ಷದ ಎಂ.ಪಿಗಳು ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆಯಲಿಲ್ಲವೇ. ಕಾರ್ಗಿಲ್ ಯೋಧರ ಶವ ಪೆಟ್ಟಿಗೆಯಲ್ಲು ಹಣ ಪಡೆಯಲಿಲ್ಲವೆ. ಪರ ಪತ್ನಿಯನ್ನು ತನ್ನವಳೆಂದು ಸುಳ್ಳು ಹೇಳಿ ವಿದೇಶಕ್ಕೆ ಸಾಗಿಸುವ ಜಾಲದಲ್ಲಿ ಸಿಲುಕಲಿಲ್ಲವೆ. ಇಂತಹ ಪಕ್ಷದಲ್ಲಿ ಇನ್ನೆಂತವರು ಇರುವುದು ಸಾಧ್ಯ.

ದೇಶದಲ್ಲಿ ಶಾಸಕನೊಬ್ಬ ಹೀಗೆ ಲೋಕಾಯುಕ್ತರ ಬಲೆಗೆ ಬಿದ್ದಿರುವುದು ಮೊಟ್ಟ ಮೊದಲ ಪ್ರಕರಣ. ಹೀಗೆ ನೋಡಿದರೆ ಬಿಜೆಪಿ ಪಕ್ಷವೇ ಇಂತಹ ಭ್ರಷ್ಟ, ಅಕ್ರಮ ಅನೈತಿಕ ಮಾರ್ಗಗಳಿಂದಲೇ ಅಧಿಕಾರ ಹಿಡಿದದ್ದು ಅಧಿಕಾರ ಹಿಡಿದಿದ್ದು, ಆಪರೇಷನ್ ಕಮಲದ ಮೂಲಕ ಗಟ್ಟಿ ಮಾಡಿಕೊಂಡಿದ್ದು ಹೇಗೆ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ. ಮುಖ್ಯಮಂತ್ರಿಗೆ ನಾಚಿಕೆಯಾಗಿದೆ ಎನ್ನುವುದರ ಹಿಂದೆ ಶಾಸಕ ಹೀಗೆ ಹೋಗಿ ಹೋಗಿ ಹೀಗೆ ಸಿಕ್ಕಿ ಬಿದ್ದನಲ್ಲಾ ಎಂಬ ಹಳಹಳಿಕೆ ಇದೆಯೇ ಎಂಬ ಅನುಮಾನ ಕಾಣುತ್ತಿದೆ. ಕಾರಣ ಹೀಗೆ ನೈತಿಕತೆಯ ವಿಶಿಷ್ಟ ಪಾಠ ಹೇಳುವ ಇವರೆಲ್ಲಾ ಆ ಶಾಸಕನನ್ನು ಈ ಪ್ರಕರಣದಿಂದ ಹೊರ ತರುವುದು ಹೇಗೆ, ತಮಗೆ ಹತ್ತಿದ ಮಸಿಯನ್ನು ನಾಜೂಕಾಗಿ 'ದೃಷ್ಟಿಬೊಟ್ಟಾಗಿ' ಪರಿವರ್ತಿಸುವುದು ಹೇಗೆ ಎಂಬುದರಲ್ಲಿ ಈಗ ತಮ್ಮ ಕೌಶಲ್ಯ, ಆಡಳಿತದ ಪ್ರಭಾವ, ಇತ್ಯಾದಿಗಳ ಕಸರತ್ತು ನಡೆಸಲಾಗುತ್ತಿದೆ. ಇದರ ಭಾಗವಾಗಿಯೇ ಲೋಕಾಯುಕ್ತರಿಗೆ ದೂರು ನೀಡಿದ್ದಾತನ ಮೇಲೆಯೇ ಆರೋಪದ ಸುರಿಮಳೆ ಮಾಡಲಾಗುತ್ತಿದೆ. ಸಂಪಂಗಿ ಬೆಂಬಲಿಗರೂ ಕೊಲೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಫಾರೂಕ್ ದೂರು ನೀಡಿದ್ದಾನೆ. ಮಾತ್ರವಲ್ಲ ಬಿಜೆಪಿ ಶಾಸಕರಾದ ರೇಣುಕಾಚಾರ್ಯ, ಡಿ.ಎಸ್.ವೀರಯ್ಯ ಮುಂತಾದವರ ದಂಡು ಲೋಕಾಯುಕ್ತರ ಮೇಲೆ ರೇಗಾಡಿದೆ! ಹೀಗೆ ಸರಕಾರ ತನ್ನ ಶಾಸಕನನ್ನು ಹೇಗೆ ರಕ್ಷಿಸಬಹುದು ಎಂಬುದರ ಬಗ್ಗೆ ಹೊಸ ತಂತ್ರ ರೂಪಿಸುತ್ತಿರುವ ಸ್ಪಷ್ಟ ಸಂಕೇತಗಳು ಹೊರ ಬೀಳುತ್ತಿವೆ. ಆರಂಭದಲ್ಲಿ ವಿಧಾನಸಭಾಧ್ಯಕ್ಷರು ಕ್ರಮವಹಿಸುವ ಕುರಿತು ಮೊದಲು ಮಾತನಾಡಿದರಾದರೂ ನಂತರ ಲೋಕಾಯುಕ್ತರ ಕ್ರಮದ ನಂತರ, ತಾವೂ ಒಂದು ಸಮಿತಿ ರಚಿಸಿ ಪರಿಶೀಲಿಸುವುದಾಗಿ ಹೇಳುತ್ತಿದ್ದಾರೆ.

ಅಂತೂ ಭ್ರಷ್ಟಚಾರದಲ್ಲಿ ಮುಳಿಗೆದ್ದ ಅಧಿಕಾರಿಗಳನ್ನು ಹೊರೆಗೆಳೆದಿದ್ದ ಲೋಕಾಯುಕ್ತ ನ್ಯಾ.ಸಂತೋಷ್‌ಹೆಗ್ಡೆ ಮತ್ತವರ ತಂಡ ಶಾಸಕರ ಭ್ರಷ್ಟಾಚಾರವನ್ನೇ ನಿರ್ದಶನದ ಮೂಲಕ ಹೊರತಂದು ಮತ್ತೊಮ್ಮೆ ಸಾರ್ವಜನಿಕ ಎದುರು ವಾಸ್ತವ ತೆರದಿದ್ದು ಶ್ಲಾಘನೀಯ.

ಎಚ್ಚರವಿರಲಿ

ರಾಜ್ಯದಲ್ಲಿ ಅಧಿಕಾರ ಹಿಡಿತದಿರುವ ಬಿಜೆಪಿ ಮನಬಂದಂತೆ ಸಾರ್ವಜನಿಕ ಸ್ವತ್ತುಗಳ ಲೂಟಿ, ಅಕ್ರಮಗಳಲ್ಲಿ ತೊಡಗಿದೆ. ವರ್ಗಾವಣೆಯನ್ನೂ ದಂಧೆಯಾಗಿಸಿದೆ, ಅಭಿವೃದ್ಧಿ ಹೆಸರಿನಲ್ಲಿ ಅಪಾರ ಹಣ, ನಾಯಕರಿಗೂ, ಹಿಂಬಾಲಕರಿಗೂ ಆಹಾರ ಒದಗಿಸಿದೆ. ಇವನ್ನು ಮುಚ್ಚಿಕೊಳ್ಳಲು ಕೋಮುವಾದ ಬೆಳೆಸುತ್ತಿದೆ. ಈಗ ಇದೇ ಪಕ್ಷ ಕೇಂದ್ರದಲ್ಲಿಯು ಅಧಿಕಾರ ಹಿಡಿಯಲು ಹೊಂಚು ಹಾಕಿದೆ. ಅಕ್ರಮ, ಭ್ರಷ್ಟಾಚಾರ, ಕಳಂಕಗಳ ಶಿಖರವೇ ಆಗಿರುವ ಕೋಮುವಾದಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಬಿಡಬೇಕೆ ಎಂದು ಜನತೆ ಯೋಚಿಸಬೇಕಿದೆ. ಆ ಯತ್ನ ಸೋಲಿಸಬೇಕಿದೆ.

ಇಂದಿನ ಶಾಸಕ ಸಂಪಂಗಿ ಪ್ರಕರಣ ಎಲ್ಲರಿಗೂ ಎಚ್ಚರಿಕೆಯನ್ನು ನೀಡುವಂತೆ ನಿಷ್ಠುರ ಕ್ರಮ ಜರುಗಿಸಲು ಅನುವಾಗಬೇಕು. ಕ್ರಮವಹಿಸಬೇಕು. 'ಕೇವಲ ಸಂಪಂಗಿ ಮೇಲೆ ಮಾತ್ರ ಯಾಕೆ ಕ್ರಮ ಬೇರೆಯವರ ಮೇಲು ಯಾಕಿಲ್ಲ ಎಂದು' ಸಂಪಂಗಿ ರಕ್ಷಣಾ ಸಮಿತಿ (ಸ್ವಘೋಷಿತ) ಕೇಳುತ್ತಿದೆ. ದೂರು ಬಂದರೆ ಖಂಡಿತ ಕ್ರಮವಹಿಸಲಾಗುವುದು ಎಂದು ಲೋಕಾಯುಕ್ತರು ಸ್ಪಷ್ಟಪಡಿಸಿದ್ದಾರೆ. ಇನ್ನೂ ಕೆಲವರು ಎಲ್ಲರೂ ಮಾಡೋದೆ ಇದನ್ನೆ, ಇದರಲ್ಲಿ ಏನು ವಿಶೇಷ ಎಂದೂ ಭಂಡತನ ತೋರಿಸಿದ್ದಾರೆ. ಶಾಸಕರು, ಸಚಿವರ ಮೇಲೆ ಕ್ರಮಕೈಗೊಳ್ಳಲು ಲೋಕಾಯುಕ್ತರಿಗೆ ಅಧಿಕಾರವಿಲ್ಲ ಎಂದೂ ವಾದಿಸಲಾಗುತ್ತಿದ್ದು ಅದನ್ನು ಲೋಕಾಯುಕ್ತರು ಕಳಚಿದ್ದಾರೆ. ದೂರು ನೀಡಿದರೆ ಮುಖ್ಯಮಂತ್ರಿಯವರನ್ನು ತನಿಖೆ ಮಾಡಬಹುದು ಎಂದಿದ್ದಾರೆ. ಇಂತಹ ಧೈರ್ಯದ ಮಾತುಗಳಿಂದ, ಜನ ಜಾಗೃತರಾಗಿ ಭ್ರಷ್ಟಾಚಾರವನ್ನು ಪ್ರತಿರೋಧಿಸಬೇಕಿದೆ. ಕೇವಲ ಲೋಕಾಯುಕ್ತರೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ನಾಗರಿಕ ಸರ್ಕಾರವೂ ತನ್ನ ಹೊಣೆಯನ್ನು ನಿರ್ವಹಿಸಬೇಕು. ಸರ್ಕಾರವೇ ಹಾದಿ ತಪ್ಪಿದಾಗ ಜನತೆ ಧ್ವನಿ ಎತ್ತಲೇಬೇಕು. ಈ ಹಿನ್ನೆಲೆಯಲ್ಲಿ ಲಂಚಗುಳಿತನ ಎಂಬುದು ಬಹುತೇಕ ಬಂಡವಾಳಶಾಯಿ ಪಕ್ಷಗಳ, ಅಧಿಕಾರದ ಒಂದು ಬಿಡಿಸಲಾಗದ ಅಂತರ್‌ಅಂಗ. ಇದಕ್ಕೆ ಎಡಶಕ್ತಿಗಳೇ ಭಿನ್ನ. ಪರ್ಯಾಯ ಇರುವುದೂ ಇಲ್ಲೇ. ನೆನೆಗುದಿಗೆ ಬಿದ್ದಿರುವ ಲೋಕಪಾಲ ಮಸೂದೆಯೂ ಸಂಸತ್ತಿನಲ್ಲಿ ಅಂಗೀಕಾರವಾಗುವುದು ಅತ್ಯಗತ್ಯ.

ಆನೇಗುಂದಿ ಸೇತುವೆ ಕುಸಿತ

ರಾಜಕೀಯ ದುರ್ಲಾಭಕ್ಕೆ ಬಲಿ

ನಿರ್ಮಾಣ ಹಂತದಲ್ಲಿರುವ ಸೇತುವೆ ಕುಸಿದು ಬಿದ್ದು ಹಲವಾರು ಜೀವಗಳನ್ನು ಬಲಿತೆಗೆದುಕೊಂಡಿರುವುದರಲ್ಲಿ ಏನು ಹಿತಾಸಕ್ತಿ ಅಡಗಿದೆ? ಯುನೆಸ್ಕೋ ಆಕ್ಷೇಪಗಳನ್ನೂ ಬದಿಗೆ ತಳ್ಳಿ ಕಾಮಗಾರಿಗೆ ಹೋಗುವುದರಲ್ಲಿ ಸರ್ಕಾರದ ಬೇಜವಾಬ್ದಾರಿ, ಅಧಿಕಾರಸ್ತರ ರಾಜಕೀಯ ದುರ್ಲಾಭದ ದುರಾಶೆಗಳು ಇವೆ. ಬಡವರ ಸಾವು ಸಾವೇ ಅಲ್ಲ ಎಂಬ ರೀತಿ ಸರ್ಕಾರ ವರ್ತಿಸುತ್ತಿರುವುದು ಅಮಾನವೀಯತೆಯ ಪರಮಾವಧಿಯಾಗಿದೆ.

ಪರುಶರಾಮ ಕಲಾಲ್

ಯಡಿಯೂರಪ್ಪ ಅವರ ಗುಜರಾತ್ ಮಾದರಿ ಅಭಿವೃದ್ಧಿ ಎಂದರೆ ಮಧ್ಯಯುಗಕ್ಕೆ ಇಡೀ ರಾಜ್ಯವನ್ನು ಕೊಂಡೊಯ್ಯುವುದಾಗಿದೆ ಎಂದೇ ಅರ್ಥ. ಇದನ್ನು ಹಂಪಿ ತಳವಾರ ಘಟ್ಟ-ಆನೆಗೊಂದಿ ಸೇತುವೆ ಕುಸಿತದ ಪ್ರಕರಣ ಹೇಳುತ್ತಿರುವುದು ಇದನ್ನೇ.

ಪ್ರಜಾಪ್ರಭುತ್ವದ ಅಣಕ, ಅಭಿವೃದ್ಧಿ ಹೆಸರಲ್ಲಿ ಹಣ ಲೂಟಿ, ಅತ್ಯಂತ ಕಳಪೆ ಕಾಮಗಾರಿ, ಕೇಸರಿಕರಣಗೊಂಡ ಅಧಿಕಾರಿಷಾಹಿ, ಲಂಗುಲಗಾಮ ಇಲ್ಲದ ಆಡಳಿತ, 'ಹೇಳುವುದು ಒಂದು ಮಾಡುವುದು ಮತ್ತೊಂದು' ಬಿಜೆಪಿ ಮಾದರಿ ಆಡಳಿತವನ್ನು ಹೀಗೆ ಪಟ್ಟಿ ಮಾಡುತ್ತಲೇ ಹೋಗಬಹುದು ಎನ್ನುವುದಕ್ಕೆ ಈ ಸೇತುವೆ ಕುಸಿತದ ಪ್ರಕರಣವನ್ನು ಎಳೆ ಎಳೆಯಾಗಿ ನೋಡಬೇಕಾಗುತ್ತದೆ.

ದುರಂತ ನಡೆಯಿತು ಹೀಗೆ


ಕಳೆದ ಗುರುವಾರ ಮಧ್ಯಾಹ್ನ 3ಗಂಟೆಯ ಸುಮಾರಿಗೆ ಭರದಿಂದ ಕಾಮಗಾರಿ ನಡೆಯುತ್ತಿರುವಾಗಲೇ ಸೇತುವೆ ಕುಸಿದು ಬಿತ್ತು. ಪ್ರತ್ಯಕ್ಷದರ್ಶಿಗಳು ಸೇತುವೆ ಕುಸಿತದಲ್ಲಿ ಗಾಯಗೊಂಡು ಪಾರಾದ ಕಾರ್ಮಿಕರನ್ನು ಮಾತನಾಡಿಸಿದರೆ ಇದರ ಭೀಕರ ದುರಂತದ ಅನುಭವವಾಗುತ್ತದೆ. ಅವರು ಹೇಳುವ ಒಟ್ಟು ಸಾರ ಇಷ್ಟು, '60ಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದರು. ಆಂಧ್ರ ಹಾಗೂ ಬಿಹಾರದಿಂದ ಬಂದಿದ್ದ ಕೆಲಸಗಾರರೇ ಮುಖ್ಯ ಕೆಲಸ ಮಾಡುತ್ತಿದ್ದರು. ನಾವು ಅವರ ಸಹಾಯಕರಾಗಿ 150ರೂ. ಕೂಲಿ ಪಡೆಯುವ ದಿನಗೂಲಿಗಳಾಗಿದ್ದೆವು. ಮುಖ್ಯ ಕೆಲಸ ಮಾಡುವಲ್ಲಿ ನಮ್ಮನ್ನು ಬಿಡುತ್ತಿರಲಿಲ್ಲ. ಅಲ್ಲಿ ಭಾರಿ ಯಂತ್ರಗಳು, ಒಂದು ಲಾರಿ, ಟಾಟಾ ಸುಮೋ ಸೇರಿದಂತೆ ಆಂಧ್ರ-ಬಿಹಾರ ಕಾರ್ಮಿಕರೇ ಕೆಲಸ ಮಾಡುತ್ತಿದ್ದರು. ಭಾರಿ ಸಪ್ಪಳ ಕೇಳಿ ಬಂತು ನೋಡುತ್ತಿದ್ದಂತೆ ಎಲ್ಲವೂ ನದಿಗೆ ಕುಸಿದು ಹೋಯಿತು. ಇದರಲ್ಲಿ ಕಾರ್ಮಿಕರು ಸೇರಿ ಹೋದರು. ಯಂತ್ರಗಳು, ವಾಹನಗಳು, ಜನರು ಎಲ್ಲರೂ ಜಲಸಮಾಧಿಯಾದರು.' ಆದರೆ ನಮ್ಮ ಮಾಧ್ಯಮಗಳು ಕೇವಲ ಅಧಿಕಾರಿಗಳು ಹೇಳುವುದನ್ನು ಮಾತ್ರ ಬರೆದು ಕೃತಜ್ಞರಾದರು. ಕೆಲವು ಪತ್ರಿಕೆಗಳು ಇದನ್ನು ಬಿಟ್ಟು ಜನರನ್ನು ಮಾತನಾಡಿಸಿ ಸತ್ಯ ವರದಿ ನೀಡಿದ ಪ್ರಯತ್ನ ಕೂಡಾ ನಡೆದಿದೆ.



ಹಂಪಿ ತಳವಾರ ಘಟ್ಟ-ಆನೆಗೊಂದಿ ಸೇತುವೆ ಕುಸಿದ ನಂತರ ಕಂಡಿದ್ದು ಹೀಗೆ

ಬಿಹಾರ-ಆಂಧ್ರ ಕಾರ್ಮಿಕರು ಏನಾದರು?

ಈ ದುರಂತವನ್ನು 'ವಂಡರ್' ಎಂದೇ ಯಾವ ಎಗ್ಗಿಲ್ಲದೇ ಕರೆದು, ಸತ್ತವರು ಕೇವಲ ಏಳು ಜನ ಎಂದೇ ಹೇಳಿಕೆ ನೀಡುವ ಅಧಿಕಾರಿಗಳ ವರ್ಗ ಇದನ್ನು ಪುರಸ್ಕರಿಸುವ ಸರ್ಕಾರ ಇಡೀ ಘಟನೆಯಲ್ಲಿ ಬಿಹಾರ-ಆಂಧ್ರ ಮುಖ್ಯ ಕೆಲಸಗಾರ ಕಾರ್ಮಿಕರು ಎಲ್ಲಿದ್ದಾರೆ? ಎಂಬ ಪ್ರಶ್ನೆಗೆ ಈಗಲೂ ಉತ್ತರ ಸಿಗುತ್ತಿಲ್ಲ. ಸತ್ತ 8 ಜನರ ಶವಗಳು ಈಗ ದೊರಕಿವೆ. ಅವರೆಲ್ಲಾ ಸಹಾಯಕ ಕೆಲಸ ಮಾಡುತ್ತಿದ್ದ ಆನೆಗೊಂದಿ ಹಾಗೂ ವೆಂಕಟಾಪುರ ಗ್ರಾಮಕ್ಕೆ ಸೇರಿದವರು. ಬದುಕು ನೂಕಿದ ಕಡೆ ಹೊಟ್ಟೆಪಾಡಿಗೆ ಕೂಲಿಯನ್ನಾರಿಸಿಕೊಂಡು ಬಂದಿದ್ದ ಹೊರ ರಾಜ್ಯದ ಕಾರ್ಮಿಕರು ಜಲಸಮಾಧಿಯಾಗಿ ಈ ಲೋಕದಿಂದಲೇ ಕಾಣೆಯಾಗಿದ್ದಾರೆ. ವಿಳಾಸವಿಲ್ಲದ ಈ ಜನ ಈಗ ತಮ್ಮ ಚಹರೆಯನ್ನು ಸಹ ಕಳೆದುಕೊಂಡು ಚರಾಚರ ವಸ್ತುಗಳಲ್ಲಿ ಲೀನವಾಗಿ ಬಿಟ್ಟಿದ್ದಾರೆ. ಇವರು ಯಾರೂ ಈಗ ಇಲ್ಲಿಗೆ ಬಂದಿಲ್ಲ, ಕೆಲಸವೂ ಮಾಡಿಲ್ಲ. ಸರ್ಕಾರ ಇವರನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಬಡವರ ಸಾವು ಕೂಡಾ ಸಾವೇ ಅಲ್ಲ ಎನ್ನುವಂತೆ ಈ ಘಟನೆ ನಮ್ಮ ಸಂವೇದನೆಗಳನ್ನು ಎಷ್ಟು ಮೊಂಡು ಮಾಡಿದೆ ಎನ್ನುವುದಕ್ಕೆ ಸಹ ಉದಾಹರಣೆಯಾಗಿ ಹೋಗಿದೆ.



ಹಂಪಿ ತಳವಾರ ಘಟ್ಟ-ಆನೆಗೊಂದಿ ಸೇತುವೆ ಪೂರ್ಣವಾಗದೇ ಇದ್ದ ಸ್ಥಿತಿ

ಸೇತುವೆ ಯಾಕೇ ಕುಸಿಯಿತು?

ಕಳಪೆ ಕಾಮಗಾರಿಯಿಂದ ಸೇತುವೆ ಶಿಥಿಲವಾಗಿ ಹಂಪಿಯ ಗತ ಇತಿಹಾಸದ ಸ್ಮಾರಕವಾಗಿತ್ತು. ಕಳಪೆ ಕಾಮಗಾರಿ ನಡೆದಿರುವುದರಿಂದ ಸೇತುವೆ ಪುನರ್ ನಿರ್ಮಾಣಕ್ಕೂ ಮುಂಚೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಇದಕ್ಕಾಗಿ ರೂಪಿತಗೊಂಡಿದ್ದ ಆಯೋಗವೊಂದು ಸರ್ಕಾರಕ್ಕೆ ವರದಿ ನೀಡಿತ್ತು. ಈ ವರದಿಯನ್ನು ಕಣ್ಣೆತ್ತಿ ನೋಡದ ಸರ್ಕಾರ ತರಾತುರಿಯಲ್ಲಿ ಸೇತುವೆ ಪೂರ್ಣಗೊಳಿಸಿ 'ಆನೆಗೊಂದಿ ಉತ್ಸವ' ನಡೆಸಿ ರಾಜಕೀಯ ಲಾಭ ಪಡೆಯುವ ದುರಾಸೆ ಹೊಂದಿತ್ತು. ಈ ಸೇತುವೆಯಾದರೆ ಆನೆಗೊಂದಿಗೆ ರಸ್ತೆ ಮೂಲಕ ಹೋಗುವ ದಾರಿ ಕಡಿಮೆಯಾಗುತ್ತದೆಂದೂ, ರೆಸಾರ್ಟ್‌ಗಳ ವ್ಯವಹಾರಕ್ಕೂ ಭರ್ಜರಿ ಚಾಲನೆ ಸಿಗುವುದೆಂಬ ಲೆಕ್ಕಾಚಾರವೂ ಇತ್ತು. ಇದಕ್ಕಾಗಿ ಬಿಜೆಪಿ ಸರ್ಕಾರ ಆಂಧ್ರಪ್ರದೇಶದ ಬಿ.ವಿ.ರೆಡ್ಡಿ ಎಂಬುವವರಿಗೆ ಗುತ್ತಿಗೆ ನೀಡಿ ಕಾಮಗಾರಿ ತಕ್ಷಣ ಮುಗಿಸಿಕೊಡಬೇಕೆಂದು ಒತ್ತಾಯಿಸಿತು. ಲೋಕೋಪಯೋಗಿ ಇಲಾಖೆಯ ವಿನ್ಯಾಸಕ್ಕೆ ಒಪ್ಪಿಗೆ ಪಡೆಯದೇ ಸೇತುವೆ ಪೂರ್ಣಗೊಳಿಸಲು ಹೋಗಿ ಇಂತಹ ದುರಂತಕ್ಕೆ ಕಾರಣವಾಗಿ ಬಿಟ್ಟಿರುವುದಕ್ಕೆ ಸರ್ಕಾರವೇ ಈಗ ನೇರ ಕಾರಣವಾಗಿದೆ.

ದುರಂತ ನಡೆಯುವ ಹಿಂದಿನ ದಿನ ಬುಧವಾರದಂದೇ ಎರಡನ್ನೂ ಜೋಡಿಸುವ ಸೆಂಟ್ರಿಂಗ್ ಕಾಮಗಾರಿಯನ್ನು ಯುದ್ಧೋಪಾಯದ ಮೂಲಕ ನಡೆಸಲಾಯಿತು. ಒಂದು ಅಂದಾಜಿನಂತೆ 80 ಟನ್‌ಗೂ ಅಧಿಕ ಕಬ್ಬಿಣ, ಮರಳು, ಸಿಮೆಂಟ್ ಎರಡೂ ಬದಿ ಬುಧವಾರವಷ್ಟೇ ಜೋಡಿಸಿ ಕೊಳ್ಳಲಾಗಿತ್ತು, ಇದರ ಭಾರ ತಡೆಯಲಾರದೇ ಸೇತುವೆ ಕುಸಿದಿರಬಹುದು ಎಂದು ದುರ್ಘಟನೆ ಸಂದರ್ಭದಲ್ಲಿ ಹಾಜರಿದ್ದ ಸ್ಥಳೀಯರು ಅಭಿಪ್ರಾಯ ಪಡುತ್ತಿದ್ದಾರೆ.

ಈ ನಡುವೆ ಸೇತುವೆಯನ್ನು ಬಂಧಿಸುವ ಎರಡು ಕೇಬಲ್ ವಯ್ಯರ್‌ಗಳು ಕತ್ತರಿಸಿದ್ದರೂ ಅದನ್ನು ಗಮನಕ್ಕೆ ತರಲಾಗಿದ್ದರೂ ಬೇಕೆಂದೇ ಉಪೇಕ್ಷಿಸಲಾಯಿತು ಎಂಬ ಅಂಶ ಸಹ ಸ್ಥಳೀಯರಿಂದ ಬೆಳಕಿಗೆ ಬಂದಿದೆ.

ಸೇತುವೆಯ ಕಂಭಗಳನ್ನು ಹಿಡಿದಿಟ್ಟಿದ್ದ ಸೇತುವೆಯ ಕೇಬಲ್ ವಯರ್‌ಗಳು ಸಂಪೂರ್ಣ ಹಾಳಾಗಿದ್ದು, ಕಾಮಗಾರಿ ನಡೆಯುವ ಸಂದರ್ಭದಲ್ಲಿಯೇ ಎರಡೂ ಕೇಬಲ್ ವಯರ್‌ಗಳು ಕತ್ತರಿಸಿದ್ದರೂ ಅಷ್ಟು ಗಮನ ಕೊಡದೇ ಕಾಮಗಾರಿ ಆರಂಭಿಸಿದ್ದು ಈ ದುರ್ಘಟನೆ ನಡೆಯಲು ಬಹುಮುಖ್ಯ ಕಾರಣವಾಗಿದೆ ಎಂದು ಸ್ಥಳೀಯರು ತಿಳಿಸುತ್ತಾರೆ.

ಮುಚ್ಚಿಟ್ಟ ಯುನೆಸ್ಕೋ ಪತ್ರ

ಸೇತುವೆ ಕಾಮಗಾರಿಯನ್ನು ತಕ್ಷಣ ನಿಲ್ಲಿಸುವಂತೆ ಯುನೆಸ್ಕೋ ಜನವರಿ 12ರಂದು ಸರ್ಕಾರಕ್ಕೆ ಪತ್ರ ಬರೆಯಿತು. ಅವರಿಗೆ ಉತ್ತರ ಕೊಡುವ ಮುಂಚೆಯೇ ಸೇತುವೆ ಕಾಮಗಾರಿ ಮುಗಿದು ಹೋಗಲಿ ಎಂಬ ಹಿನ್ನೆಲೆಯಲ್ಲಿ ಯುದ್ಧೋಪಾಯದ ಮೂಲಕ ಕಾಮಗಾರಿ ಕೈಗೊಳ್ಳುವುದಕ್ಕೆ ಮೌಖಿಕ ಆದೇಶ ನೀಡಿದ ಸರ್ಕಾರ ಇಡೀ ಘಟನೆಗೆ ನೇರ ಜವಾಬ್ದಾರಿ ಹೊರಬೇಕಿದೆ.

ಯುನೆಸ್ಕೋ ಆಕ್ಷೇಪ ಯಾಕೇ?

1994ರಲ್ಲಿಯೇ ಸೇತುವೆ ಕಾಮಗಾರಿ ಆರಂಭಗೊಂಡರೂ ಯುನೆಸ್ಕೂ ಆಕ್ಷೇಪದ ಹಿನ್ನೆಲೆಯಲ್ಲಿ ಸೇತುವೆ ಕಾಮಗಾರಿ ನಿಂತು ಹೋಗಿತ್ತು. ಹಂಪಿಯನ್ನು ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಯಿಂದ ಅಪಾಯದ ಪಟ್ಟಿಗೆ ಇಟ್ಟಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಚ್ಚೆತ್ತುಗೊಂಡು ವಿಶ್ವಪರಂಪರೆ ಪಟ್ಟಿಯಲ್ಲಿ ಉಳಿದುಕೊಳ್ಳಲು ಶತ ಪ್ರಯತ್ನ ನಡೆಸಿದವು. ಈ ಹಿನ್ನೆಲೆಯಲ್ಲಿ ಸೇತುವೆ ಕಾಮಗಾರಿ ನಿಂತು ಹೋಗಿ 15 ವರ್ಷದ ನಂತರ ಉಳಿದ 24 ಮೀಟರ್ ಸೇತುವೆ ಸಂಪರ್ಕ ಕಲ್ಪಿಸಿ ಕಾಮಗಾರಿ ಪೂರ್ಣಗೊಳಿಸುವ ಕೆಲಸ ಬಿಜೆಪಿ ಸರ್ಕಾರ ಕೈಗೊಂಡಿತು.

ಸೇತುವೆ ಕಾಮಗಾರಿ ಆರಂಭಗೊಂಡ ಸಂದರ್ಭದಲ್ಲಿ ಹಂಪಿಗೆ ಭೇಟಿ ನೀಡಿದ್ದ ಅವತ್ತಿನ ಯುನೆಸ್ಕೋ ಪ್ರತಿನಿಧಿ ಜಂಕು ತಾನಿಗುಚ್ಚಿ 'ಹಂಪಿಯನ್ನು ಯುನೆಸ್ಕೋ ಸ್ಮಾರಕಗಳ ಗುಚ್ಛ' ಎಂದೇ ಕರೆದು ಗುರುತಿಸಿದೆ. ನಿಸರ್ಗ ಸಹಜ ಭೌಗೋಳಿಕ ಸೌಂದರ್ಯದಿಂದ ತನ್ನದೇ ಆದ ರೀತಿಯಲ್ಲಿ ಜೀವಂತ ಪರಂಪರೆ ಹೊಂದಿದೆ. ಸರ್ಕಾರ ಹಂಪಿಯನ್ನು ಕೇವಲ ಪ್ರವಾಸಿ ತಾಣವನ್ನಾಗಿ ನೋಡುತ್ತಿದೆ. ಸರ್ಕಾರಗಳ ದೃಷ್ಟಿ ಬದಲಾಗಬೇಕು' ಎಂದೇ ಹೇಳಿದ್ದರೂ ಸರ್ಕಾರ ಮಾತು ಕೇಳದಾಗ ಸಹಜವಾಗಿಯೇ ಹಂಪಿಯನ್ನು ವಿಶ್ವ ಪರಂಪರೆ ಪಟ್ಟಿಯಿಂದ ತೆಗೆದು ಅಪಾಯದ ಪಟ್ಟಿಯಲ್ಲಿರಿಸಿತು. ಇದು ಸುದ್ದಿಯಾಗುತ್ತಿದ್ದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮುಖ ಉಳಿಸಿಕೊ...



ಸೇತುವೆ ಕುಸಿತದಲ್ಲಿ ಸಾವಿಗಿಡಾದ ಕಾರ್ಮಿಕರ ಕುಟುಂಬದ ರೋದನಕ್ಕೆ ಕೊನೆಯೇ ಇಲ್ಲವೇ?

ಪುಟ 14ಕ್ಕೆ

ಭಯೋತ್ಪಾದನೆಯ ವಿರುದ್ಧ ಪ್ರಚಾರಾಂದೋಲನದ ಹೆಸರಿನಲ್ಲಿ ರಾಜ್ಯ ಸರ್ಕಾರ ಕೋಟಿಗಟ್ಟಲೆ ಸಾರ್ವಜನಿಕ ಹಣವನ್ನು ವೆಚ್ಚಮಾಡಿ, ಬರಿ ಸಂಘ ಪರಿವಾರದ ಜನರನ್ನು ಕಟ್ಟಿಕೊಂಡು ಹೋಗುತ್ತಿರುವುದು, ವಿದ್ಯಾರ್ಥಿಗಳ ನಡುವೆ ಕೋಮು ವಿಭಜನೆ ತರಲು ಯತ್ನಿಸುತ್ತಿರುವ ಸಂಚು ಸಂಘ ಪರಿವಾರದ ಕೋಮುವಾದಿ ಸಂಸ್ಕೃತಿಗೆ ತಕ್ಕ ಹಾಗೆ ಇದೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಇದರ ವಿರುದ್ಧ ಪ್ರತಿಪ್ರಚಾರಾಂದೋಲನ ಹಮ್ಮಿಕೊಂಡಿದೆ.

ವಿದ್ಯಾರ್ಥಿಗಳ ನಡುವೆ ದ್ವೇಷದ ಗೋಡೆ ಕಟ್ಟಲು ನಿಂತಿರುವ ಸರ್ಕಾರ

ಎಸ್‌ಎಫ್‌ಐನಿಂದ ಭಾವೈಕ್ಯತಾ ಸಮಾವೇಶ

ಹೆಚ್.ಆರ್. ನವೀನ್‌ಕುಮಾರ್

ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಬಿಜೆಪಿ ಇದುವರೆಗೆ ಕೇವಲ ಅಭಿವೃದ್ಧಿಯ ಮಂತ್ರವನ್ನು ಮಾತ್ರ ಜಪಿಸುತ್ತಿತ್ತು. ಈಗ ಅದು ತನ್ನ ನೈಜ ಸ್ವರೂಪವನ್ನು ವ್ಯಕ್ತಪಡಿಸುತ್ತಿದೆ. ಬಿಜೆಪಿ ಸರ್ಕಾರದ ಯಂತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿ ಆ ಮೂಲಕ ಆರ್‌ಎಸ್‌ಎಸ್‌ನ ಹಿಂದುತ್ವದ ಅಜೆಂಡಾವನ್ನು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ವಿದ್ಯಾರ್ಥಿ ಸಮುದಾಯದ ನಡುವೆ ಬಿತ್ತಲು ಹೊರಟಿದೆ. ಇದಕ್ಕೆ ಸಾಕ್ಷಿ ಎಂಬಂತೆ ರಾಜ್ಯ ಸರ್ಕಾರ ಇತ್ತೀಚೆಗೆ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ಸತತ 2 ತಿಂಗಳ ಕಾಲ ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಲ್ಲಿ "ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನ"ವನ್ನು ನಡೆಸುತ್ತಿದೆ.

ಸರ್ಕಾರಿ ಕಾರ್ಯಕ್ರಮದಲ್ಲಿ ಎಬಿವಿಪಿ ಮುಖಂಡರೇ ಸಂಘಟಕರು

ಇದು ಸರ್ಕಾರಿ ಕಾರ್ಯಕ್ರಮ. ಈ ಕಾರ್ಯಕ್ರಮಗಳನ್ನು ಸಂಘಟಿಸಲು ಹಲವು ಹಂತಗಳ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳಲ್ಲಿ ಎಬಿವಿಪಿ, ಆರ್‌ಎಸ್‌ಎಸ್, ವಿಹೆಚ್‌ಪಿ ಭಜರಂಗ ದಳ ಮತ್ತು ಬಿಜೆಪಿಯ ಕಾರ್ಯಕರ್ತರುಗಳನ್ನು ಸೇರಿಸುವ ಮೂಲಕ ಸರ್ಕಾರಿ ಯಂತ್ರ ಮತ್ತು ಸಾರ್ವಜನಿಕರ ಹಣ (ಸರ್ಕಾರದ ಹಣ 10 ಕೋಟಿ) ಬಳಸಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಸಿದ್ಧಾಂತವನ್ನು ವಿದ್ಯಾರ್ಥಿಗಳಿಗೆ ತುರುಕುವ ವ್ಯವಸ್ಥಿತವಾದ ಹುನ್ನಾರವನ್ನು ರಾಜ್ಯಸರ್ಕಾರ ನಡೆಸಿದೆ.

ಸಂವಿಧಾನಬದ್ಧ ಸರ್ಕಾರದ ಜವಾಬ್ದಾರಿ ಏನು?

ಸಂವಿಧಾನದ ಜಾತ್ಯಾತೀತ ಮತ್ತು ಧರ್ಮ ನಿರಪೇಕ್ಷ ತತ್ವಗಳನ್ನು ಒಪ್ಪಿ, ಪ್ರಮಾಣ ವಚನ ಸ್ವೀಕಾರ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಸಂವಿಧಾನದ ಮೂಲ ಆಶಯಗಳನ್ನು ಗಾಳಿಗೆ ತೂರಿ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ನಾವಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ. ವಿವಿಧ ಧರ್ಮದ ಜನರು ವಾಸವಾಗಿದ್ದಾರೆ. ಇವರೆಲ್ಲರ ರಕ್ಷಣೆ ಮತ್ತು ಎಲ್ಲರನ್ನು ಸೌಹಾರ್ದತೆಯಿಂದ ಕೊಂಡೊಯ್ಯುವ ಗುರುತರ ಹೊಣೆಗಾರಿಕೆ ಜವಾಬ್ದಾರಿಯುತ ಸರ್ಕಾರದ್ದು. ಆದರೆ ರಾಜ್ಯದ ಸರ್ಕಾರ ಈ ಹೊಣೆಗಾರಿಕೆಯನ್ನು ಮರೆತು ಹಿಟ್ಲರ್‌ನ ಸಂಸ್ಕೃತಿಯನ್ನು ಅನುಸರಿಸಲು ಹೊರಟಿದೆ.

ಈ ಅಭಿಯಾನದ ಮೂಲಕ ವಿದ್ಯಾರ್ಥಿಗಳಿಗೆ ಕಲಿಸುವುವುದು ಏನನ್ನು?

ಜನವರಿ 12 ರಿಂದ ಪ್ರಾರಂಭವಾಗಿ ಫೆಬ್ರವರಿ 18 ಕ್ಕೆ ಮುಕ್ತಾಯಗೊಳ್ಳುವ ಈ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ಗಮನಿಸಿದವರಿಗೆ ಅನಿಸುವುದೇನೆಂದರೆ 'ದೇಶದಲ್ಲಿ ಭಯೋತ್ಪಾದನೆ ಅತ್ಯಂತ ಹೆಚ್ಚಾಗಿದ್ದು ಈ ಭಯೊತ್ಪಾದನೆಗೆ ಮುಸಲ್ಮಾನರೇ ಕಾರಣ. ಹಾಗಾಗಿ ಅವರುಗಳ ಬಗ್ಗೆ ನಾವುಗಳು ಎಚ್ಚರ ವಹಿಸಬೇಕು ಮತ್ತು ಜಾಗೃತರಾಗಿ ಅವರ ವಿರುದ್ಧ ಸಂಘಟಿತರಾಗಬೇಕು'. ಅವರು ಈ ಕಾರ್ಯಕ್ರಮದ ಅಂಗವಾಗಿ ಬಿಡುಗಡೆಗೊಳಿಸಿರುವ ಕಿರುಚಿತ್ರವನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಈ ಮೂಲಕ ಅತ್ಯಂತ ಸೌಹಾರ್ದತೆಯಿಂದ ಧಾರ್ಮಿಕ ಬೇಧ,ಭಾವವಿಲ್ಲದೆ ಅಕ್ಕಪಕ್ಕದಲ್ಲಿ ಕುಳಿತು ನಿಶ್ಚಿಂತರಾಗಿ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳ ನಡುವೆ ಕೋಮುದ್ವೇಶದ ವಿಷಬೀಜವನ್ನು ಬಿತ್ತಿ, ಮನಸ್ಸುಗಳ ನಡುವೆ ಅಡ್ಡಗೋಡೆಗಳನ್ನು ನಿರ್ಮಿಸಿ ತಮ್ಮ ರಾಜಕೀಯ ಲಾಭ ಪಡೆಯಲು ಬಿಜೆಪಿ ಹವಣಿಸುತ್ತಿದೆ. ಇದಕ್ಕಾಗಿ ಆರ್‌ಎಸ್‌ಎಸ್‌ನ ಕಟ್ಟಾಳು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಈ ಕಾರ್ಯಕ್ರಮದ ಉಸ್ತುವಾರಿ ವಹಿಸಿ ಸಚಿವ ಕೆಲಸಗಳನ್ನು ಬಿಟ್ಟು ಇದರ ಯಶಸ್ಸಿಗೆ ಓಡಾಡುತ್ತಿದ್ದಾರೆ.

ಸತ್ಯವನ್ನು ಮುಚ್ಚಿಡುವ ಪ್ರಯತ್ನ

ಇವರ ಮುಖ್ಯ ಘೋಷಣೆ "ಭಯೋತ್ಪಾದನೆ ಅಳಿಸಿ ದೇಶ ಉಳಿಸಿ" ಎಂದು. ಆದರೆ ದೇಶದಲ್ಲಿ ಇದುವರೆಗೂ ನಡೆದಿರುವ ಎಲ್ಲ ರೀತಿಯ ಭಯೋತ್ಪಾದಕ ಕೃತ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರ್ಥ ಮಾಡಿಸುತ್ತಿಲ್ಲ. ಬದಲಾಗಿ ಕೇವಲ ಮುಸ್ಲಿಂ ಭಯೋತ್ಪಾದನೆಯನ್ನು ವಿಜೃಂಭಿಸಿದ್ದಾರೆ. ಮಾಲೇಗಾಂವ್ ಇನ್ನಿತರ ಕಡೆಗಳಲ್ಲಿ ನಡೆದ ಹಿಂದೂ ಭಯೋತ್ಪದನೆ ಬಗ್ಗೆ ಎಲ್ಲಿಯೂ ಪ್ರಸ್ತಾಪವಿಲ್ಲ. ಇದರ ಜೊತೆಗೆ 2008 ರಲ್ಲಿ ರಾಜ್ಯದ ಹುಬ್ಬಳ್ಳಿಯ ನ್ಯಾಯಾಲಯದ ಆವರಣದಲ್ಲಿ ಬಾಂಬ್ ಸ್ಫೋಟ ನಡೆದಿದ್ದು ಇದರ ತನಿಖೆಯಲ್ಲಿ 9 ಜನ ಹಿಂದುತ್ವ ಸಂಘಟನೆಯ ಕಾರ್ಯಕರ್ತರು ಮತ್ತು ಪ್ರಮೋದ್ ಮುತಾಲಿಕ್ (ಹಿಂದು ಯುವ ಸೇವೆ ಅಧ್ಯಕ್ಷ)ನ ಒಡನಾಡಿಗಳನ್ನು ಬಂಧಿಸಲಾಗಿದೆ. ಈ ರೀತಿಯ ಘಟನೆಗಳನ್ನು ವಿದ್ಯಾರ್ಥಿಗಳಿಂದ ಮರೆಮಾಚಿ, ಕೇವಲ ಮುಸ್ಲಿಂಮರು ಮಾತ್ರ ಭಯೋತ್ಪದಕರು, ಅವರು ದೇಶದ್ರೋಹಿಗಳು ಎಂಬ ಪಟ್ಟ ಕಟ್ಟುವ ಹುನ್ನಾರ ನಡೆದಿದೆ.

ಸ್ವಾಮಿ ವಿವೇಕಾನಂದರನ್ನು ಕೋಮುವಾದೀಕರಿಸುವ ಯತ್ನ

ಭಯೋತ್ಪಾದನೆ ವಿರುದ್ಧದ ಅಭಿಯಾನದ ಹೆಸರಿನಲ್ಲಿ ಸ್ವಾಮಿ ವಿವೇಕಾನಂದರನ್ನು ಕೋಮುವಾದೀಕರಿಸುವ ಯತ್ನವನ್ನು ಸಂಘ ಪರಿವಾರ ನಡೆಸುತ್ತಿದೆ. ಹಿಂದು ಧರ್ಮದ ಪುರೋಹಿತಶಾಹಿಯ ವಿರುದ್ಧ ಹೋರಾಡಿದ ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಹಿಷ್ಣುಗಳಾಗಿದ್ದರಿಂದ ಅಮೇರಿಕಾದ ಚಿಕಾಗೋದಲ್ಲಿ ನಡೆದ ವಿಶ್ವ ಸರ್ವಧರ್ಮಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇದನ್ನು ಮರೆಮಾಚಿ ಅವರನ್ನು ಬರಿ ಹಿಂದೂ ಧರ್ಮಕ್ಕೆ ಕಟ್ಟಿ ಹಾಕಲು ಹೊರಟಿರುವುದು ದುರಂತ. "ಹಸಿದವರಿಗೆ ಅನ್ನ ನೀಡದ, ವಿಧವೆಯರ ಕಣ್ಣೀರೊರೆಸದ ಧರ್ಮ ಧರ್ಮವೇ ಅಲ್ಲ. ನನ್ನ ಧರ್ಮ ಶ್ರೇಷ್ಠ, ಇತರ ಧರ್ಮ ನಿಕೃಷ್ಟ ಎನ್ನುವುದು ಅಜ್ಞಾನದ ಪರಮಾವಧಿ"ಯಿಂದ ಸ್ವಾಮಿ ವಿವೇಕಾನಂದರ ವಿವೇಕ ವಾಣಿಯನ್ನು ಮರೆಮಾಚಿ ವಿವೇಕಾನಂದರ ಹೆಸರನ್ನು ಸಂಘ ಪರಿವಾರಿಗಳು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಏಕಪಕ್ಷೀಯ ನಿರ್ಧಾರ

ಈ ಕಾರ್ಯಕ್ರಮದ ಪೂರ್ವಭಾವಿಯಾಗಿ ವಿಧಾನಸೌಧದಲ್ಲಿ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ನಡೆಸಿ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಈ ಸಭೆಗೆ ರಾಜ್ಯದ ಯಾವುದೇ ಶಿಕ್ಷಣ ತಜ್ಞರಾಗಲಿ, ಬುದ್ಧಿಜೀವಿಗಳಾಗಲಿ, ಸಾಹಿತಿಗಳನ್ನಾಗಲಿ ಆಹ್ವಾನಿಸಿಲ್ಲ. ಮತ್ತು ಸಾಕಷ್ಟು ವಿದ್ಯಾರ್ಥಿ ಸಂಘಟನೆಯನ್ನು ವಿದ್ಯಾರ್ಥಿಗಳ ನಡುವೆ ಸಕ್ರಿಯವಾಗಿ ಕೆಲಸ ನಿರ್ವಹಿಸುತ್ತಿದ್ದು ಭಯೋತ್ಪಾದನೆಯ ವಿರುದ್ಧವೂ ಹೋರಾಡುತ್ತಿರುವ ಬೇರಾವ ವಿದ್ಯಾರ್ಥಿ ಸಂಘಟನೆಗಳನ್ನು ಸಭೆಗೆ ಆಹ್ವಾನಿಸದೆ ಸಮಿತಿಗಳಲ್ಲಿ ಸೇರಿಸದೆ ಕೇವಲ ಎಬಿವಿಪಿ ಮುಖಂಡರನ್ನು ಸೇರಿಸಿ, ಎಬಿವಿಪಿ ಸಂಘಟನೆ ಮಾತ್ರ ದೇಶಪ್ರೇಮಿ ಸಂಘಟನೆ ಎಂದು ಬಿಂಬಿಸಲು ಹೊರಟಿದ್ದಾರೆ.



ಬೀದರ್‌ನಲ್ಲಿ ನಡೆದ ಭಾವೈಕ್ಯ ಸಮಾವೇಶದ ಮೆರವಣಿಗೆ ದೃಶ್ಯ

ಇಡೀ ಶಿಕ್ಷಣ ಕ್ಷೇತ್ರವನ್ನು ಕೇಸರೀಕರಿಸಿ, ವಿದ್ಯಾರ್ಥಿ ಸಮುದಾಯವನ್ನು ಕೋಮುಭಾವನೆಗಳ ಆಧಾರದಲ್ಲಿ ವಿಭಜಿಸುವ ಈ ಹುನ್ನಾರದ ವಿರುದ್ಧ ಎಸ್‌ಎಫ್‌ಐ ಸಂಘಟಿತ ಕಾರ್ಯಾಚರಣೆಗಳನ್ನು ನಡೆಸಿ ಮನಸ್ಸುಗಳನ್ನು ಬೆಸೆಯುವ ಶಾಲಾ-ಕಾಲೇಜುಗಳಲ್ಲಿ ಸೌಹಾರ್ದ ವಾತಾವರಣವನ್ನು ಉಳಿಸಲು ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ.

"ಸೌಹಾರ್ದತೆಯೆಡೆಗೆ ವಿದ್ಯಾರ್ಥಿಗಳ ನಡಿಗೆ" ಎಂಬ ಘೋಷಣೆಯಡಿಯಲ್ಲಿ 2008 ಡಿಸೆಂಬರ್ 6 ರಿಂದ 2009 ಜನವರಿ 09ರವರೆಗೆ ಒಂದು ತಿಂಗಳುಗಳ ಕಾಲ ರಾಜ್ಯಾದ್ಯಂತ ಸೌಹಾರ್ದತೆಯ ಪರವಾದ ಸಮಾವೇಶಗಳು, ವಿಚಾರ ಸಂಕಿರಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು ಮತ್ತು ಭಾವೈಕ್ಯತಾ ಮೆರವಣಿಗೆಗಳನ್ನು ಯಶಸ್ವಿಯಾಗಿ ನಡೆಸಿ, ಈ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಮತ್ತು ಎಸ್‌ಎಫ್‌ಐ ನ 38ನೇ ವರ್ಷಾಚರಣೆಯನ್ನು ಬೀದರ್‌ನಲ್ಲಿ 09 ಜನವರಿ 2009 ರಂದು ಅದ್ದೂರಿಯಾಗಿ ಆಚರಿಸಲಾಯಿತು.

ರಾಜ್ಯಮಟ್ಟದ ಭಾವೈಕ್ಯತಾ ಸಮಾವೇಶ

12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ ಸಾಮಾಜಿಕ ಚಳುವಳಿಯನ್ನು ಕಟ್ಟಿ ನಾಡಿಗೆ ಸಮಾನತೆ ಮತ್ತು ಸೌಹಾರ್ದದ ಸಂದೇಶವನ್ನು ಕೊಟ್ಟ ಕ್ರಾಂತಿಕಾರಿ ಬಸವಣ್ಣನವರು ಹುಟ್ಟಿದ ನಾಡಾದ ಬೀದರ್‌ನಲ್ಲಿ ಎಸ್‌ಎಫ್‌ಐನ ರಾಜ್ಯಮಟ್ಟದ ಭಾವೈಕ್ಯತಾ ಸಮಾವೇಶವನ್ನು ಜನವರಿ 9 ರಂದು ಸಂಘಟಿಸಲಾಗಿತ್ತು. ರಾಜ್ಯದ ತುತ್ತ ತುದಿಯಲ್ಲಿರುವ ಬೀದರ್‌ಗೆ ಎಲ್ಲ ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಮೊದಲಿಗೆ ಡಾ॥ ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಸಾವಿರಾರು ವಿದ್ಯಾರ್ಥಿಗಳ ಆಕರ್ಷಕ ಮೆರವಣಿಗೆಯೊಂದಿಗೆ ಹೊರಟು ಕ್ರಾಂತಿಕಾರಿ ಶಹಿದ್ ಭಗತ್‌ಸಿಂಗ್ ವೃತ್ತಕ್ಕೆ ಆಗಮಿಸಿ ಭಗತ್‌ಸಿಂಗ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಗರದಾದ್ಯಂತ ಮೆರವಣಿಗೆ ನಡೆಸಲಾಯಿತು. ನಂತರ ನಡೆದ ಬಹಿರಂಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಎಸ್‌ಎಫ್‌ಐ ಸಂಸ್ಥಾಪಕ ಮುಖಂಡರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಭಾರತ ಹಲವು ರೀತಿಯ ಭಯೋತ್ಪಾದನೆಗಳನ್ನು ಕಂಡಿದ್ದು 1992ಕ್ಕೂ ಮುಂಚೆ ಈ ದೇಶದಲ್ಲಿ ಖಲಿಸ್ಥಾನಿ ಭಯೋತ್ಪಾದನೆ, ತಮಿಳು ಉಗ್ರವಾದ, ಅಸ್ಸಾಂ ಭಯೋತ್ಪಾದನೆ, ಜಮ್ಮು ಕಾಶ್ಮೀರ ಭಯೋತ್ಪಾದನೆ ಈ ರೀತಿ ವಿವಿಧ ಆಯಾಮಗಳನ್ನು ಹೊಂದಿತ್ತು. ಭಯೋತ್ಪಾದನೆಗೆ ನಮ್ಮ ದೇಶದ ಇಬ್ಬರು ಪ್ರಧಾನಿಗಳ ಸಹಿತ ಸಾವಿರಾರು ಜನರನ್ನು ಬಲಿಯಾಗಿದ್ದಾರೆ.

ಆದರೆ 1992 ಬಾಬರಿ ಮಸೀದಿ ಧ್ವಂಸ ಮಾಡಿದ ನಂತರ ಮುಸ್ಲಿಂ ಮೂಲಭೂತವಾದಿ ಭಯೋತ್ಪಾದನೆ ಪ್ರಾರಂಭವಾಗಿದ್ದು ಇದು ಹೆಮ್ಮರವಾಗಿ ಬೆಳೆದಿದೆ. ಹಾಗಾಗಿ ಭಾರತದಂತಹ ಸಂದರ್ಭದಲ್ಲಿ ಭಯೋತ್ಪಾದನೆ ಬೆಳವಣಿಗೆಗೆ ಕೋಮುವಾದವೇ

ಪುಟ 15ಕ್ಕೆ

ಭಾರತೀಯ ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಮಂಗಳೂರಿನ ಪಬ್ ಒಂದಕ್ಕೆ ನುಗ್ಗಿ ಯುವತಿಯರನ್ನು ಅಟ್ಟಾಡಿಸಿ ಹಿಗ್ಗಾಮುಗ್ಗಾ ಬಡಿದು ಶ್ರೀರಾಮಸೇನೆ ತನ್ನ ಸಂಸ್ಕೃತಿಯೇನೆಂದು ಪ್ರದರ್ಶಿಸಿದೆ. ಇದಲ್ಲದೆ ಮಂಗಳೂರಿನಲ್ಲಿ ಕಾನೂನನ್ನು ಕೈಗೆತ್ತಿಕೊಂಡು ಸಂಘ ಪರಿವಾರ ನಡೆಸಿರುವ ಹಿಂಸಾಕಾಂಡಗಳ ಒಂದು ಚಿತ್ರಣ ಇಲ್ಲಿದೆ.




ಮೋದಿಗೇ ಮಾದರಿಯಾಗುತ್ತಿದೆಯೇ ಮಂಗಳೂರು

ಸಂಜಯ

ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣದಿಂದಲೇ ಸಂಘ ಪರಿವಾರದ ಫ್ಯಾಸಿಸ್ಟ್ ಮಾದರಿಯ ದಾಳಿಗಳಿಂದ ಮಂಗಳೂರು ಕಂಗೆಟ್ಟಿತ್ತು. ಪದ್ಮಪ್ರಿಯ ಪ್ರಕರಣ, ನೀರಿನ ಖಾಸಗೀಕರಣ ವಿರೋಧಿ ಹೋರಾಟಗಾರರ ಮೇಲಿನ ದಬ್ಬಾಳಿಕೆ, ಚರ್ಚ್ ಮೇಲಿನ ದಾಳಿ, ಜೈಲಿನಲ್ಲಿ ಬಜರಂಗಿ ಪಡೆಯ ಅಟ್ಟಹಾಸ, ಇಲ್ಲಿಗೆ ತನ್ನ ದಾಳಿಗಳಿಗೆ ಸಣ್ಣ ಬಿಡುವು ಕೊಟ್ಟ ಸಂಘ ಪರಿವಾರದ ನಿಲುವಿನಿಂದ ಮೇಲ್ನೋಟಕ್ಕೆ ಮಂಗಳೂರು ಶಾಂತವಾಗಿತ್ತು. ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿ (ಸಂಘ ಪರಿವಾರದ ದೃಷ್ಟಿಯಲ್ಲಿ ವಿಭಿನ್ನ ಧರ್ಮದ ಗಂಡು ಹೆಣ್ಣುಗಳು ಪರಸ್ಪರ ಮಾತನಾಡಿದ್ದಕ್ಕೆ ಹಲ್ಲೆ, ದನ ಸಾಗಾಟಗಾರರ ಮೇಲಿನ ಹಲ್ಲೆ, ಶಾಲಾ ಮಕ್ಕಳ ಪ್ರವಾಸಿ ಬಸ್‌ಗಳನ್ನು ತಡೆದು ದಾಂಧಲೆ ನಗಣ್ಯ ಘಟನೆಗಳು) ಇನ್ನೇನು ಎಲ್ಲವೂ ತಹಬಂದಿಗೆ ಬಂತು. ದೇವತಾಮನುಷ್ಯ ಇಮೇಜಿನ, ಅಪ್ರತಿಮ ಜಾತ್ಯಾತೀತ ಕೃಷ್ಣ ಪಾಲೆಮಾರರ ಉಸ್ತುವಾರಿ ಸಚಿವಗಿರಿಯಡಿಯಲ್ಲಿ ಎಲ್ಲರಿಗೂ ಸಮಾನ ನ್ಯಾಯ ರಕ್ಷಣೆ ದೊರಕುತ್ತದೆ. ಮಂಗಳೂರನ್ನು ಗುಜರಾತ್ ಮಾಡುವುದು ಅಷ್ಟು ಸುಲಭವಲ್ಲ ಎಂದು ಎಲ್ಲರೂ ಭಾವಿಸುತ್ತಿರುವಾಗಲೇ ಮೋದಿಯಂತಹ ಮೋದಿಯೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಹ ಸರಣಿ ಕೃತ್ಯಗಳನ್ನು ಚಿಡ್ಡಿಪಡೆ ಮಂಗಳೂರಿನಲ್ಲಿ ಹರಿಯಬಿಟ್ಟಿತು.

ಘಟನೆ ಒಂದು

ಕರಾವಳಿ ಅಲೆ ಪತ್ರಿಕೆಯ ಬಾಯಿ ಮುಚ್ಚಿಸುವುದು, ಪತ್ರಿಕೆಯ ವ್ಯವಸ್ಥಾಪಕ ಬಿ.ವಿ. ಸೀತಾರಾಮರನ್ನು ಪಳಗಿಸುವುದು. ಈ ತೀರ್ಮಾನದೊಂದಿಗೆ ರಂಗಕ್ಕಿಳಿದ ಬಿಜೆಪಿ ಪರಿವಾರ ಹಾಡುಹಗಲೇ ಕರಾವಳಿ ಅಲೆ ಮಾರಾಟ ಮಾಡುವ ಗೂಡಂಗಡಿಗಳನ್ನು ಪುಡಿಗಟ್ಟಿ ಅಂಗಡಿಕಾರರದಲ್ಲಿ ಭೀತಿ ಹುಟ್ಟಿಸಿ



ಕೃಪೆ: ಪ್ರಜಾವಾಣಿ

ಮಂಗಳೂರು ನಗರದಲ್ಲಿ ಕರಾವಳಿ ಅಲೆ ಮಾರಾಟವನ್ನು ಬಹುತೇಕ ನಿಲ್ಲಿಸಿಬಿಟ್ಟಿತು. ಸುಳ್ಳು ಕೇಸುಗಳ ಸರಮಾಲೆಯನ್ನು ಸೀತಾರಾಮರ ಮೇಲೆ ದಾಖಲಿಸಿ ಜೈಲಿಗಟ್ಟಿತು. ಇಂದಿಗೂ ಸೀತಾರಾಮರು ಕೈಗೆ ಬೇಡಿ ತೊಟ್ಟುಕೊಂಡು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಆರಂಭಕ್ಕೆ ಸ್ವಲ್ಪ ಪ್ರತಿರೋಧ, ಪ್ರತಿಭಟನೆ ತೋರಿದ ಕರಾವಳಿಯ ಜನತೆ ಈಗ ಸೀತಾರಾಮರನ್ನು ಮರತೇಬಿಟ್ಟಿದ್ದಾರೆ. ಅವರ ಕರಾವಳಿ ಅಲೆ ಪತ್ರಿಕೆಯ ಸಮೇತ.

ಘಟನೆ ಎರಡು

ಜನವರಿ ತಿಂಗಳ ಒಂದು ಮಧ್ಯಾಹ್ನ ಸಂಘ ಪರಿವಾರದ ಪುಂಡಾಟದಿಂದ ದೇಶದಲ್ಲೇ ಕುಖ್ಯಾತಿಗೀಡಾದ ಸುರತ್ಕಲ್‌ನ ಹತ್ತಿರದ ಕಾಟಿಪಳ್ಳದ ಬಳಿ ಶಾಲಾ ಮೈದಾನದಲ್ಲಿ ನಡೆಯುತ್ತಿದ್ದ ಫುಟ್‌ಬಾಲ್ ಮ್ಯಾಚ್ ವೀಕ್ಷಿಸಿ ತನ್ನ ಮನೆಯ ಕಡೆಗೆ ರಹ್ಮತುಲ್ಲಾ ಎಂಬ ಯುವಕ ಮೋಟಾರ್‌ಬೈಕ್‌ನಲ್ಲಿ ಹೊರಟಿದ್ದ. ಈ ರಹ್ಮತುಲ್ಲಾ ಬಜರಂಗಿ ಪುಂಡ, 98ರ ಸುರತ್ಕಲ್ ಗಲಭೆಯ ಪ್ರಮುಖ, ದಿನನಿತ್ಯ ಮುಸ್ಲೀಮರನ್ನು ರಸ್ತೆಯಲ್ಲಿ ತಡೆದು ಹಲ್ಲೆ ನಡೆಸುತ್ತಿದ್ದ ಉದಯ ಪೂಜಾರಿ ಹತ್ಯೆಯ ಆರೋಪಿಯಾಗಿ ನಂತರ ಖುಲಾಸೆಗೊಂಡಿದ್ದ, ನಂತರ ಕೊಲ್ಲಿರಾಷ್ಟ್ರಕ್ಕೆ ತೆರಳಿ ಉದ್ಯೋಗದಲ್ಲಿದ್ದ. ಇತ್ತೀಚೆಗೆ ಊರಿಗೆ ಮರಳಿದ್ದ, ಇವನನ್ನು ಬಲಿ ಪಡೆಯಲು ಸುರತ್ಕಲ್‌ನ ಕುಖ್ಯಾತ ಬಜರಂಗಿ ಪಡೆ ಹೊಂಚುಹಾಕಿ ಕಾದುಕುಳಿತಿತ್ತು. ರಹ್ಮತುಲ್ಲಾ ತನ್ನ ಬೈಕ್‌ನಲ್ಲಿ ಸ್ವಲ್ಪ ಮುಂದಕ್ಕೆ ಚಲಿಸುತ್ತಿದ್ದಂತೆ ಮಾರ್ಗ ಮಧ್ಯದಲ್ಲಿ ಪೈಂಟ್ ಡಬ್ಬವನ್ನು ಖರೀದಿಸಿ ಮನೆಯ ಕಡೆಗೆ ಹೊರಟಿದ್ದ ಪದವಿ ಪ್ರಥಮ ವರ್ಷದ ವಿದ್ಯಾರ್ಥಿ ತಂಜೀಮ್ ಎದುರಾಗಿದ್ದಾನೆ. ನೆರೆಕೆರೆಯವನೇ ಆದ ತಂಜೀಮ್‌ನನ್ನು ಮನೆಗೆ ಬಿಡುವುದಾಗಿ ಹೇಳಿ ರಹ್ಮತುಲ್ಲಾ ಬೈಕ್‌ಗೆ ಹತ್ತಿಸಿಕೊಂಡಿದ್ದಾನೆ. ಇನ್ನೇನು ಊರು ತಲುಪಬೇಕು ಎನ್ನುವಷ್ಟರಲ್ಲಿ ರಹ್ಮತುಲ್ಲಾನಿಗಾಗಿ ಕಾದು ಕುಳಿತಿದ್ದ ಹಂತಕ ಪಡೆ ಮೋಟಾರ್‌ಬೈಕನ್ನು ತಮ್ಮ ಕಾರಿನಿಂದ ಗುದ್ದಿ ಕೆಳಗೆ ಬೀಳಿಸಿದ್ದಾರೆ. ಅಪಾಯದ ಅರಿವಾದ ರಹ್ಮತುಲ್ಲಾ ಎದ್ದು ಊರೊಳಗೆ ಓಡಿದ್ದಾನೆ. ಕಾರಿನಿಂದ ಕೆಳಗಿಳಿದ ಐದು ಜನ ಮತಾಂಧ ರಕ್ಕಸರು ರಹ್ಮತುಲ್ಲಾ ಸಿಕ್ಕದಿದ್ದರೇನಾಯಿತು. ಇನ್ನೊಬ್ಬ ಸಾಬಿ ಸಿಕ್ಕಿದನಲ್ಲ ಲೆಕ್ಕಕ್ಕೆ ಸರಿಯಾಯಿತು ಎಂದು ತೀರ್ಮಾನಿಸಿ ಏನೂ ಅರಿಯದೆ ಅಪಘಾತದ ಆಘಾತದಿಂದ ಅಲ್ಲೇ ನಿಂತಿದ್ದ ತಂಜೀಮ್‌ನನ್ನು ತಲವಾರು ಬೀಸಿ ಮುಗಿಸಿಹಾಕಿದ್ದಾರೆ. ಯಾರ ತಂಟೆ ತಕರಾರಿಗೂ ಹೋಗದ ಸಭ್ಯ ವಿದ್ಯಾರ್ಥಿ ತಂಜೀಮ್‌ನನ್ನು ಮುಸ್ಲಿಂ ಎಂಬ ಏಕೈಕ ಕಾರಣಕ್ಕೆ ಹತ್ಯೆಗೈದ ಕೃತ್ಯದಿಂದ ಆಕ್ರೋಶಗೊಂಡ ಇಡೀ ಮಂಗಳೂರಿನ ಜನತೆ ಸಂಘ ಪರಿವಾರದ ಶನಿ ಸಂತಾನಗಳನ್ನು ಶಪಿಸತೊಡಗಿದ್ದರು. ಮಂಗಳೂರು ಮತ್ತೊಮ್ಮೆ ಪ್ರಕ್ಷುಬ್ಧಗೊಂಡಿತು. ತಂಜೀಮ್ ಕೊಲೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟನೆಗೆ ತಯಾರಿ ನಡೆಸುತ್ತಿದ್ದಾಗಲೇ ಎಂದಿನಂತೆ ನಿಷೇದಾಜ್ಞೆ ಜಾರಿಗೊಳಿಸಿ ಪ್ರತಿಭಟನೆಯನ್ನು ಹತ್ತಿಕ್ಕಲಾಯಿತು. ತಂಜೀಮ್ ಹತ್ಯೆಗೀಡಾದ ಎರಡೇ ದಿವಸಕ್ಕೆ ಸುರತ್ಕಲ್‌ನಿಂದ ಹತ್ತು ಕಿ.ಮೀ ದೂರದ ಕಿನ್ನಿಗೋಳಿಯಲ್ಲಿ ಕೂಲಿ ಕಾರ್ಮಿಕ ಮೋಹನ್ ಎಂಬವರನ್ನು ಸರಿರಾತ್ರಿಯಲ್ಲಿ ಯಾರೋ ಹಂತಕರು ಹತ್ಯೆಗೈಯುತ್ತಾರೆ. ಎಂದೂ ಕೋಮು ಸಂಘರ್ಷಗಳು ನಡೆಯದ ತೀರಾ ಗ್ರಾಮೀಣ ಪ್ರದೇಶದಲ್ಲಿ ನಡೆದ ಹತ್ಯೆಯನ್ನು ಸಂಘ ಪರಿವಾರ ವ್ಯವಸ್ಥಿತವಾಗಿ ತನ್ನ ಪರವಾಗಿ ಬಳಸಿಕೊಂಡಿತು. ತಂಜೀಮ್‌ಹತ್ಯೆಗೆ ಪ್ರತೀಕಾರವಾಗಿ ಮುಸಲ್ಮಾನರೇ ಮೋಹನ್‌ನನ್ನು ಕೊಂದುಹಾಕಿದ್ದಾರೆ ಎಂದು ಬೊಬ್ಬೆ ಹೊಡೆಯಿತು. ಮೋಹನ್‌ನಂತಹ ಬಡವರ ಮನೆಯ ದುಡಿದುಣ್ಣುವ ಯುವಕರನ್ನು ಎಂದೂ ಕಣ್ಣೆತ್ತಿ ನೋಡದ ಬಿಜೆಪಿ ಮೋಹನ್ ಹಂತಕರಿಗೆ ಬಲಿಯಾದ ತಕ್ಷಣವೇ ಹುತಾತ್ಮ ಎಂದು ಬಿಂಬಿಸಿ ಅಭಿನವ ಮೋದಿ ಮಾಜಿ ಉಸ್ತುವಾರಿ ನಾಗರಾಜಶೆಟ್ಟಿ ಹಾಗೂ ಬಜರಂಗಿ ಪಡೆಯ ನೇತೃತ್ವದಲ್ಲಿ ಶವ ಮೆರವಣಿಗೆ ನಡೆಸಿತು. ಕಿನ್ನಿಗೋಳಿಯಂತಹ ಕೋಮು ಸೋಂಕುಮುಕ್ತ ಪ್ರದೇಶವನ್ನು ಪ್ರಕ್ಷುಬ್ಧಗೊಳಿಸುವಲ್ಲಿಯೂ ಯಶಸ್ವಿಯಾಯಿತು. ತಮ್ಮದೇ ಕೇಸರೀ ಪೊಲೀಸರಿಗೆ 48 ಗಂಟೆಯಲ್ಲಿ ಕೊಲೆ ಮಾಡಿದ "ಸಾಬಿ"ಗಳನ್ನು ಬಂಧಿಸಬೇಕೆಂದು ಗಡುವು ವಿಧಿಸಿತು. ಮತ್ತೆ ಗಣಿತದ ಲೆಕ್ಕಾಚಾರ ಒಂದಕ್ಕೆ ಒಂದು ತಂಜೀಮ್‌ಗೆ ಪ್ರತಿಯಾಗಿ ಮೋಹನ್‌ನನ್ನು ಹತ್ಯೆಗೈಯ್ಯಲಾಗಿದೆ ಎಂಬ ವಾದವನ್ನು ಸಂಘ ಪರಿವಾರ ವ್ಯವಸ್ಥಿತವಾಗಿ ಹಬ್ಬಿಸಿತು. ಇದನ್ನು ಇಲ್ಲಿನ ಪತ್ರಕರ್ತರು ಮಾತ್ರವಲ್ಲದೆ ಜನಸಾಮಾನ್ಯರು ಜಾತ್ಯಾತೀತ ಪಕ್ಷಗಳು ನಂಬಿಕೊಂಡವು. ತಂಜೀಮ್‌ನ ಮನೆಗೆ ಭೇಟಿ ಕೊಟ್ಟರೆ ಮೋಹನ್ ಮನೆಗೂ ಭೇಟಿ ಕೊಡಬೇಕು, ತಂಜೀಮ್‌ನ ಹೆತ್ತವರಿಗೆ ಪರಿಹಾರ ಕೊಟ್ಟರೆ ಮೋಹನ್ ಮನೆಗೂ ಪರಿಹಾರ ಕೊಡಬೇಕು ಎಂಬ ಅಲಿಖಿತ ನಿಯಮ ಜಾರಿಯಾಯಿತು. ದೇವೇಗೌಡ, ಪೂಜಾರಿ, ಮೊಯ್ಲಿ ಹೀಗೆ ರಾಜಕಾರಣಿಗಳ ತಂಡ ಸಂಘ ಪರಿವಾರದ ಮಾತನ್ನು ನಂಬಿ ದಾರಿತಪ್ಪಿ ತಂಜೀಮ್ ಹತ್ಯಾ ಪ್ರಕರಣವನ್ನು ಹಳ್ಳ ಹಿಡಿಸಿದರು.



ಗೂಂಡಾ ಪಡೆಯ ನಾಯಕ ಅತ್ತಾವರ ಮತ್ತು ಸಂಗಡಿಗ



ಯುವತಿಯನ್ನು ಸುತ್ತುವರಿದಿರುವ ಪುಂಡರು

ಮಹಿಳೆಯರ ಮೇಲೆ ರಾಕ್ಷಸಿ ದಾಳಿ



ಲೆಕ್ಕ ಮುಗಿದಿತ್ತಲ್ಲ. ತಂಜೀಮ್ ಹತ್ಯೆಗೆ ಪ್ರತಿಕಾರವಾಗಿ ಮುಸ್ಲಿಮರು ಮೋಹನ್‌ನನ್ನು ಕೊಂದಿದ್ದಾರಲ್ಲ ಎಂಬ ಮಾತು ಶುರುವಾಯಿತು. ಆದರೆ ಇಷ್ಟರವರೆಗೆ ಮೋಹನ್ ಕೊಲೆಗೆ ಸಂಬಂಧಿಸಿ ಒಂದು ಸಣ್ಣ ...ೇವು ಸಹ ಸಿಕ್ಕಿಲ್ಲ. ಇನ್ನೊಂದೆಡೆ ತಂಜೀಮ್ ಕೊಲೆಯ ಆರೋಪಿಗಳ ಹೆಸರನ್ನು ರಹ್ಮತುಲ್ಲಾ ತನ್ನ ಹೇಳಿಕೆಯಲ್ಲಿ ನೀಡಿದ್ದ ಕೊಲೆ ಮಾಡಿಸಿದ್ದು ಸ್ಥಳೀಯ ಬಿಜೆಪಿ ಕಾರ್ಪೊರೇಟರ್ ತಿಲಕ್‌ರಾಜ್ ಎಂದು ಹೇಳಿಕೆಯಲ್ಲಿ ನಮೂದಿಸಿದ್ದ. ಆದರೆ ಬಿಜೆಪಿಯ ಚಾಲಾಕಿ ಪೊಲೀಸರು ನಗರಪಾಲಿಕೆ ಸದಸ್ಯ ತಿಲಕ್ ರಾಜ್ ಬದಲಿಗೆ ಬಿಜೆಪಿಗರು ದಿನಗೂಲಿ ನಿಶ್ಚಯಿಸಿ ಹಾಜರುಪಡಿಸಿದ ಕೂಲಿ ಕಾರ್ಮಿಕ ತಿಲಕ್ ಹಾಗೂ ಇನ್ನಿಬ್ಬರನ್ನು ಬಂಧಿಸಿ ಕೇಸು ಮುಗಿಸಿದ್ದಾರೆ. ಇಲ್ಲಿನ ಮುಸಲ್ಮಾನರು ಹತಾಶೆಯಿಂದ ನಿಟ್ಟುಸಿರು ಬಿಡುತ್ತಿದ್ದಾರೆ. ಜಾತ್ಯಾತೀತ ಪಕ್ಷದ ರಾಜಕಾರಣಿಗಳು ತಂಜೀಮ್ ಹಾಗೂ ಮೋಹನ್ ಮನೆಗೆ ಸರಣಿ ಭೇಟಿಯಲ್ಲಿ ...ಯಾಗಿದ್ದಾರೆ. ಬಿಜೆಪಿಗರು 48 ಗಂಟೆಗಳ ಗಡುವನ್ನು ಮರೆತು ಮುಸಿ ಮುಸಿ ನಗುತ್ತಿದ್ದಾರೆ.

ಘಟನೆ ಮೂರು

ಮೋಹನ್ ಕೊಲೆಯನ್ನು ಮುಸ್ಲಿಮರ ತಲೆಗೆ ಕಟ್ಟಲು ಇಲ್ಲಿನ ಕೇಸರಿ ಪೊಲೀಸರು ಬಹಳ ಕಷ್ಟ ಪಡುತ್ತಿದ್ದಾರೆ. ಈ ಕಾರ್ಯಾಚರಣೆಯ ನೇತೃತ್ವವನ್ನು ಬಿಜೆಪಿಗರ ಮಾನಸ ಪುತ್ರ ಇನ್ಸ್‌ಪೆಕ್ಟರ್ ವೆಂಕಟೇಶ್ ಪ್ರಸನ್ನ ವಹಿಸಿಕೊಂಡಿದ್ದಾನೆ. ಈತ ಸಿಕ್ಕಸಿಕ್ಕ ಮುಸ್ಲಿಂ ಯುವಕರನ್ನು ಬೆನ್ನು ಹತ್ತತೊಡಗಿದ್ದಾನೆ. ಮುಸ್ಲಿಮರೇ ಕೊಲೆಗಡುಕರು ಎಂದು ಸಾಬೀತುಪಡಿಸುವ ಈತನ ತನಿಖಾ ವಿಧಾನಕ್ಕೆ ಈಗಾಗಲೇ 25 ಕ್ಕೂ ಹೆಚ್ಚು ಮುಸ್ಲಿಂ ಯುಕವರ ಕೈಕಾಲು, ಬೆನ್ನು ಬಲಿಯಾಗಿವೆ. ಅಸಂಖ್ಯ ಲಾಠಿಗಳು ಪುಡಿಯಾಗಿವೆ. ಅದರಲ್ಲೂ ನೂರುದ್ದೀನ್ ಎಂಬ ಯುವಕನನ್ನು ಮೂರು ದಿವಸ ಅಕ್ರಮಬಂಧನದಲ್ಲಿಟ್ಟು ಕೊಲೆಯನ್ನು ಒಪ್ಪಿಕೊಳ್ಳುವಂತೆ ಹಗಲು ರಾತ್ರಿ ಹಿಂಸಿಸಲಾಗಿದೆ. ಕೊನೆಗೆ ವಿಫಲರಾಗಿ ಮಂಗಳೂರಿನ ಬಸ್ ನಿಲ್ದಾಣದ ಬಳಿ ಈತನನ್ನು ನಡೆಯಲಾಗದ ಸ್ಥಿತಿಯಲ್ಲಿ ಎಸೆದುಹೋಗಲಾಗಿತ್ತು. ಈಗಲೂ ಈತ ಆಸ್ಪತ್ರೆಯ ...ಡ್‌ನಲ್ಲಿ ಮಲಗಿ ತನ್ನ ಬೆನ್ನ ಮೇಲೆ ಪುಡಿಯಾದ ...ಗಳ ಲೆಕ್ಕ ಹಾಕುತ್ತಿದ್ದಾನೆ. ವೆಂಕಟೇಶ ಪ್ರಸನ್ನ ಹೊಸ ಲಾಠಿ ಹಿಡಿದು ಮುಸ್ಲಿಂ ಯುವಕರನ್ನು ಎಳೆದೊಯ್ಯುತ್ತಲೇ ಇದ್ದಾನೆ. ಮಂಗಳೂರಿನ ಜಾತ್ಯಾತೀತರು ಮಾಧ್ಯಮಗಳು ನೂರುದ್ದೀನ್‌ನನ್ನು ಮರೆತೇಬಿಟ್ಟಿದ್ದಾರೆ.

ಘಟನೆ ನಾಲ್ಕು

ಪುತ್ತೂರು ತಾಲೂಕಿನ ಪ್ರಮುಖ ಕಾಲೇಜೊಂದರ ಆರು ಮುಸ್ಲಿಂ ವಿದ್ಯಾರ್ಥಿಗಳನ್ನು ಐವತ್ತರಷ್ಟು ಎಬಿವಿಪಿ ಕಾರ್ಯಕರ್ತರು ಸುತ್ತುವರಿದು ತೀವ್ರ ರೀತಿಯ ಹಲ್ಲೆ ನಡೆಸುತ್ತಾರೆ. ಪೆಟ್ಟು ತಿಂದ



ಬೆಂಗಳೂರಿನಲ್ಲಿ ಡಿವೈಎಫ್‌ಐ ಪ್ರತಿಭಟನೆ

ಮುಸ್ಲಿಂ ವಿದ್ಯಾರ್ಥಿಗಳು ಆಸ್ಪತ್ರೆ ಸೇರುತ್ತಾರೆ. ಹೊಡೆದವರಿಗಿಂತಲೂ ಹೊಡೆತ ತಿಂದವರ ಮೇಲೆಯೇ ಪೊಲೀಸರು ಆಸಕ್ತಿಯಿಂದ ಕೇಸು ದಾಖಲಿಸುತ್ತಾರೆ. ಪ್ರಕರಣವನ್ನು ರಾಜಿಯಲ್ಲಿ ಮುಗಿಸಲು ಮುಸ್ಲಿಂ ವಿದ್ಯಾರ್ಥಿಗಳ ಮೇಲೆ ಪೊಲೀಸರು ಒತ್ತಡ ಹಾಕುತ್ತಾರೆ. ಹೊಡೆದ ಎವಿಬಿಪಿ ವಿದ್ಯಾರ್ಥಿಗಳ ಗುಂಪಿನಲ್ಲಿದ್ದ ಕೆಲವು ವಿದ್ಯಾರ್ಥಿಗಳನ್ನು ಸಹಪಾಠಿಗಳು ಹೊಡೆದದ್ದು ಯಾಕೆ ಎಂದು ಪ್ರಶ್ನಿಸಿದಾಗ 'ಧರ್ಮಕ್ಕೆ ಸಿಕ್ಕಿದ ಅಂತ ಸರಿಯಾಗಿ ಬಾರಿಸಿದೆವು ಅಷ್ಟೆ'. ಹೇಗಿದೆ ಮುಸ್ಲಿಂ ಯುವಕರೆಂದರೆ ಇಲ್ಲಿ ಮರದ ತುಂಡಿನ ಹಾಗೆ ನಿರ್ಜೀವ ವಸ್ತುಗಳು. ಅವರಿಗೆ ಯಾವುದೇ ಭಾವನೆಗಳಿಲ್ಲ ಎಂಬಂತೆ ಧರ್ಮಕ್ಕೆ ಸಿಕ್ಕಿದರು ನಾವು ಹೊಡೆದೆವು ಎಂದು ಮತಾಂಧರು ಉತ್ತರಿಸಿದರೆ ಇದು ವಿಷಯವೇ ಅಲ್ಲ ಎಂಬಂತೆ ಇಲ್ಲಿಯ ಬುದ್ಧಿವಂತ ಜನತೆ ಉದಯವಾಣಿ ಪತ್ರಿಕೆಯಲ್ಲಿ ಕ್ರೀಡಾಕೂಟದ ಸುದ್ದಿ ಓದಿದಂತೆ ಓದಿ ಸುಮ್ಮನಾಗುತ್ತಾರೆ. ಮುಸ್ಲಿಂ ಯುವಕರು ಹತಾಶೆಯಿಂದ ಒಳಗೊಳಗೇ ಕುದಿಯುತ್ತಾರೆ.



ಮಂಗಳೂರಿನಲ್ಲಿ ಎಸ್ಸೆಫ್ಐ, ಎನ್‌ಎಸ್‌ಯುಐಗಳ ಜಂಟಿ ಪ್ರತಿಭಟನೆ

ಘಟನೆ ಐದು

ಮಂಗಳೂರು ಎಂದಿನಂತೆ ಇವತ್ತೇನು ಸಂಭವಿಸಿಲ್ಲ ಎಂಬ ಧೈರ್ಯದಿಂದ ತನ್ನಷ್ಟಕ್ಕೆ ವ್ಯವಹಾರನಿರತವಾಗಿತ್ತು. ಆಗ ಸಂಜೆ ನಾಲ್ಕು ಗಂಟೆ. ನಗರದ ಪ್ರತಿಷ್ಠಿತ ಹೊಟೇಲ್‌ಗೆ ಸೇರಿದ ಪಬ್‌ನಲ್ಲಿ ಮೇಲ್ವರ್ಗದ ಯುವಕ, ಯುವತಿಯರು, ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೂತು ತಮ್ಮಷ್ಟಕ್ಕೆ ತಾವು ಊಟ, ಸ್ನಾಕ್ಸ್, ಕೂಲ್ ಡ್ರಿಂಕ್ಸ್‌ನಲ್ಲಿ ಮಗ್ನರಾಗಿದ್ದಾರೆ. ಮಂಗಳೂರಿನ ಸಾಂಸ್ಕೃತಿಕ ಪೊಲೀಸರ (ಹಿಂದೂ ತಾಲಿಬಾನ್) ಅರಿವೇ ಇರದಿದ್ದ ಇವರು ಎಂದಿನಂತೆ ತಮ್ಮದೇ ಲೋಕದಲ್ಲಿದ್ದರು. ಮೊದಲು ಹೊಟೆಲ್‌ನ ಮುಂಭಾಗಕ್ಕೆ ಒಂದೆರಡು ಚಾನೆಲ್‌ನವರು, ಪತ್ರಿಕೆಯ ಛಾಯಾಗ್ರಾಹಕರು ಆಗಮಿಸುತ್ತಾರೆ. ಹೊಟೆಲ್‌ನ ಹೊರಗಡೆ ಇದ್ದ ಮಂಗಳೂರಿನ ಸಾಮಾನ್ಯ ನಾಗರಿಕರಿಗೆ ಇಲ್ಲಿ ಎಂದಿನಂತೆ ಏನೋ 'ಸಾಮಾನ್ಯ' ಘಟನೆಯೊಂದು ನಡೆಯುತ್ತದೆ ಎಂಬ ವಾಸನೆ ಬಡಿಯಲಾರಂಭಿಸಿದೆ. ಹಾಗೆ ಐದೇ ನಿಮಿಷದಲ್ಲಿ ಕೇಸರಿ ನಾಮ ಬಳಿದ, ಕೇಸರಿ ಶಾಲು ಹೊದ್ದ ಮಂಗಳೂರಿನ ಪರ್ಯಾಯ ಸರಕಾರದ ಪ್ರತಿನಿಧಿಗಳಾದ ಶ್ರೀ ರಾಮ ಸೇನೆಯ ನಲ್ವತ್ತರಷ್ಟು ಕ್ರಿಮಿನಲ್ ಕಾರ್ಯಕರ್ತರು ಜೈ ಶ್ರೀ ರಾಮ್ ಘೋಷಣೆಯೊಂದಿಗೆ ಹೊಟೆಲ್ ಬಳಿ ಆಗಮಿಸುತ್ತಾರೆ. ಧರ್ಮದ ಅಮಲು ಮದ್ಯದ ಅಮಲು ಎರಡೂ ಮಿಶ್ರಣಗೊಂಡಿದ್ದ ಇವರು ಬಂದ ತಕ್ಷಣವೇ ಜೈ ಶ್ರೀ ರಾಮ್ ಘೋಷಣೆಯೊಂದಿಗೆ ಪಬ್‌ನ ಒಳಗೆ ನುಗ್ಗಿ ಸಿಕ್ಕ ಸಿಕ್ಕವರಿಗೆ ಬಡಿಯತೊಡಗುತ್ತಾರೆ. ಚಾನೆಲ್, ಪತ್ರಿಕೆಯ ಪ್ರತಿನಿಧಿಗಳು ಎಲ್ಲವನ್ನು ಸಿನೆಮಾದ ಶೈಲಿಯಲ್ಲಿ ಚಿತ್ರೀಕರಿಸತೊಡಗುತ್ತಾರೆ. ಸುತ್ತಮುತ್ತಲು ಸೇರಿದ್ದ ಮಂಗಳೂರಿನ ಬುದ್ಧಿವಂತ ಜನತೆ, ಕಬಡ್ಡಿ ಪಂದ್ಯಾಟ, ಕಂಬಳ ವೀಕ್ಷಿಸುವಂತೆ ಮುಗಿಬಿದ್ದು ಈ ಧರ್ಮ, ಸಂಸ್ಕೃತಿ ರಕ್ಷಣೆಯ ಕಾರ್ಯಾಚರಣೆಯನ್ನು ವೀಕ್ಷಿಸುತ್ತಾರೆ. ಯಾವತ್ತೂ ತಮ್ಮದೇ ಲೋಕದಲ್ಲಿರುವ, ಜಿಲ್ಲೆಯ ಮತೀಯ ಹಿಂಸೆಗೂ ತಮಗೂ ಸಂಬಂಧವೇ ಇಲ್ಲ ಎಂಬಂತೆ ಇರುವ ಪಬ್‌ನೊಳಗಿದ್ದ ಶ್ರೀಮಂತರ ಮಕ್ಕಳು ಏನು ನಡೆಯುತ್ತಿದೆ ಎಂದು ತಿಳಿಯುವುದರ ಒಳಗಾಗಿ ಮುಖ ಮೂತಿ ಒಡೆದು ಹೋಗುವ ಹಾಗೆ ಹೊಡೆತ ತಿನ್ನುತ್ತಾರೆ. ಅದರಲ್ಲೂ ಯುವತಿಯರನ್ನು ಪ್ರತ್ಯೇಕಿಸಿ ಆಕ್ರಮಿಸಿಕೊಳ್ಳುವ ಸಂಸ್ಕೃತಿ, ಧರ್ಮ ರಕ್ಷಕರು ಈ ಮಾತೆಯರನ್ನು ನೆಲಕ್ಕೆ ಕೆಡವಿ ಬಡಿಯುವುದು ಮಾತ್ರವಲ್ಲದೆ ಲೈಂಗಿಕ ಕಿರುಕುಳವನ್ನೂ ನೀಡುತ್ತಾರೆ. ಅರ್ಧ ಗಂಟೆಯ ಈ ಧರ್ಮ ರಕ್ಷಣೆಯ ಕಾರ್ಯಾಚರಣೆ ಮುಕ್ತಾಯಗೊಳ್ಳುತ್ತಿದ್ದಂತೆ ಮಂಗಳೂರಿನ ದಕ್ಷ ಕೇಸರಿ ಪೊಲೀಸರು ಎಂದಿನಂತೆ ಸ್ಥಳಕ್ಕೆ ಆಗಮಿಸುತ್ತಾರೆ. ತಮ್ಮ ಕಸಿನ್‌ಗಳಾದ ಶ್ರೀರಾಮಸೇನೆಯ ಕಾರ್ಯಕರ್ತರಿಗೆ ದಾಂಧಲೆಯ ಬಗ್ಗೆ ಹುಸಿ ಆಕ್ಷೇಪವನ್ನು ವ್ಯಕ್ತಪಡಿಸಿ ನಾಲ್ಕೈದು ಮಂದಿಯನ್ನು ರಾಜ ಮರ್ಯಾದೆಯೊಂದಿಗೆ ಠಾಣೆಗೆ ಕರೆದೊಯ್ಯುತ್ತಾರೆ. ಇನ್ನೇನು ಇವರನ್ನು ನೂರು ರೂ ದಂಡ ವಿಧಿಸುವ ಪೆಟ್ಟಿ ಕೇಸ್ ದಾಖಲಿಸಿ ಬಿಡುಗಡೆ ಮಾಡಬೇಕು ಎನ್ನುವಷ್ಟರಲ್ಲಿ ಶ್ರೀರಾಮ ಸೇನೆಯ ಸಂಸ್ಕೃತಿ ರಕ್ಷಣೆಯ ಕೃತ್ಯದ ಕ್ಲಿಪ್ಪಿಂಗ್‌ಗಳು ರಾಷ್ಟ್ರೀಯ ಚಾನೆಲ್‌ಗಳಿಗೆ ಸಿಕ್ಕಿಬಿಡುತ್ತವೆ. ಜಿಲ್ಲೆಯ ಸಂಘ ಪರಿವಾರಕ್ಕೆ ಹಾಗೂ ಇಲ್ಲಿನ ಬುದ್ಧಿವಂತ ಜನತೆಗೆ ಮಾಧ್ಯಮಗಳಿಗೆ ಸಣ್ಣ ಘಟನೆಯಾಗಿರುವ ಈ ಕೃತ್ಯದ ದೃಶ್ಯಗಳನ್ನು ಕಂಡು ಹೌಹಾರಿದ ರಾಷ್ಟ್ರೀಯ ಚಾನೆಲ್‌ಗಳು ತಾಲಿಬಾನ್ ಗಿರಿಯ ಕೃತ್ಯಗಳನ್ನು ತಮ್ಮ ಚಾನೆಲ್‌ಗಳಲ್ಲಿ ನಿರಂತರವಾಗಿ ಬಿತ್ತರಿಸತೊಡಗುತ್ತವೆ. ಇದನ್ನು ಕಂಡ ಕೇಂದ್ರ ಸರಕಾರ ಹಾಗೂ ದೆಹಲಿ ರಾಜಕಾರಣಿಗಳು ಬೆಚ್ಚಿಬಿದ್ದು ಖಂಡನೆ, ದಿಗ್ಭ್ರಮೆ ವ್ಯಕ್ತಪಡಿಸತೊಡಗುತ್ತಾರೆ. ಈ ರೀತಿ ಸುದ್ದಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಥಮ ಸಾಲಿನಲ್ಲಿ ರಾರಾಜಿಸತೊಡಗಿದ ನಂತರ ಜಿಲ್ಲೆಯ ಪತ್ರಕರ್ತರು, ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಮಹಿಳಾ ಸಂಘಟನೆಗಳು ನಿಧಾನಕ್ಕೆ ಮೈಕೊಡವಿ ಪ್ರತಿಭಟನೆಗೆ ಇಳಿಯತೊಡಗುತ್ತವೆ. ಯಾವಾಗಲೂ ಇಂತಹ ಘಟನೆಗಳನ್ನು ಸೃಷ್ಟಿಸಿ ಬಳಸಿಕೊಳ್ಳುವ ಬಿಜೆಪಿ ಈ ಬಾರಿ ಮಾತ್ರ ವಿಷಯ ಉಲ್ಟಾ ಹೊಡೆದು ದೇಶದಾದ್ಯಂತ ಜನತೆ ಬಿಜೆಪಿಗೆ ಉಗಿಯತೊಡಗಿದಾಗ ಕಂಗಾಲಾದ ಬಿಜೆಪಿಯ ರಾಷ್ಟ್ರ ನಾಯಕನೇ ಬೆಂಗಳೂರಿಗೆ ಭೇಟಿ ನೀಡುವ ಪರಿಸ್ಥಿತಿ ನಿರ್ಮಾಣ ವಾಯಿತು. ಇಕ್ಕಟ್ಟಿಗೆ ಸಿಲುಕಿದ ರಾಜ್ಯದ ಬಿಜೆಪಿ ಸರಕಾರ ಠಾಣೆಗೆ ಬಂದಿದ್ದ ಶ್ರೀರಾಮ ಸೇನೆಯ ಕಾರ್ಯಕರ್ತರನ್ನು ಬಂಧಿಸಿ ಜೈಲಿಗೆ ಅಟ್ಟುತ್ತದೆ. ಶ್ರೀರಾಮಸೇನೆಗೂ ತಮಗೂ ಸಂಬಂಧ ಇಲ್ಲ ಎಂದು ಪೊಲೀಸ್ ಮಂತ್ರಿ ಆಚಾರ್ಯನಿಂದ ಹಿಡಿದು ಸಂಘ ಪರಿವಾರದ ಚಿಲ್ಲ, ಪಿಲ್ಲ ನಾಯಕರು ಹೇಳಿಕೆ ನೀಡತೊಡಗುತ್ತಾರೆ. ಕ್ಷುಲ್ಲಕ ಘಟನೆಯನ್ನು ರಾಷ್ಟ್ರೀಯ ಮಾಧ್ಯಮಗಳು, ವಿರೋಧ ಪಕ್ಷಗಳು ದೊಡ್ಡದು ಮಾಡಿ ರಾಜಕೀಯಗೊಳಿಸುತ್ತಿವೆ. ಮಂಗಳೂರಿನ ಮಾನವನ್ನು ರಾಷ್ಟ್ರೀಯ ಮಟ್ಟದಲ್ಲಿ ಕಳೆಯಲಾಗುತ್ತಿದೆ ಎಂದು ರೋದಿಸತೊಡಗುತ್ತಾರೆ.



ಶ್ರೀರಾಮಸೇನೆಯ ಪುಂಡರ ಬಂಧನ ವಿರೋಧಿಸಿ ಬಸ್‌ಗೆ ಹಾನಿ ಮಾಡಿರುವುದು

ಡಿ.ಜಿ.ಪಿ. ಶ್ರೀಕುಮಾರ್ ಘಟನೆ ನಡೆಯುವ ಸ್ಥಳದಲ್ಲಿದ್ದ ಪತ್ರಕರ್ತರಿಗೆ ಘಟನೆಯನ್ನು ಪೊಲೀಸರಿಗೆ ಮೊದಲೇ ತಿಳಿಸದೇ ಇದ್ದದ್ದಕ್ಕೆ ನೋಟೀಸ್ ಜಾರಿ ಮಾಡುತ್ತಾರೆ. ಆರೋಪಿಗಳ ಮೇಲೆ ಕೊಲೆಯತ್ನ, ಮಾನಭಂಗಕ್ಕೆ ಯತ್ನ ಕೇಸು ದಾಖಲಿಸಲಾಗಿದೆ, ಗೂಂಡಾ ಕಾಯ್ದೆ ಹಾಕಲಾಗುವುದು ಎಂಬ ಹೇಳಿಕೆ ನೀಡತೊಡಗುತ್ತಾರೆ. ಈ ಕೃತ್ಯವನ್ನು ಸಮರ್ಥಿಸಿಕೊಳ್ಳುವ ಶ್ರೀರಾಮಸೇನೆಯ ದೊಣ್ಣೆ ನಾಯಕ ಪ್ರಸಾದ್ ಅತ್ತಾವರ ಪಬ್‌ನಲ್ಲಿದ್ದವರು ತನ್ನ ಸಹೋದರಿಯರ ಹಾಗೆ. ಅವರ ಮಾನ ರಕ್ಷಣೆಗಾಗಿಯೇ ದಾಳಿ ನಡೆಸಲಾಗಿದೆ. ಸಹೋದರಿಯರ ಮೇಲೆ ಕೈಯೆತ್ತುವುದು ಅಣ್ಣಂದಿರ ಕರ್ತವ್ಯ ಎಂಬ ಹೇಳಿಕೆ ನೀಡುತ್ತಾನೆ (ಸಹೋದರಿ ಎಂದವರೇ ಸಿಕ್ಕಿದ್ದೇ ಚಾನ್ಸು ಎಂಬಂತೆ ಪಬ್ ದಾಳಿ ಸಂದರ್ಭ ಲೈಂಗಿಕವಾಗಿ ಪೀಡಿಸಿ, ವೇಶ್ಯೆಯರು ಎಂದು ಕರೆದದ್ದು ಇವರ ಸಂಸ್ಕೃತಿ) ಒತ್ತಡಕ್ಕೊಳಗಾದ ಪೊಲೀಸರು ಪ್ರಸಾದ್ ಅತ್ತಾವರನನ್ನು ರಾತ್ರಿ ಹೊತ್ತು ರಾಜ ಮರ್ಯಾದೆಯೊಂದಿಗೆ ಬಂಧಿಸುತ್ತಾರೆ. ಇದನ್ನು "ಪ್ರತಿಭಟಿಸಿ" ರಾಮಸೇನೆಯ ಬಂಟರು ಬಸ್ಸು,

ಪುಟ 12ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಜಾಗತೀಕರಣದ ಅವಧಿಯಲ್ಲಿ ಚೀನಾ ಮತ್ತು ಭಾರತ 'ಮೂಡಿ ಬರುತ್ತಿರುವ ಆರ್ಥಿಕ'ಗಳಲ್ಲಿ ಪ್ರಮುಖವಾದವುಗಳು ಎಂದು ಹೇಳಲಾಗುತ್ತಿದೆ. ಹಾಗೆ ಹೇಳುವಾಗ ಇವೆರಡರ ಸ್ವರೂಪ ಒಂದೇ ಎಂಬಂತೆ ಚಿತ್ರಿಸಲಾಗುತ್ತದೆ. ಆದರೆ ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅದಕ್ಕೆ ಈ ಎರಡು ದೇಶಗಳ ಸ್ಪಂದನ ಈ ಎರಡು ಆರ್ಥಿಕಗಳಲ್ಲಿನ ಮೂಲಭೂತ ಭಿನ್ನತೆಯನ್ನು ಮತ್ತೊಮ್ಮೆ ಎತ್ತಿ ತೋರಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ಎದುರಿಸುವುದು ಹೇಗೆ?

ಎರಡು ಉದಾಹರಣೆಗಳು - ಚೀನಾ ಮತ್ತು ಭಾರತ

ಒಂದು ಸರಕಾರ ಹೇಗೆ ಬಿಕ್ಕಟ್ಟನ್ನು ಎದುರಿಸುತ್ತದೆ ಎಂಬುದು ಅದರ ಆದ್ಯತೆಗಳೇನು ಎಂಬುದರ ಮೇಲೆ ಅವಲಂಬಿಸಿದೆ. 1930ರ ದಶಕದ ಆರ್ಥಿಕ ಕುಸಿತದ ಭೀಕರತೆ ಮನರಾವರ್ತನೆಗೊಳ್ಳದಿರಬೇಕಾದರೆ 'ಲಾಭಗಳಿಗಿಂತ ಜನಗಳು ಮುಖ್ಯ' ಎಂದು ಪರಿಗಣಿಸುವುದು ಅನಿವಾರ್ಯವಾಗುತ್ತದೆ ಎಂದು ಇತಿಹಾಸದ ಜ್ಞಾನವಿರುವವರು ಎಚ್ಚರಿಸುತ್ತಿದ್ದಾರೆ. ಆದರೆ ಭಾರತವೂ ಸೇರಿದಂತೆ ವಿಶ್ವಾದ್ಯಂತ ಈ ಬಿಕ್ಕಟ್ಟನ್ನು ಎದುರಿಸಲು ಸರಕಾರಗಳು ಪ್ರಕಟಿಸುತ್ತಿರುವ ಕ್ರಮಗಳು ತದ್ವಿರುದ್ಧವಾಗಿವೆ. ಬುಶ್ ಸರಕಾರ ಪ್ರಕಟಿಸಿದ 700ಬಿಲಿಯ ಡಾಲರುಗಳ ಪ್ಯಾಕೇಜು 'ಬ್ಯಾಂಕುಗಳ ಬ್ಯಾಲೆನ್ಸ್ ಶೀಟುಗಳನ್ನು ಬಲಪಡಿಸಲು ನೆರವಾಗಿದೆಯಷ್ಟೇ, ನಿರ್ದಿಷ್ಟ ಹೂಡಿಕೆ ಯೋಜನೆಗಳಿಗೆ ಬೆಂಬಲ ನೀಡುವಂತೆ ಇಲ್ಲ' ಎಂದು ಅಲ್ಲಿನ ನ್ಯೂಯಾರ್ಕ್ ಟೈಮ್ಸ್ ದೈನಿಕ ಕೂಡಾ ಟಿಪ್ಪಣಿ ಮಾಡಿದೆ. ಇವು ಈ ಬಿಕ್ಕಟ್ಟನ್ನು ಸೃಷ್ಟಿಸಿದವರನ್ನೇ ಕಾಪಾಡುವ ಕ್ರಮಗಳು, ಆರ್ಥಿಕ ಹಿಂಜರಿತಗಳನ್ನು ತಡೆಯುವ ಕ್ರಮಗಳಲ್ಲ.

ಚೀನಾದ ಸರಕಾರ ಮಾತ್ರ ತನ್ನ ಆದ್ಯತೆ ಜನಗಳೇ ಹೊರತು ಲಾಭಗಳಲ್ಲ ಎಂದು ತೋರಿಸಿದೆ. ಅಲ್ಲಿಯೂ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಬೆಳವಣಿಗೆ ದರ ಈ ವರ್ಷ ಕಳೆದ ಏಳು ವರ್ಷಗಳಲ್ಲೇ ಅತಿ ಕಡಿಮೆ ದರವನ್ನು ದಾಖಲಿಸಿದೆ. ಆದರೂ ಅದು ವಿಶ್ವದ ಸರಾಸರಿ ಬೆಳವಣಿಗೆಗಿಂತ ಬಹಳ ಹೆಚ್ಚಿದೆ. ವಿಶ್ವದ ಆರ್ಥಿಕ ಬೆಳವಣಿಗೆ ದರ 3.7 ಶೇ.ವಾಗಿದ್ದರೆ ಚೀನಾದ್ದು ಈ ಬಿಕ್ಕಟ್ಟಿನ ನಡುವೆಯೂ 9ಶೇ. ಅಲ್ಲಿಯ ಆರ್ಥಿಕ ಒಂದು ಬಲಿಷ್ಟ ಮತ್ತು ಆರೋಗ್ಯವಂತ ಸಾರ್ವಜನಿಕ ವಲಯವನ್ನು ಆಧರಿಸಿರುವುದರಿಂದಲೇ ಪ್ರಸಕ್ತ ಬಿಕ್ಕಟ್ಟು ಆ ದೇಶವನ್ನು ಜಗತ್ತಿನ ಇತರ ದೇಶಗಳಷ್ಟು ತಟ್ಟಿಲ್ಲ.

ಅಲ್ಲಿ 586 ಬಿಲಿಯ - 2.6 ಟ್ರಿಲಿಯ

ಆದರೂ ಅದು ತನ್ನ ಜನಗಳನ್ನು ರಕ್ಷಿಸಲು ನವೆಂಬರ್ 2008ರಲ್ಲಿ 586 ಬಿಲಿಯ ಡಾಲರುಗಳ(29.3ಲಕ್ಷ ಕೋಟಿ ರೂಪಾಯಿಗಳ) ಆರ್ಥಿಕ ಪ್ರೋತ್ಸಾಹಕ ಯೋಜನೆಯನ್ನು ಪ್ರಕಟಿಸಿದೆ. ಇದರ ಜತೆಗೆ ಅಲ್ಲಿಯ ಪ್ರಾಂತ್ಯ ಸರಕಾರಗಳು ಒಟ್ಟು 1.3 ಕೋಟಿ ಕೋಟಿರೂ.ಗಳಷ್ಟು(2.6 ಟ್ರಿಲಿಯನ್ ಡಾಲರುಗಳು) ಇನ್ನೂ ಬೃಹತ್ ಮೊತ್ತದ ಕ್ರಮಗಳನ್ನು ಪ್ರಕಟಿಸಿವೆ. ಈ ಹಣವನ್ನು ಮುಖ್ಯವಾಗಿ ಮೂಲರಚನೆಗಳ ನಿರ್ಮಾಣಕ್ಕೆ, ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ, ಮನೆ ಕೊಳ್ಳುವವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸಲು ಮತ್ತು ನಿವೃತ್ತ ಹಾಗು ಬಡವಿಭಾಗಗಳ ಆದಾಯಗಳನ್ನು ಹೆಚ್ಚಿಸಲು ವಿನಿಯೋಗಿಸಲಾಗುವುದು.

ಇದಲ್ಲದೆ ಚೀನಾ ಸರಕಾರ ದೇಶದಲ್ಲಿ ರೈಲ್ವೇ ಜಾಲವನ್ನು ವಿಸ್ತರಿಸಲು 730ಬಿಲಿಯ ಅಥವಾ 73,000 ಕೋಟಿ ಡಾಲರುಗಳ ಒಂದು ಬೃಹತ್ ಯೋಜನೆಯನ್ನು ಪ್ರಕಟಿಸಿದೆ. ಈಗ ಅಲ್ಲಿ 79,000 ಕಿ.ಮೀ.ಗಳಷ್ಟು ಉದ್ದದ ರೈಲ್ವೇ ಜಾಲವಿದೆ. ಅದನ್ನು 2020ರ ವೇಳೆಗೆ 1,20,000ಕಿ.ಮೀ.ಗೆ ಏರಿಸುವ ಯೋಜನೆ ಇದು. ಈ ಯೋಜನೆ 60 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ, 2ಕೋಟಿ ಟನ್ ಉಕ್ಕು ಮತ್ತು 12 ಕೋಟಿ ಟನ್ ಸಿಮೆಂಟ್ ಬಳಸಲಿದೆ. ರೈಲ್ವೇ ವಿನ್ಯಾಸ ಮತ್ತು ಭೂಗರ್ಭ ಸರ್ವೆಗಳಲ್ಲಿ 30,000 ವೃತ್ತಿಪರರ ಸೇವೆಗಳನ್ನು ಬಳಸಲಾಗುವುದು. ಹೊಸ ಮಾರ್ಗಗಳು, ಹಳೆಯದನ್ನು ದ್ವಿಮಾರ್ಗಗಳಾಗಿ ಮಾಡುವುದು ಮತ್ತು ಮಾರ್ಗಗಳ ವಿದ್ಯುದೀಕರಣ ಈ ಯೋಜನೆಯಲ್ಲಿ ಸೇರಿದೆ. ಚೀನಾದಿಂದ ರಶ್ಯಾಕ್ಕೆ, ಮಂಗೋಲಿಯಾಕ್ಕೆ ಮತ್ತು ಇತರ ನೆರೆದೇಶಗಳಿಗೆ ರೈಲುಮಾರ್ಗಗಳ ರಚನೆ ಮತ್ತು ದೇಶದ ಉದ್ದಗಲಕ್ಕೂ ವಿವಿಧ ಭಾಗಗಳನ್ನು ಜೋಡಿಸುವ ಮಾರ್ಗಗಳ ವಿಸ್ತರಣೆ ಇವೆಲ್ಲ ಈ ಬೃಹತ್ ಯೋಜನೆಯಲ್ಲಿ ಸೇರಿವೆ. ಗಂಟೆಗೆ 200 ಕಿ.ಮಿ.ನಷ್ಟು ವೇಗದಲ್ಲಿ ರೈಲುಗಳು ಚಲಿಸಬಲ್ಲ ಮಾರ್ಗಗಳನ್ನು 50,000 ಕಿ.ಮೀ.ಗೆ ವಿಸ್ತರಿಸಲಾಗುವುದು. ಎಲ್ಲಾ ಪ್ರಾಂತೀಯ ರಾಜಧಾನಿಗಳನ್ನು ಮತ್ತು 5 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ನಗರಗಳನ್ನು ಜೋಡಿಸುವ ಮತ್ತು ಪ್ರಯಾಣ ಅವಧಿಯನ್ನು ಅರ್ಧಕ್ಕಿಳಿಸುವ ಯೋಜನೆಯೂ ಇದರಲ್ಲಿ ಅಡಕವಾಗಿದೆ.

ಇಲ್ಲಿ ಕೇವಲ 4 ಬಿಲಿಯ

ಇಲ್ಲಿ ಭಾರತ ಸರಕಾರ ಕೈಗೊಂಡಿರುವ ಕ್ರಮಗಳನ್ನು ಹೋಲಿಸಿ ನೋಡಿ. ಡಿಸೆಂಬರ್ 7 ರಂದು ಮೊದಲ ಆರ್ಥಿಕ ಪ್ರೋತ್ಸಾಹಕ ಪ್ಯಾಕೇಜನ್ನು ಪ್ರಕಟಿಸಲಾಯಿತು. ಜನವರಿ 2 ರಂದು ಎರಡನೇ ಪ್ಯಾಕೇಜನ್ನು ಪ್ರಕಟಿಸಲಾಯಿತು. ಇವುಗಳಲ್ಲಿ ಯೋಜನಾ ವೆಚ್ಚವನ್ನು 20,000ಕೋಟಿ ರೂ.ಗಳಷ್ಟು ಹೆಚ್ಚಿಸಿದ್ದು ಒಂದು ಅಂಶ. ಡಾಲರುಗಳಲ್ಲಿ ಹೇಳುವುದಾದರೆ ಇದು ಕೇವಲ 4 ಬಿಲಿಯ ಡಾಲರ್ ಆಗುತ್ತದೆ. ಮೇಲೆ ಹೇಳಿದಂತೆ ಚೀನಾ ನವಂಬರದಲ್ಲಿ ಪ್ರಕಟಿಸಿದ ಕ್ರಮಗಳ ಮೊತ್ತ 586 ಬಿಲಿಯ ಡಾಲರ್. ಈ ವೆಚ್ಚ ಹೆಚ್ಚಳ ನಮ್ಮ ಒಟ್ಟು ಆಂತರಿಕ ಉತ್ಪನ್ನದ 0.5ಶೇ.ಕ್ಕಿಂತಲೂ ಕಡಿಮೆ. ಇಂತಹ ಅಲ್ಪ ವೆಚ್ಚದಿಂದ ಉದ್ಯೋಗ ಆರ್ಥಿಕ ಹಿಂಜರಿತವನ್ನು ತಡೆಯುವುದು ಉದ್ಯೋಗ ನಷ್ಟಗಳನ್ನು ತಡೆಯುವುದು ಖಂಡಿತಾ ಸಾಧ್ಯವಿಲ್ಲ. ಸರಕಾರ ಉದ್ದಿಮೆಗಳಿಗೆ ತೆರಿಗೆ ಕಡಿತಗಳು ಮತ್ತು ಬಡ್ಡಿದರಗಳನ್ನು ಇಳಿಸುವ ಕ್ರಮಗಳು ಉದ್ದಿಮೆದಾರರ ಲಾಭಗಳನ್ನು ರಕ್ಷಿಸಬಹುದೇ ವಿನಃ ಉದ್ಯೋಗಗಳನ್ನು ನಿರ್ಮಿಸಲಾರದು.

ಇದನ್ನು ಸರಿಪಡಿಸಲೇಬೇಕಾಗಿದೆ

ಚೀನಾ ಸರಕಾರದಂತೆ ಭಾರತ ಸರಕಾರವೂ ಒಂದು ಬೃಹತ್ ಪ್ರಮಾಣದ ಸಾರ್ವಜನಿಕ ಕಾಮಗಾರಿಗಳ ಮೂಲಕ ಹೇಗೆ ಆರ್ಥಿಕದಲ್ಲಿ ಚೈತನ್ಯ ಮೂಡಿಸಲು ಸಾಧ್ಯವಿದೆ.

ಬಹಳಷ್ಟು ಅವಕಾಶಗಳು

ಭಾರತದ ಮೂಲರಚನಾ ಸೌಲಭ್ಯಗಳು ತುಂಬಾ ಅಸಮರ್ಪಕ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇಲ್ಲಿ ಮಾಡಬಹುದಾದದ್ದು ಬಹಳಷ್ಟಿದೆ. ಭಾರತದ ರಸ್ತೆ ಜಾಲ ಸುಮಾರು 33 ಲಕ್ಷ ಕಿ.ಮೀ. ಇದು ವಿಶ್ವದಲ್ಲೇ ಎರಡನೇ ಅತಿ ದೊಡ್ಡ ಜಾಲ. ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಬಹಳಷ್ಟು ಸರಕಾರೀ ಜಾಹಿರಾತುಗಳು ಅಬ್ಬರಿಸುತ್ತಿವೆ. ಆದರೆ ಇದರ ಪ್ರಮಾಣ ಒಟ್ಟು ರಸ್ತೆಜಾಲದ 2 ಶೇಕಡಾ ಮಾತ್ರ. ಇದರಲ್ಲಿ 12 ಶೇ. (8,000ಕಿ.ಮೀ.) ಮಾತ್ರ ಎರಡು ಮಾರ್ಗಗಳ ಹೆದ್ದಾರಿಗಳು. ಚೀನಾದಲ್ಲಿ 2007ರ ವೇಳೆಗೇ 54,000ಕಿ.ಮೀ. ಎರಡು ಮಾರ್ಗಗಳ ಹೆದ್ದಾರಿಗಳಿದ್ದವು.



ಕಳೆದ ವರ್ಷ ವಿದ್ಯುತ್ ಬೇಡಿಕೆ ನಿಜವಾದ ಪೂರೈಕೆಗಿಂತ 15 ಶೇ. ಹೆಚ್ಚಿತ್ತು. ವಿದ್ಯುತ್ ಕಡಿತಗಳಿಂದಲೇ ಭಾರತದ ಸುಮಾರು 9ಶೇ. ಕೈಗಾರಿಕಾ ಉತ್ಪಾದನೆ ಕಡಿತವಾಗುತ್ತದೆ ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ. ಸುಮಾರು 60ಶೇ. ಭಾರತೀಯರಿಗೆ ನೇರ ವಿದ್ಯುತ್ ಸಂಪರ್ಕ ಇಲ್ಲ. ಆದರೂ ಕಳೆದ ವರ್ಷ ನಮ್ಮ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಾದ ಹೆಚ್ಚಳ ಕೇವಲ 7000 ಮೆಗಾವಾಟ್. ಇದೇ ಅವಧಿಯಲ್ಲಿ ಚೀನಾ[...] ವಿದ್ಯುತ್ ಉತ್ಪಾದನೆ 1 ಲಕ್ಷ ಮೆಗಾವಾಟ್‌ಗಳ[...] ಹೆಚ್ಚಿತು. ಇತರ ವಲಯಗಳಲ್ಲೂ ಇಂತಹ ಭಾರಿ[...] ಅಸಮರ್ಪಕತೆಗಳನ್ನು ಕಾಣಬಹುದು.

ಅದೇ ರೀತಿ ಸಾಮಾಜಿಕ ಮೂಲರಚನೆಯ[...] ಬಹಳಷ್ಟು ಕೆಲಸವಾಗಬೇಕಿದೆ. ಪ್ರತಿದಿನ ಸುಮಾ[...] ಒಂದು ಸಾವಿರ ಮಕ್ಕಳು ತಡೆಯಬಹುದಾ[...] ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಕೇವಲ 13ಶೇ[...] ಚರಂಡಿ ಶುದ್ಧೀಕರಣವಾಗುತ್ತಿದೆ. 70 ಶೇ. ಜನ[...] ಸರಿಯಾದ ಶೌಚಾಲಯವಿಲ್ಲ. ನಮ್ಮ 50 ಶೇ[...] ಜನಗಳಿಗೆ ಕುಡಿಯುವ ನೀರಿನ ಸೌಕರ್ಯವಿಲ್ಲ[...] ಶಾಲೆಗೆ ಸೇರಿದ ಮಕ್ಕಳಲ್ಲಿ ಅರ್ಧದಷ್ಟು 14ನೆ[...] ವಯಸ್ಸಿನ ವೇಳೆಗೆ ಶಾಲೆ ಬಿಟ್ಟಿರುತ್ತಾರೆ. ಉನ್ನ[...] ಶಿಕ್ಷಣವನ್ನು ಪ್ರವೇಶಿಸುವ ವಿದ್ಯಾರ್ಥಿಗಳ ಪ್ರಮಾ[...] ಅಂದಾಜು 7ರಿಂದ 13 ಶೇ. ದ ಮಧ್ಯೆ[...] ತುಯ್ದಾಡುತ್ತಿದೆ. ಅದರಾಚೆಗೆ ಹೋಗುತ್ತಿಲ್ಲ. ಆದ[...] ಇಷ್ಟಕ್ಕೇ ಪಾಶ್ಚಿಮಾತ್ಯ ರಾಜಧಾನಿಗಳಲ್ಲಿ ಭಾರತ[...] ಮೆದುಳು ಶಕ್ತಿಯ ಬಗ್ಗೆ ಭಯ ಹುಟ್ಟಿದೆ. ನಮ[...] ಜನಸಂಖ್ಯೆಯ 54ಶೇ. ಭಾಗ 25 ವರ್ಷಕ್ಕಿಂ[...] ಕೆಳಗಿನವರು. ಇವರೆಲ್ಲರಿಗೂ ಸರಿಯಾದ ಶಿಕ್ಷಣ[...] ಆರೋಗ್ಯ ಮತ್ತು ಉದ್ಯೋಗ ಕೊಡುವುದ[...] ಸಾಧ್ಯವಾದರೆ ಅವರು ಒಂದು ಉತ್ತಮ ಭಾರತವನ್[...] ಕಟ್ಟಲಾರರೇ? ಈ ನಿಟ್ಟಿನಲ್ಲಿ ಹಣ ತೊಡಗಿಸಲ[...] ಸರಕಾರ ಏಕೆ ಮುಂದಾಗಬಾರದು. ಕೇವಲ 20,000 ಕೋಟಿ ರೂ.ಗೇ ಏಕೆ ನಿಲ್ಲಬೇಕು?

ಇದು ಆರ್ಥಿಕದಲ್ಲಿ ಮತ್ತೆ ಚೈತನ್ಯವನ[...] ಮೂಡಿಸುವುದರೊಂದಿಗೆ ಭಾರತೀಯರ ಜೀವ[...] ಮಟ್ಟವನ್ನೂ ಹೆಚ್ಚಿಸುತ್ತದೆ. ಈ ನಿಟ್ಟಿನಲ್ಲಿ ಪ್ರಸ[...] ಜಾಗತಿಕ ಬಿಕ್ಕಟ್ಟನ್ನು ಭಾರತ ಒಂದು ಅವಕಾ[...] ಎಂದೂ ಪರಿಗಣಿಸಬಹುದು ಎನ್ನುತ್ತಾ[...] ಸೀತಾರಾಂ ಯೆಚುರಿ. ಭಾರತದ ಆಂತರಿ[...] ಉಳಿತಾಯ ದರ ಒಟ್ಟು ಅಂತ[...] ಉತ್ಪನ್ನ(ಜಿಡಿಪಿ)ದ 35.5 ಶೇ. ಇರುವಾಗ ಇಂತ[...] ಬೃಹತ್ ಪ್ರಮಾಣದ ಸಾರ್ವಜನಿಕ ಹೂಡಿಕೆ[...] ಸಂಪನ್ಮೂಲಗಳನ್ನು ಸಂಗ್ರಹಿಸುವುದು ಕಷ್ಟ[...] ಕೆಲಸವೇನಲ್ಲ. ಆದರೆ ಇಲ್ಲಿಯೇ ಈ ಲೇಖನದ ಆರಂಭದಲ್ಲಿ ಹೇಳಿದಂತೆ ಸರಕಾರದ ಆದ್ಯತೆಗಳೇನ[...] ಎಂಬುದು ಮುಖ್ಯವಾಗುತ್ತದೆ, ಅದು 'ಲಾಭಗಳಿಗಿಂ[...] ಜನರು ಮುಖ್ಯ' ಎಂದು ಪರಿಗಣಿಸುತ್ತದೆಯೆ[...] ಎಂಬುದು ಮುಖ್ಯವಾಗುತ್ತದೆ.

ಭಾರತ ಸರಕಾರದ ಎರಡು ಪ್ಯಾಕೇಜುಗಳು ಆ[...] ದಿಕ್ಕಿನಲ್ಲಿ ಯೋಚಿಸುವ ಬದಲು, ಈ ಬಿಕ್ಕಟ್ಟಿನಿಂದ ಪಾಠ ಕಲಿಯುವ ಬದಲು, ಚೀನಾದ ಉದಾಹರಣೆಯನ್ನಾದರೂ ನೋಡುವ ಬದಲು ಕೇವಲ ದೊಡ್ಡ ಬಂಡವಾಳಿಗರ, ಅದೇ[...] ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಸಂಪನ್ನ ವಿಭಾಗಗಳ ಹಿತ ರಕ್ಷಿಸುವುದಷ್ಟೆ ಮುಖ್ಯ ಎಂದೇ ಬಗೆದಿರುವಂತೆ ಕಾಣುತ್ತದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ಎದುರಿಸುವುದು ಹೇಗೆ?

ಕರ್ನಾಟಕಕ್ಕೆ ಗುಜರಾತ್ ಮಾದರಿಯೋ? ಬಂಗಾಳ ಮಾದರಿಯೋ?

ಒಂದು ಕಡೆ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರು ಭಾರತದ ಪ್ರಧಾನಿಯಾಗಬೇಕೆಂದು ದೇಶದ ದೊಡ್ಡ ಬಂಡವಾಳಿಗರ ವಲಯದಿಂದ ಕೂಗು ಎದ್ದಿರುವಾಗಲೇ ಅತ್ತ ಆ ಹೊಳೆಯುತ್ತಿರುವ ಗುಜರಾತ್ ರಾಜ್ಯದಲ್ಲಿ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಆತ್ಮಹತ್ಯೆಗಳ ಸರಣಿ ಆರಂಭವಾಗಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ದೇಶವನ್ನು ತಟ್ಟಿದೆ. ಗುಜರಾತನ್ನೂ ತಟ್ಟಿದೆ. ಗುಜರಾತಿನ ಒಂದು ದೊಡ್ಡ ಉದ್ದಿಮೆಯಾದ ವಜ್ರದ ಉದ್ದಿಮೆಯಲ್ಲಿ ಈಗಾಗಲೇ 5 ಲಕ್ಷ ಜನರು ಕೆಲಸ ಕಳೆದುಕೊಂಡಿದ್ದಾರೆ. ದೀಪಾವಳಿ ಹಬ್ಬದ ನಂತರ ದೀರ್ಘ ರಜೆ ಕೊಟ್ಟು ಕಾರ್ಮಿಕರನ್ನು ಸಾಗಹಾಕಿದ ವಜ್ರ ವ್ಯಾಪಾರಿಗಳು ಎಷ್ಟೋ ಜನ ತಮ್ಮ ಘಟಕವನ್ನೇ ಪುನರಾಂಭ ಮಾಡಿಲ್ಲ. ಗುಜರಾತ್ ರಾಜ್ಯದಲ್ಲಿ ಸುಮಾರು 10 ಲಕ್ಷ ಜನ ಈ ಉದ್ದಿಮೆಯನ್ನವಲಂಬಿಸಿದ ಕಾರ್ಮಿಕರಿದ್ದಾರೆ. ಉಳಿದ ಕಾರ್ಮಿಕರೂ ಆತಂಕದ [illegible] ಎದುರಿಸುತ್ತಿದ್ದಾರೆ.

ಆದರೆ ನರೇಂದ್ರ ಮೋದಿ ತಮ್ಮ ರಾಜ್ಯಕ್ಕೆ ಹರಿದು ಬರುತ್ತಿರುವ ವಿದೇಶಿ ಬಂಡವಾಳದ ಬಗೆಗೆ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಾ ತಿರುಗುತ್ತಿದ್ದಾರೇ ಹೊರತು ಬೀದಿಗೆ ಬಿದ್ದ ಕಾರ್ಮಿಕರ ಕಷ್ಟ ಕೇಳಲು ಅವರಿಗೆ 'ಪುರುಸೊತ್ತಿಲ್ಲ'.

ಆತ್ಮಹತ್ಯೆ ಸಾಲು

ಉದ್ದಿಮೆ ಬಿಕ್ಕಟ್ಟಿನಲ್ಲಿದ್ದರೂ ವಜ್ರದ ವ್ಯಾಪಾರಿಗಳ ವೈಭೋಗಕ್ಕೇನು ಕೊರತೆಯಾಗಿಲ್ಲ. ಎಷ್ಟೆಂದರೂ ವಜ್ರದ ವ್ಯಾಪಾರಿಗಳಲ್ಲವೇ? ಆದರೆ ವಜ್ರ ಕತ್ತರಿಸುವ, ಅದಕ್ಕೆ ಮೆರುಗು ನೀಡುವ ಕಾರ್ಮಿಕರು ಮಕ್ಕಳನ್ನು ಶಾಲೆ ಬಿಡಿಸುತ್ತಿದ್ದಾರೆ. ಕೆಲವು ದಾನಿ ಸಂಘ ಸಂಸ್ಥೆಗಳು ಶಾಲಾ ಶುಲ್ಕಕ್ಕೆ ಸಹಾಯ ನೀಡುವ ಕಡೆ ಜನ ಮುಗಿಬಿದ್ದು ಲಾಠಿ ಪ್ರಹಾರಗಳು ನಡೆಯುತ್ತಿವೆ. ಇದುವರೆಗೆ ರಾಜ್ಯದಲ್ಲಿ 71 ಜನ ವಜ್ರ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ರಿಕೆಗಳ ಪುಟಗಳಲ್ಲಿ ಲಾಠಿ ಪ್ರಹಾರ, ಆತ್ಮಹತ್ಯೆ ಸುದ್ದಿಗಳೂ ಹಾಗೂ ವಜ್ರದ ವ್ಯಾಪಾರಿಗಳ ಮನೆ ಮೇಲೆ ಆದಾಯ ತೆರಿಗೆ ದಾಳಿಗಳು ನಡೆದು ಅಪಾರ ಅಕ್ರಮ ಆಸ್ತಿ ಪಾಸ್ತಿ ಸಿಗುತ್ತಿರುವ ವರದಿಗಳೂ ಒಟ್ಟೊಟ್ಟಿಗೆ ಕಾಣುತ್ತಿವೆ. ಮಾನವೀಯತೆಯ ಆಧಾರದ ಮೇಲೆ ಕೆಲವು ಜಾತಿ ಸಂಘಗಳು ನೀಡುತ್ತಿರುವ ಒಂದಷ್ಟು ಪರಿಹಾರ ಬಿಟ್ಟರೆ ಸರ್ಕಾರದ ಕಡೆಯಿಂದ ಕಾರ್ಮಿಕರ ತಟ್ಟೆಗೆ ಏನೂ ಬೀಳುತ್ತಿಲ್ಲ.

ಇದು 'ಉದಯಿಸುತ್ತಿರುವ ಪ್ರಧಾನಿ'ಯ ಕತೆ. ಇನ್ನು 'ಕಾಯುತ್ತಿರುವ ಪ್ರಧಾನಿ' ಎಲ್.ಕೆ.ಅಡ್ವಾಣಿಯವರೂ ಇದೇ ರಾಜ್ಯದ ಸಂಸದರಾಗಿ ಈ ಬಗ್ಗೆ ಏನೊಂದು ತುಟಿ ಬಿಚ್ಚಿಲ್ಲ.

[illegible]

ಕರ್ನಾಟಕ ರಾಜ್ಯದಲ್ಲಿ

ನರೇಂದ್ರ ಮೋದಿ ಆಡಳಿತವನ್ನು ಹಾಡಿಹೊಗಳುವ ನಮ್ಮ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನವರಿಗೆ ಸಂಘ ಪರಿವಾರದ ವಿವಿಧ ದಳಗಳು, ದಳಪತಿಗಳು ನಡೆಸುವ ದಾಳಿಗಳನ್ನು ಸಮರ್ಥಿಸುವುದು, ಅವರು ಸೃಷ್ಟಿಸುವ



ಮೋದಿ ಕೈಗೆ ಕತ್ತಿ - ಸಂಕೇತವೇ?

ಪರಿಸ್ಥಿತಿಯನ್ನು ನಿಭಾಯಿಸುವುದೇ ಕೆಲಸವಾಗಿದೆ. ರಾಜ್ಯದೊಳಗೆ ಏನು ನಡೆಯುತ್ತಿದೆ ಎನ್ನುವುದರ ಪರಿಯೇ ಅವರಿಗೆ ಇದ್ದಂತಿಲ್ಲ. ಬೆಂಗಳೂರು ನಗರ ಕೇಂದ್ರದ ಅವಿನ್ಯೂ ರಸ್ತೆಯ ಆಭರಣ ಮಳಿಗೆಗಳಲ್ಲಿ ಸುಮಾರು 10 ಸಾವಿರ ಜನ ಈಗಾಗಲೇ ಕೆಲಸ ಕಳೆದುಕೊಂಡಿದ್ದಾರೆ. ಗಂಜಾಂ ನಾಗಪ್ಪ, ಪಿಕಾಕ್ ಮುಂತಾದ ಸಂಸ್ಥೆಯಲ್ಲಿಯೂ ಸುಮಾರು ಜನರನ್ನು ಕೆಲಸದಿಂದ ಕೈಬಿಡಲಾಗಿದೆ.

ಇನ್ನೂ ಬೆಂಗಳೂರಿನ ಹೊಸೂರು ರಸ್ತೆ, ತುಮಕೂರು ರಸ್ತೆಯು ಪೀಣ್ಯ ಹೀಗೆ ಬೆಂಗಳೂರಿನಾದ್ಯಂತ ಹರಡಿಕೊಂಡಿರುವ ಹತ್ತಾರು, ನೂರಾರು ಕೈಗಾರಿಕೆಗಳು ಆರ್ಥಿಕ ಬಿಕ್ಕಟ್ಟಿನ ಹೊಡೆತಕ್ಕೆ ತತ್ತರಿಸಿವೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಸಿದ್ಧ ಉಡುಪು ಕಾರ್ಖಾನೆ ಹೊಂದಿರುವ ಸಾಯಿ ಗಾರ್ಮೆಂಟ್ಸ್‌ನ ಸುಮಾರು 30 ಸಾವಿರ ಜನ ಕಾರ್ಮಿಕರು ಈಗಾಗಲೇ ಬೀದಿಗೆ ಬಿದ್ದಿದ್ದಾರೆ. ಹೀರೋಹೊಂಡ ಬೈಕ್ ಕಾರ್ಖಾನೆಗೆ ಹಾರ್ನ್ ಪೂರೈಸುವ ಬೆಂಗಳೂರಿನ 'ಅಡ್ಡ' ಇಂಜಿನಿಯರಿಂಗ್ ಕಾರ್ಖಾನೆ- ಆಟೋಮೊಬೈಲ್ ಕಾರ್ಖಾನೆ ಮುಚ್ಚಿ ಹೋಗಿದೆ. ಸುಮಾರು 120 ಮಂದಿ ಕಾರ್ಮಿಕರು [illegible] ವಿಎಕ್ಸ್‌ಎಲ್ ಇನ್‌ಸ್ಟ್ರುಮೆಂಟ್ ಸಂಸ್ಥೆ ಮುಚ್ಚಿದ್ದು ಈ ಸಾಫ್ಟ್ ವೇರ್ ಸಂಸ್ಥೆಯ 400 ಜನರು ದಿಕ್ಕು ಕಾಣದಂತಾಗಿದ್ದಾರೆ.

ಇದು ಬೆಂಗಳೂರು ನಗರದ ಕೆಲವೊಂದು ಸಣ್ಣ ಸಣ್ಣ ಉದಾರಹಣೆಗಳಷ್ಟೇ. ಆರ್ಥಿಕ ಬಿಕ್ಕಟ್ಟು ತನ್ನ ಕರಿ ನೆರಳನ್ನು ಇಡೀ ರಾಜ್ಯದ ಮೇಲೆ ಚಾಚುತ್ತಿದೆ.

ಮೊನ್ನೆ ಬೆಳಗಾವಿಯಲ್ಲಿ ನಡೆದ ಅಧಿವೇಶನ ಇಂತಹ ಪರಿಸ್ಥಿತಿಯ ಕುರಿತು ಯಾವುದೇ ಗಂಭೀರ ಚರ್ಚೆ ಕಾಣಲಿಲ್ಲ. ಕಣ್ಮುಚ್ಚುತ್ತಿರುವ ಕೈಗಾರಿಕೆಗಳನ್ನು ಉಳಿಸಲು ನಡು ಬೀದಿಯಲ್ಲಿ ನಿಂತಿರುವ ಕಾರ್ಮಿಕರ ಕೈ ಹಿಡಿಯುವ ಯಾವುದೇ ಕ್ರಮವೂ ಸರ್ಕಾರದ ಬಳಿ ಇಲ್ಲ.

'ಗುಜರಾತ್' ಮಾದರಿ ಆಡಳಿತ ಮಾಡುತ್ತೇವೆ ಎನ್ನುವವರು ಬೇರೆ ಏನು ತಾನೇ ಮಾಡಿಯಾರು. ಅವರೇನು ಬಂಗಾಳದ ರೀತಿ ಆಡಳಿತ ಮಾಡುತ್ತೇವೆ ಎಂದಿಲ್ಲವಲ್ಲ.

ಪಶ್ಚಿಮಬಂಗಾಳದಲ್ಲಿ ಆರ್ಥಿಕ ಬಿಕ್ಕಟ್ಟಿನಿಂದ ತೊಂದರೆಗೊಳಗಾಗಿರುವ ಕಾರ್ಖಾನೆಗಳ ಕಾರ್ಮಿಕರಿಗೆ ಸರ್ಕಾರ ತಾತ್ಕಾಲಿಕ ಪರಿಹಾರ ನೀಡುತ್ತಿದೆ.

ಪರಿಹಾರಕ್ಕೆ ಆಗ್ರಹ

ಸಿಐಟಿಯುಗೆ ಸೇರ್ಪಡೆ ಹೊಂದಿರುವ ಕರ್ನಾಟಕ ವರ್ಕರ್ಸ್ ಯೂನಿಯನ್, ಸಂಘಟನೆಯು ಕಾರ್ಮಿಕ ಸಮುದಾಯದ ಈ ಗಂಭೀರ ಪ್ರಶ್ನೆಯನ್ನೆತ್ತಿಕೊಂಡು ಪ್ರತಿಭಟನೆ ನಡೆಸಿದೆ. ಜನವರಿ 22,2009 ರಂದು ಬೆಂಗಳೂರಿನ ಮಹಾತ್ಮಗಾಂಧಿ ಪ್ರತಿಮೆಯ ಮುಂದೆ ಸಾಮೂಹಿಕ ಧರಣಿ ನಡೆಸಿದೆ.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ:ವಿ.ಜೆ.ಕೆ.ನಾಯರ್ ಧರಣಿಯನ್ನು ಉದ್ಘಾಟಿಸಿದರು. ಕರ್ನಾಟಕ ವರ್ಕರ್ಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಇ.ಕೆ.ಎನ್.ರಾಜನ್, ಜಂಟಿ ಕಾರ್ಯದರ್ಶಿ ಮೆಲ್ವಿಯೋರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ ನಿಯೋಗವು ರಾಜ್ಯದಲ್ಲಿಯೂ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಕಾರ್ಮಿಕರಿಗೆ ಸಹಾಯ ಹಸ್ತ ಚಾಚಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ. ○

ಪ್ರಶಸ್ತಿಯ ವಿವಾದ – ಸಿನಿಮಾ....

ಪುಟ 16 ರಿಂದ

ಪರಿಸ್ಥಿತಿಯಲ್ಲಿ ಕರ್ನಾಟಕದ ರಾಜಧಾನಿ, ಸುಮಾರು 70 ಲಕ್ಷ ಜನಸಂಖ್ಯೆ ಇರುವ ಬೆಂಗಳೂರಿನಂಥಾ ಬೆಂಗಳೂರಿನಲ್ಲಿ ಒಂದು ಗಂಭೀರ ಚಿತ್ರವನ್ನು ಕನಿಷ್ಠ ಒಂದು ಥಿಯೇಟರ್‌ನಲ್ಲಿ ಬಿಡುಗಡೆ ಮಾಡುವುದು ಕಷ್ಟ ಅನ್ನುವಂತಹ ಪರಿಸ್ಥಿತಿ ಇದೆ ಅಂದರೆ ಸಾಹಿತ್ಯಕ್ಕೆ ಏಳು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಕರ್ನಾಟಕದ ನಾಗರೀಕತೆ - ಸಂಸ್ಕೃತಿ ಯಾವ ಅಧೋಗತಿಯ ಹಂತವನ್ನು ತಲುಪಿದೆ ಅನ್ನೋದಕ್ಕೆ ಸಾಕ್ಷಿ.

ಹಣಕಾಸಿನ ದೃಷ್ಟಿಯ ಲಾಭ ನಷ್ಟಗಳ ಲೆಕ್ಕಾಚಾರವನ್ನು ಮಾಡದೇ ಜನ ಕಾಳಜಿಯ ದೃಷ್ಟಿಯಿಂದ ನಡೆಯುವ ಒಂದೇ ಒಂದು ಸಿನಿಮಾ ಮಂದಿರವನ್ನು ಸುಮಾರು ನಲ್ವತ್ತು ಸಾವಿರ ಕೋಟಿ ರೂಪಾಯಿಗಳ ವಾರ್ಷಿಕ ಬಜೆಟ್ ಮಂಡಿಸುವ ಕರ್ನಾಟಕ ಸರ್ಕಾರ ವ್ಯವಸ್ಥೆ ಮಾಡುವುದಿಲ್ಲ ಎಂದರೆ, ಮತ್ತೇ ಯಾರೂ ಕೂಡ ಇಂತಹದ್ದೊಂದು ವ್ಯವಸ್ಥೆ ಬೇಕು ಅಂತ ಗಂಭೀರವಾಗಿ ಮಾತನಾಡುವುದಿಲ್ಲ ಎಂದರೆ ಎಂಥಾ ದುರಂತದ ಸ್ಥಿತಿ.

ಇಂತಹ ಒಂದು ಅಸಾಂಸ್ಕೃತಿಕ ವಾತಾವರಣದಿಂದಾಗಿಯೇ ಹಿಂದುತ್ವವಾದಿ ತಾಲಿಬಾನರು ಶಾಲಾ-ಕಾಲೇಜುಗಳ ಪ್ರವಾಸದ ಬಸ್‌ಗಳ ಮೇಲೆ, ಅದರಲ್ಲಿ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಎಲ್ಲರೂ ಒಟ್ಟಾಗಿ ಪ್ರವಾಸ ಹೋಗುತ್ತಿದ್ದಾರೆ ಎನ್ನುವ ಕಾರಣಕ್ಕೆ ಸಂಸ್ಕೃತಿ ಹೆಸರಿನಲ್ಲಿ ದಾಳಿ ಮಾಡುತ್ತಿರುವುದು. ಸಾಂಸ್ಕೃತಿಕ ಸಂಘಟನೆಗಳೂ ಇದನ್ನು ಗಂಭೀರವಾಗಿ ಗಮನಕ್ಕೆ ತೆಗೆದುಕೊಂಡಿಲ್ಲ ಅನ್ನುವುದು ಬಹಳ ಆಶ್ಚರ್ಯದ ವಿಷಯವಾಗಿದೆ.

ಪಬ್‌ಗೆ ಹೋಗಿದ್ದಾರೆ ಎನ್ನುವ ಕಾರಣಕ್ಕೆ ಮಹಿಳೆಯರನ್ನು ಬೇಟೆಯ ಪ್ರಾಣಿಗಳನ್ನು ಬಡಿಯುವಂತೆ ಬಡಿಯುವ ಸ್ವಘೋಷಿತ ಸಂಸ್ಕೃತಿ ರಕ್ಷಕರ ಗೂಂಡಾಗಿರಿಗೆ ಲಾಭ ನಷ್ಟದ ಹಂಗಿಲ್ಲದೇ ನಡೆಯಬಹುದಾದ ಒಂದು ಸಿನಿಮಾ ಕಾಂಪ್ಲೆಕ್ಸ್, ಒಂದು ರಂಗ ಮಂದಿರ ಸಾಂಸ್ಕೃತಿಕವಾಗಿ ನೀಡುವ ಉತ್ತರವಾಗಬಹುದು. ಸಂಸ್ಕೃತಿಯನ್ನು ಕಟ್ಟುವ ಕೆಲಸದ ಒಂದು ಮೆಟ್ಟಿಲೂ ಆಗಬಹುದು. ಜನಪರ ಚಳುವಳಿಗಳೂ ಕೂಡ ಈ ಬಗೆಗೆ ಚಿಂತಿಸಬೇಕು.

ಪಶ್ಚಿಮ ಬಂಗಾಳ, ಕೇರಳದಂತಹ ರಾಜ್ಯಗಳಲ್ಲಿ ಗಂಭೀರ, ಚಿತ್ರಗಳೂ ಕೂಡ ಜನರನ್ನು ತಲುಪುವಂತಹ ಒಂದು ಪರಿಸರ ಇದೆ ಎನ್ನುವುದು ಹಲವರಿಗೆ ತಿಳಿದಿರಬಹುದು. ಅದರಲ್ಲಿ ಅಲ್ಲಿನ ಜನ ಚಳುವಳಿಗಳ ಪಾತ್ರ ದೊಡ್ಡದು. ಜನ ಸಮುದಾಯಗಳ ಉನ್ನತ ರಾಜಕೀಯ, ಸಾಮಾಜಿಕ ಪ್ರಜ್ಞೆ ಇಂತಹ ಸ್ಥಿತಿಯೊಂದನ್ನು ನಿರ್ಮಿಸಿದೆ. ಈ ನಿಟ್ಟಿನಲ್ಲಿ ಒಂದು ಸರ್ಕಾರ ಏನು ಮಾಡಬಹುದು ಎಂಬುದಕ್ಕೂ ಅಲ್ಲಿನ ಎಡ ನೇತೃತ್ವದ ಸರ್ಕಾರಗಳು ಮಾದರಿಯಾಗಿವೆ. ಅದನ್ನು ಕನ್ನಡ ಸಿನಿಮಾ ನಿರ್ದೇಶಕರ ಮಾತಿನಲ್ಲೇ ಗುರುತಿಸಬಹುದು.

ಪ್ರಸಕ್ತ ಸಾಲಿನ ಎರಡನೇ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದ 'ಮೊಗ್ಗಿನ ಜಡೆ' ನಿರ್ದೇಶಕರಾದ ರಾಮದಾಸನಾಯ್ಡು, 'ಸುಧಾ' ಪತ್ರಿಕೆಗೆ ಇತ್ತೀಚೆಗೆ ನೀಡಿರುವ ಸಂದರ್ಶನವೊಂದರಲ್ಲಿ ಹೀಗೆ ಹೇಳಿದ್ದಾರೆ.

'ಕೆಲವು ಸರ್ಕಾರಗಳು ಇದಕ್ಕೆ ಪರಿಹಾರವನ್ನು ಕಂಡುಕೊಂಡಿವೆ. ಕೇರಳ ಸರ್ಕಾರ ಇಂತಹ ಚಿತ್ರಗಳ ಪ್ರದರ್ಶನಕ್ಕೆಂದೇ ಕೈರಳಿ ಎಂಬ ಸಿನಿಮಾ ಕಾಂಪ್ಲೆಕ್ಸ್ ನಿರ್ಮಿಸಿದೆ. ಪಶ್ಚಿಮ ಬಂಗಾಳ ಕೋಲ್ಕತ್ತಾದಲ್ಲಿ ನಂದನ್ ಕಾಂಪ್ಲೆಕ್ಸ್ ನಿರ್ಮಿಸಿದೆ. ಇಲ್ಲೆಲ್ಲಾ ವಿಶ್ವ ಮಟ್ಟದ ಕ್ಲಾಸಿಕ್‌ಗಳ ಪ್ರದರ್ಶನ, ಮರು ಪ್ರದರ್ಶನ ನಿರಂತರ ನಡೆಯುತ್ತಿರುತ್ತವೆ', ಸಾಂಸ್ಕೃತಿಕ ಕ್ಷೇತ್ರದ ಜನರು ಸಂಘಟನೆಗಳೂ ಈಗಲಾದರೂ ಈ ಪ್ರಶ್ನೆ ಎತ್ತುತ್ತವೆಯೋ?

ಇದೀಗ ಹಿಂದುತ್ವ ತಾಲಿಬಾನ್?....

ಪುಟ 1 ರಿಂದ

ಆರೆಸ್ಸೆಸ್‌ನ ಅಜೆಂಡಾಗೆ ಬದಲಿಸುವ ಒಂದು ದೊಡ್ಡ ಹುನ್ನಾರದ ಭಾಗವಾಗಿ ಕೋಮುವಾದಿ ಧ್ರುವೀಕರಣವನ್ನು ತೀವ್ರಗೊಳಿಸಲು, ಆಮೂಲಕ ಏನಾದರೂ ರಾಜಕೀಯ ಪ್ರಯೋಜನ ಗಿಟ್ಟಿಸುವ ನಿರೀಕ್ಷೆಯಿಂದ ಇಂತಹ ದಾಂಧಲೆಗಳನ್ನು ಜಾಗೃತಿಯ ಹೆಸರಿನಲ್ಲಿ ಮಾಡಲಾಗುತ್ತಿದೆ.

ಕರ್ನಾಟಕದ ಆಡಳಿತ ಈ ಹಲ್ಲೆಗಳ ವಿರುದ್ಧ ಸಾರ್ವಜನಿಕ ಆಕ್ರೋಶ ಹೆಚ್ಚುತ್ತಿರುವುದರಿಂದ ಈ ಹಲ್ಲೆಯಲ್ಲಿ ಭಾಗಿಯಾಗಿದ್ದ 40ಕ್ಕೂ ಹೆಚ್ಚು ಮಂದಿಯಲ್ಲಿ ಇದುವರೆಗೆ 31 ಜನರನ್ನು ಬಂಧಿಸಿದೆ. ಎಸ್ಆರ್‌ಎಸ್ ಮುಖ್ಯಸ್ಥ, ಪ್ರಮೋದ್ ಮುತಾಲಿಕ್ ಬಂಧನವಾಗಿದೆ, ಯುವತಿಯರ ಮೇಲಿನ ಈ ಹಲ್ಲೆಗಾಗಿ ಅಲ್ಲ, ಬೇರೊಂದು ಅಪರಾಧಕ್ಕೆ-ದಾವಣಗೆರೆಯಲ್ಲಿ ಕೋಮು ಅಸಾಮರಸ್ಯ ತಂದದ್ದಕ್ಕಾಗಿ.

ಮೈನಡುಗಿಸುವ ಸಾಮ್ಯತೆ !

ದಕ್ಷಿಣ ಕನ್ನಡದಲ್ಲಿ ಇಂತಹ 'ಜಾಗೃತಿ'ಕೋರ ಹಲ್ಲೆಗಳು ಸಾಮಾನ್ಯವಾಗುತ್ತಿರುವಂತೆ ಕಾಣುತ್ತದೆ. ಬಿಜೆಪಿ ರಾಜ್ಯ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಈ ರೀತಿಯ ಕನಿಷ್ಟ 14 ಘಟನೆಗಳು ದಾಖಲಾಗಿವೆ, ಈ ಪಡೆಗಳಿಗೆ ಇಂತಹ ಅನಾಗರಿಕ ಹಲ್ಲೆಗಳನ್ನು ಹರಿಯ ಬಿಡಲು ಕರ್ನಾಟಕದಲ್ಲಿ ಬಿಜೆಪಿ ಸರಕಾರ ಅಗತ್ಯ ಪ್ರೋತ್ಸಾಹ ಮತ್ತು ಪೋಷಣೆ ಒದಗಿಸುತ್ತಿದೆ ಎಂಬುದು ಸ್ಪಷ್ಟ. ಕರ್ನಾಟಕದ ಮುಖ್ಯಮಂತ್ರಿಗಳ ಮತ್ತು ಗೃಹಮಂತ್ರಿಗಳ ಪ್ರತಿಕ್ರಿಯೆಗಳು ಈ ಸಂದೇಹವನ್ನು ಮತ್ತೊಮ್ಮೆ ದೃಢಪಡಿಸಿವೆ. ಮುಖ್ಯಮಂತ್ರಿಗಳು "ಕಠಿಣ ಕ್ರಮ" ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ, ಆದರೆ ಮಾಧ್ಯಮ ವರದಿಗಳ ಪ್ರಕಾರ ಈ ಎಸ್ಆರ್‌ಎಸ್ಸನ್ನು ನಿಷೇಧಿಸುವ ಕುರಿತ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಗೃಹಮಂತ್ರಿಗಳು ಈ ದಾಂಧಲೆಕೋರತನವನ್ನು, ಯುವತಿಯರನ್ನು ಪೀಡಿಸಿದ್ದನ್ನು ಪ್ರತಿಭಟಿಸಿದವರನ್ನೇ ಅವರು ಸಣ್ಣ ವಿಷಯವನ್ನು ದೊಡ್ಡ ಪ್ರಶ್ನೆಯಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ದೂಷಿಸಿದರು. ಆರೆಸ್ಸೆಸ್ ವಕ್ತಾರ ಪುಂಡಾಟಿಕೆಯನ್ನು ಖಂಡಿಸುತ್ತೇವೆ ಎನ್ನುತ್ತಲೇ, ಪಬ್ ಸಂಸ್ಕೃತಿ 'ಭಾರತೀಯತೆಗೆ ಪರಕೀಯ' ಎಂದಿದ್ದಾರೆ. "ಆದರೆ ಇದನ್ನು ಸಾರ್ವಜನಿಕ ಶಿಕ್ಷಣದಿಂದ ಮಾಡ ಬೇಕಾಗಿದೆಯೇ ಹೊರತು ಸಾರ್ವಜನಿಕ ಹಿಂಸೆಯಿಂದ ಅಲ್ಲ" ಎನ್ನುವಾಗ ವಾಸ್ತವವಾಗಿ ಆತ "ನೈತಿಕ ಪೋಲೀಸ್‌ಗಿರಿ"ಯನ್ನು ಸಮರ್ಥಿಸಿ ಕೊಂಡಂತೆ ಕಾಣುತ್ತದೆ. ತಾಲಿಬಾನ್ ಕೂಡಾ ತಾನು ನೀಡುತ್ತಿರುವುದು ಹಿಂಸಾತ್ಮಕ ಶಿಕ್ಷೆಯ ಮೂಲಕ 'ಸಾರ್ವಜನಿಕ ಶಿಕ್ಷಣ'ವೇ ಎಂದು ಹೇಳುತ್ತಿದೆ! ಇವರಿಬ್ಬರೂ ಅನುಸರಿಸಿದ ವಿಧಾನದಲ್ಲಿನ ಸಾಮ್ಯತೆ ನಿಜವಾಗಿಯೂ ಮೈನಡುಗಿಸುವಂತದ್ದು- ತಾಲಿಬಾನ್ ಬಾಮಿಯಾನ್‌ದಲ್ಲಿ ಬುದ್ಧನ ಪ್ರತಿಮೆಗಳನ್ನು ಧ್ವಂಸ ಮಾಡಿತು, ಇಲ್ಲಿ ಹಿಂದುತ್ವ ಪಡೆಗಳು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದವು!

ಬಿಜೆಪಿ ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡಂದಿನಿಂದ ಆರೆಸ್ಸೆಸ್‌ನ ವಿಭಿನ್ನ ಕಬಂಧ ಬಾಹುಗಳ ಚಟುವಟಿಕೆಗಳು ತೀವ್ರಗೊಂಡಿವೆ. ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸಿ, ಬಾಬಾಬುಡನ್‌ಗಿರಿ ವಿವಾದಗಳಂತಹುದನ್ನು ಸೃಷ್ಟಿಸಿ ಹೊಸ ಸೆಳೆತಗಳನ್ನು ನಿರ್ಮಿಸಿ ಭಜರಂಗ ದಳ, ವಿಹೆಚ್‌ಪಿ, ಎಸ್ಆರ್‌ಎಸ್, ಹಿಂದು ಜನ ಜಾಗೃತಿ ಸಮಿತಿ ಮತ್ತಿತರ ಪಡೆಗಳು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ, ನಿರ್ದಿಷ್ಟವಾಗಿ ಕ್ರೈಸ್ತರ ವಿರುದ್ಧ ಹಲ್ಲೆಗಳನ್ನು ತೀವ್ರಗೊಳಿಸಿವೆ. ಬಿಜೆಪಿ ಸರಕಾರ ಬಂದ ಮೇಲೆ ಕರ್ನಾಟಕದಲ್ಲಿ ಕ್ರೈಸ್ತ-ವಿರೋಧಿ ಹಿಂಸಾಚಾರ ತೀವ್ರವಾಗಿ ಹೆಚ್ಚಿದೆ. ಸೆಪ್ಟಂಬರ್ 2008ರ ಒಂದು ತಿಂಗಳಲ್ಲೇ ರಾಜ್ಯದಲ್ಲಿ ಹಲವೆಡೆ ವಿವಿಧ ಚರ್ಚುಗಳ ಮೇಲೆ ದಾಳಿಗಳನ್ನು ನಡೆಸಿ ದಾಂಧಲೆಯೆಬ್ಬಿಸಲಾಯಿತು. ಈ ಹಲ್ಲೆಗಳು ಆಗ ಎಂತಹ ಸನ್ನಿವೇಶ ನಿರ್ಮಿಸಿದವೆಂದರೆ ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ಒಂದು ಸಲಹಾ ಪತ್ರವನ್ನು ಕಳಿಸಬೇಕಾಗಿ ಬಂದಿತ್ತು. ಆದರೆ ರಾಜ್ಯ ಸರಕಾರ ಕ್ರೈಸ್ತರು ಹಿಂದುಗಳ ಮತಾಂತರ ಮಾಡುತ್ತಿರುವುದು ಈ ಹಲ್ಲೆಗಳಿಗೆ ಪ್ರಚೋದನೆ ಎಂದು ಹೇಳುತ್ತಲೇ ಇತ್ತು.

ಈಗ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಆರೆಸ್ಸೆಸ್ ಮತ್ತು ಹಿಂದುತ್ವ ಪಡೆಗಳು ತಮ್ಮ 'ಹಿಂದೂ ವೋಟ್ ಬ್ಯಾಂಕ್'ನ್ನು ಕ್ರೋಢೀಕರಿಸಲು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯ ಮೇಲೆ ಮತ್ತು ಈ ದೇಶದ ಸಮ್ಮಿಶ್ರ ಬಹುಳತೆಯ ಪರಂಪರೆಗಳ ಮೇಲೆ ವಿಭಿನ್ನ ರೀತಿಯ ಹಲ್ಲೆಗಳನ್ನು, ದಾಳಿಗಳನ್ನು ನಡೆಸುವ ಹುನ್ನಾರಗಳಿಗಿಳಿಯುತ್ತದೆ ಎಂಬುದು ಸ್ಪಷ್ಟ. ಈ ಪ್ರಕ್ರಿಯೆಯಲ್ಲಿ ಅವರು ಭಾರತದ ಐಕ್ಯತೆ ಮತ್ತು ಸಮಗ್ರತೆಯ ಮೇಲೆಯೇ ಮತ್ತು ಅದರ ಸಾಮಾಜಿಕ ಹಂದರದ ಸ್ಥಿರತೆಯ ಮೇಲೆ ಒಂದು ಗಂಭೀರ ಸವಾಲು ಒಡ್ಡುವುದನ್ನು ಮುಂದುವರೆಸುತ್ತಾರೆ. ಇಂತಹ ಹಿಂದುತ್ವ ತಾಲಿಬಾನೀಕರಣ, ಜತೆಗೆ ಹಿಂದುತ್ವ ಭಯೋತ್ಪಾದನೆಯ ಬೆಳವಣಿಗೆ ನಮ್ಮ ದೇಶದ ಮತ್ತು ಇಲ್ಲಿಯ ಜನರ ಹಿತದೃಷ್ಟಿಯಿಂದ ಇಂತಹ ಶಕ್ತಿಗಳು ಕೇಂದ್ರದಲ್ಲಿಯೂ, ರಾಜ್ಯಗಳಲ್ಲಿಯೂ ಸರಕಾರದ ಲಗಾಮು ಹಿಡಿಯದಂತೆ ಮಾಡುವುದು ಎಷ್ಟು ಅಗತ್ಯ ಎಂಬುದನ್ನು ಎತ್ತಿ ತೋರಿಸುತ್ತವೆ. ಈ ಸವಾಲನ್ನು ಎದುರಿಸಲು ಎಲ್ಲಾ ಭಾರತೀಯ ದೇಶಪ್ರೇಮಿಗಳು ಒಗ್ಗಟ್ಟಿನಿಂದ ಎದ್ದು ನಿಲ್ಲಬೇಕು.

.....ಮೋದಿಗೆ ಮಾದರಿ - ಮಂಗಳೂರು

ಪುಟ 9 ರಿಂದ

ಲಾರಿಗಳಿಗೆ ಕಲ್ಲು ತೂರಿ ಬೆಂಕಿ ಹಚ್ಚುತ್ತಾರೆ. ಇತ್ತ ಮಂಗಳೂರಿನಲ್ಲಿ ರಾಮಸೇನೆಯ ವಿರುದ್ಧ ಪ್ರತಿಭಟನೆಗಳು ತಾರಕಕ್ಕೇರುತ್ತದೆ. ಕಾಲೇಜುಗಳು ಮುಚ್ಚಲ್ಪಡುತ್ತವೆ. ಇಷ್ಟೆಲ್ಲಾ ನಡೆದರೂ ಕಠಿಣ ಕ್ರಮದ ಭರವಸೆ ನೀಡಿದ್ದ ಪೊಲೀಸರು ಶ್ರೀರಾಮಸೇನೆಯವರ ಮೇಲೆ ದಾಖಲಿಸಿದ್ದು ಹೆಚ್ಚೆಂದರೆ ಇಪ್ಪತ್ತನಾಲ್ಕು ಗಂಟೆ ನ್ಯಾಯಾಂಗ ಬಂಧನದಲ್ಲಿರುವ ಸೆಕ್ಷನ್‌ಗಳು ಮಾತ್ರ. ಶ್ರೀರಾಮಸೇನೆಯ ಕಾರ್ಯಕರ್ತರು ಜೈಲಿನಿಂದ ಹೊರಬರಲು ಪರಿಸ್ಥಿತಿ ಸ್ವಲ್ಪ ತಣ್ಣಗಾಗುವುದನ್ನೇ ಕಾಯುತ್ತಿದ್ದಾರೆ. ಸಂಘ ಪರಿವಾರದ ನಾಯಕರು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಹರಸಾಹಸ ಪಡುತ್ತಿದ್ದಾರೆ. ಚಿಕ್ಕ ಘಟನೆಯನ್ನು (ದೊಡ್ಡದು ಯಾವುದು) ಹಿಗ್ಗಿಸಲಾಗುತ್ತಿದೆ ಎಂದು ಅರಚುತ್ತಿದ್ದಾರೆ. ಮತ್ತೊಂದೆಡೆ ಪ್ರಾಧ್ಯಾಪಕ ಪಟ್ಟಾಭಿರಾಮ ಸೋಮಯಾಜಿ ಘಟನೆಯ ಕುರಿತು ಎನ್‌ಡಿ ಟಿವಿ ಜೊತೆ ಮಾತನಾಡಿದ್ದನ್ನೇ ನೆಪವಾಗಿಸಿ ಎಬಿವಿಪಿಯನ್ನು ಛೂ ಬಿಟ್ಟು ಪಟ್ಟಾಭಿ ಹಿಂದೂ ವಿರೋಧಿ ಅವರನ್ನು ಕೆಲಸದಿಂದ ವಜಾ ಮಾಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟು ವಿದ್ಯಾರ್ಥಿಗಳನ್ನು ಹೆದರಿಸಿ ಬಲವಂತದ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.

ಘಟನೆ ಆರು

ಸುಳ್ಯ ತಾಲ್ಲೂಕಿನ ಪೋಬಳಿ ಕೇಂದ್ರವಾದ ಪಂಜ ಸರಕಾರಿ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಗಣನೀಯ ಸಂಖ್ಯೆಯಲ್ಲಿ ಓದುತ್ತಿದ್ದಾರೆ. ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾ ಧರಿಸಿ ಕಾಲೇಜಿನೊಳಗಡೆ ಬರುತ್ತಿದ್ದರು. ಇದನ್ನು ಕಂಡ ಚೆಡ್ಡಿಪಡೆಗಳ 'ಪ್ರಗತಿಪರ' ಧೋರಣೆ ಜಾಗೃತವಾಯಿತು. ವಿದ್ಯಾರ್ಥಿನಿಯರು ಕಾಲೇಜಿಗೆ ಬುರ್ಖಾ ಧರಿಸಿ ಬರುವುದು, ವಿದ್ಯಾರ್ಥಿಗಳ ಮಧ್ಯೆ ಮತೀಯತೆ, ವಿಭಜನೆಗಳು ಉಂಟಾಗುತ್ತಿದೆ ಎಂದು ತಗಾದೆ ಎತ್ತಿದ್ದರು. ಸರಿ ಹೇಳಿ ಕೇಳಿ ಸದಾನಂದಗೌಡ, ಶೋಭಕ್ಕನವರ ಹುಟ್ಟೂರು. ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾವನ್ನು ಕಾಲೇಜಿನ ಗೇಟಿನ ಹೊರಗಡೆಯೇ ಕಳಚಿ ಕಾಲೇಜು ಆವರಣ ಪ್ರವೇಶಿಸತೊಡಗಿದರು. ಹಿಂದೂ ಧರ್ಮೋದ್ಧಾರಕರು ಇದನ್ನೂ ಒಪ್ಪಲಿಲ್ಲ. ಕಾಲೇಜಿಗೆ ಅಂತ ಹೊರಡುವಾಗ ಬುರ್ಖಾವನ್ನು ಮನೆಯಲ್ಲಿಯೇ ಬಿಟ್ಟು ಹೊರಗಡೆ ಬರಬೇಕು ಎಂದು ಆಜ್ಞಾಪಿಸಿದರು. ಅದೇ ಕಾಲೇಜಿನಲ್ಲಿಬ್ಬ ಸಿಯೋಬ್ ಎಂಬ ಮುಸ್ಲಿಂ ವಿದ್ಯಾರ್ಥಿಯಿದ್ದಾನೆ. ಕಾಲೇಜು ಯುವಜನ ಎಂದರೆ ಹುಡುಗಾಟ, ತುಂಟಾಟ ಸಹಜ. ಎಲ್ಲರೊಂದಿಗೆ ಸಹಜವಾಗಿ ಬೆರೆಯುವ ಸಿಯೋಬ್ ತನ್ನ ಸಹಪಾಠಿ ಹಿಂದೂ ವಿದ್ಯಾರ್ಥಿನಿಯರೊಂದಿಗೆ ಸ್ನೇಹಮಯವಾಗಿ ತಮಾಷೆ ಮಾತನಾಡಿದ್ದಾನೆ. ಇದನ್ನು ದೊಡ್ಡ ವಿವಾದವನ್ನಾಗಿಸಿದ ಎಬಿವಿಪಿಯ ಪುಂಡರು ವಿದ್ಯಾರ್ಥಿನಿಯರು ಯಾವುದೇ ಆಕ್ಷೇಪವನ್ನು ಸಿಯೋಬ್ ಬಗ್ಗೆ ವ್ಯಕ್ತಪಡಿಸದೇ ಇದ್ದರು ಸಿಯೊಬ್‌ಗೆ ಬಹಿರಂಗವಾಗಿಯೇ ಕಾಲೇಜಿನಲ್ಲಿ ಥಳಿಸುತ್ತಾರೆ. ಕಾಲೇಜಿಗೆ ಬರಬಾರದೆಂದು ತಾಕೀತು ಮಾಡುತ್ತಾರೆ. ಈ ವಿಚಾರದಿಂದಾಗಿ ಆಡಳಿತ ಮಂಡಳಿ ವಿದ್ಯಾರ್ಥಿ, ಪೋಷಕರ ಜಂಟಿ ಸಭೆ ಕರೆಯುತ್ತದೆ. ಈ ಸಭೆಗೆ ಸ್ಥಳೀಯ ಜನ ಪ್ರತಿನಿಧಿಗಳು ಆಗಮಿಸುತ್ತಾರೆ. ಕಾಲೇಜು ಆವರಣದ ಹೊರಗೆ ಆರ್.ಎಸ್.ಎಸ್ ಭಜರಂಗದಳದ ಪುಂಡು ಪಟಾಲಂ ನೆರೆಯುತ್ತದೆ. ವಿದ್ಯಾರ್ಥಿ ಪೋಷಕರ ಸಭೆಯಲ್ಲಿ ಮುಸ್ಲಿಂ ವಿದ್ಯಾರ್ಥಿ ಬಹಿರಂಗವಾಗಿ ಕ್ಷಮೆ ಯೋಚಿಸಬೇಕು ಎಂಬ ಆಗ್ರಹ ಬರುತ್ತದೆ. ಸಿಯೋಬ್ ಹಿಂದೂ ವಿದ್ಯಾರ್ಥಿನಿಯರಿಗೆ ಐ ಲವ್ ಯೂ ಎಂದು ಹೇಳಿದ್ದಾನೆ ಎಂಬ ಆರೋಪ ಹೊರಿಸಲಾಗುತ್ತದೆ. ತಾನು ಹಾಗೆ ಹೇಳೇ ಇಲ್ಲ, ಕ್ಷಮೆ ಕೇಳುವುದಿಲ್ಲ ಎಂಬು ಪಟ್ಟು ಹಿಡಿದ ಸಿಯೋಬ್‌ನನ್ನು ಬಲವಂತಪಡಿಸಿ, ಹೆದರಿಸಿ, ಕ್ಷಮೆ ಕೇಳಿಸಲಾಗುತ್ತದೆ. ಇದನ್ನು ಮುಸ್ಲಿಂ ವಿದ್ಯಾರ್ಥಿಗಳು, ಪೋಷಕರು ಅಸಹಾಯಕತೆಯಿಂದ ನೋಡುತ್ತಾರೆ. ಒಂದು ಕ್ಷಮೆ ಮುಗಿದ ತಕ್ಷಣವೇ ಸಿಯೋಬ್ ದನದ ಮಾಂಸ ಆರೋಗ್ಯಕ್ಕೆ ಒಳ್ಳೆಯದು ಎಂದು ಯಾರಲ್ಲೋ ಹೇಳಿದ್ದಾನೆ. ಅದಕ್ಕೂ ಕ್ಷಮೆ ಯಾಚಿಸಬೇಕು ಎಂಬ ಆಗ್ರಹ ಬರುತ್ತದೆ. ಅದಕ್ಕೂ ಸೈ ಎಂದ ಸಿಯೋಬ್ ಕುಗ್ಗಿದ ಧ್ವನಿಯಲ್ಲಿ ಕ್ಷಮೆ ಯಾಚಿಸುತ್ತಾನೆ. ಅದು ಎಲ್ಲರಿಗೂ ಸರಿಯಾಗಿ ಕೇಳಿಸಲಿಲ್ಲ ಗಟ್ಟಿಯಾದ ಸ್ವರದಲ್ಲಿ ಜೋರಾಗಿ ಕ್ಷಮೆ ಯಾಚಿಸಬೇಕು ಎಂಬ ಆಗ್ರಹ ಬರುತ್ತದೆ. ಆಗ ಸಭೆಯಲ್ಲಿದ್ದ ಸ್ಥಳೀಯ ಗ್ರಾಮ ಪಂಚಾಯತ್ ಅಧ್ಯಕ್ಷ ಮಹಮ್ಮದ್ ರಫೀಕ್ ಮಧ್ಯ ಪ್ರವೇಶಿಸಿ ಇನ್ನು ಕ್ಷಮೆ ಕೇಳಿದ್ದು ಸಾಕು ಎಂದು ಹೇಳುತ್ತಾರೆ. ಮುಸ್ಲೀಮರ ಮೇಲೆ ಹಲ್ಲೆ ನಡೆಸಲು ಕಾಯುತ್ತಿದ್ದವರಿಗೆ ಅವಕಾಶ ಒದಗಿ ಬಂತು. ಗ್ರಾಮ ಪಂಚಾಯತ್ ಅಧ್ಯಕ್ಷ ಎಂಬ ಗೌರವವನ್ನು ನೀಡದೆ ಮುಸ್ಲಿಂ ಆಗಿ ಹುಟ್ಟಿದ ಏಕೈಕ ತಪ್ಪಿಗೆ ನಿರ್ಜೀವ ವಸ್ತುವಿಗೆ ಥಳಿಸಿದ ಹಾಗೆ ನೂರಾರು "ಹಿಂದೂ" ಕಾರ್ಯಕರ್ತರು ಸಾರ್ವಜನಿಕವಾಗಿ ಥಳಿಸುತ್ತಾರೆ. ಅಲ್ಲೇ ಇದ್ದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಪೋಷಕರು, ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರು ಕೊನೆಗೆ ಸ್ಥಳದಲ್ಲಿದ್ದ ಪೊಲೀಸರು ಇದನ್ನು ಮೂಕ ಪ್ರೇಕ್ಷಕರಾಗಿ ವೀಕ್ಷಿಸುತ್ತಾ ನಿಂತರು. ಈಗ ಕೈಕಾಲು ಮುರಿಸಿಕೊಂಡ ಪಂಚಾಯತ್ ಅಧ್ಯಕ್ಷ ಆಸ್ಪತ್ರೆಯಲ್ಲಿ ಮಲಗಿ ಪಂಚಾಯತ್ ಅಧ್ಯಕ್ಷತೆಯ ವೈಭವವನ್ನು ಮೆಲುಕು ಹಾಕುತ್ತಿದ್ದಾರೆ.

ಮಂಗಳೂರಿನ ಬುದ್ಧಿವಂತ, ಸುಸಂಸ್ಕೃತ ಜನತೆ ಜಾತ್ಯಾತೀತರು ಎಂದು ಹೇಳಿಕೊಳ್ಳುವವರು ನಿಧಾನಕ್ಕೆ ಈ ಸಣ್ಣ ಘಟನೆಗಳನ್ನು ಎಂದಿನಂತೆ ಮರೆಯುತ್ತಾರೆ. ಸಂಘ ಪರಿವಾರ ನಡೆಸುವ ಇಂತಹ ಸಣ್ಣ ಘಟನೆಗಳನ್ನು ತನ್ನ ಕರಾವಳಿ ಅಲೆ ಪತ್ರಿಕೆಯಲ್ಲಿ "ದೊಡ್ಡ"ದಾಗಿ ಪ್ರಕಟಿಸುತ್ತಿದ್ದ ಬಿ.ವಿ.ಸೀತಾರಾಮರು ಜೈಲಿನಲ್ಲೇ ಕೊಳೆಯುತ್ತಿದ್ದಾರೆ. ಇಲ್ಲಿನ ಬುದ್ಧಿವಂತರಿಗೆ ಸೀತಾರಾಮರೇ ಮರೆತುಹೋಗಿದ್ದಾರೆ. ಇನ್ನೂ ಈ ಘಟನೆಗಳೆಲ್ಲ ಯಾವ ಲೆಕ್ಕ.

ಈಗ ಕೆಲವರು ಕೇಳುತ್ತಿದ್ದಾರೆ. ಮೋದಿಯ ಗುಜರಾತ್ ಮಂಗಳೂರಿನ ಸಂಘ ಪರಿವಾರಗಳಿಗೆ ಮಾದರಿಯ ಅಥವಾ ಜನತೆಯನ್ನು ಈ ಪರಿ ತಮ್ಮ ಮುಷ್ಟಿಯೊಳಗಿಟ್ಟುಕೊಂಡಿರುವ ಬಜರಂಗಿಗಳ ಮಂಗಳೂರೇ ಮೋದಿಗೆ ಮಾದರಿಯಾಗುತ್ತದೆ

ಸ್ವಾಮಿ ವಿವೇಕಾನಂದರ ಪ್ರಖರ ವಿಚಾರಧಾರೆ

ವಿವೇಕಾನಂದರ ನೈಜ ವಿಚಾರಧಾರೆಯನ್ನು ಸಂಪೂರ್ಣ ಮರೆಮಾಚಿ ಸಂಘ ಪರಿವಾರ ಅವರ ಹೆಸರನ್ನು ದುರ್ಬಳಕೆ ಮಾಡುತ್ತಿದೆ, ಇಲ್ಲಿ ಇಸ್ಲಾಂ ಧರ್ಮ ಕುರಿತು, ಹಿಂದೂ ಧರ್ಮದ ಪುರೋಹಿತಶಾಹಿಯ ಕುರಿತು ವಿವೇಕಾನಂದ ವಿಚಾರವನ್ನು ನೀಡಲಾಗಿದೆ. 'ಗೋರಕ್ಷಣೆ' ಕುರಿತ ವಿವೇಕಾನಂದರ ಅಭಿಪ್ರಾಯಕ್ಕೆ ಸಾಕ್ಷಿಯಾದ ಘಟನೆಯೊಂದರ ವರದಿಯನ್ನು ಇಲ್ಲಿ ನೀಡಲಾಗಿದೆ. ಈ ವಿವೇಕವಾಣಿಯ ಕುರಿತು ಸಂಘ ಪರಿವಾರ ಜನರಿಗೆ ಎಂದಾದರೂ ಹೇಳಿದೆಯಾ?



ಇಸ್ಲಾಂ ಮೋಕ್ಷವಾಗಿ ಬಂತು

ನಮ್ಮ ಮಾತೃಭೂಮಿಗೆ ಹಿಂದುತ್ವ ಮತ್ತು ಇಸ್ಲಾಂಗಳೆಂಬ ಎರಡು ಮಹಾದರ್ಶನಗಳ ಸಂಗಮ ವೇದಾಂತದ ಮೆದುಳು, ಇಸ್ಲಾಂನ ದೇಹವೇ ಏಕಮಾತ್ರ ಅಭಯ, ಭರವಸೆ.

....

(ಅಲ್ಮೋರಾದಿಂದ ದಿನಾಂಕ ಜೂನ್ 10, 1898 ರಲ್ಲಿ ಸ್ವಾಮೀಜಿ ಸ್ನೇಹಿತರೊಬ್ಬರಿಗೆ ಬರೆದ ಪತ್ರ c.w.vol vi, p.375-76 Ed:1940)

ಭಾರತದ ಮೇಲೆ ಮಾಡಿದ ಮಹಮ್ಮದೀಯ ದಾಳಿ ದರಿದ್ರರ ಮತ್ತು ತುಳಿಯಲ್ಪಟ್ಟವರ ಪಾಲಿಗೆ ಮೋಕ್ಷವಾಗಿ ಬಂತು. ಆದ್ದರಿಂದಲೇ ನಮ್ಮ ಜನರಲ್ಲಿ ಐದರಲ್ಲಿ ಒಂದು ಪಾಲು ಮಹಮ್ಮದೀಯರಾದರು. ಅದೆಲ್ಲವೂ ಖಡ್ಗದಿಂದಲೆ ಆಗಲಿಲ್ಲ. ಇದೆಲ್ಲ (ಮತಾಂತರವೆಲ್ಲ) ಖಡ್ಗ ಮತ್ತು ಅಗ್ನಿಯಿಂದಲೆ ಆಯಿತೆಂದು ಭಾವಿಸುವುದು ಅತ್ಯಂತ ಹುಚ್ಚುತನ.

c.w.vol vi, p.375-76 Ed:1940)

ಭಾರತೀಯರಲ್ಲಿ ಅಷ್ಟೊಂದು ಜನ ಬಡವರು ಏಕೆ ಇದ್ದಾರೆ? ಅವರನ್ನೆಲ್ಲ ಖಡ್ಗ (ಬಲಾತ್ಕಾರ) ದಿಂದ ಮತಾಂತರಗೊಳಿಸಿದರೆಂಬುದು ಶುದ್ಧ ಅರ್ಥಹೀನ. ಜಮೀನ್ದಾರರಿಂದ, ಪೂಜಾರಿ ಪುರೋಹಿತರಿಂದ ಬಿಡುಗಡೆ ಪಡೆಯಲು ಅವರು ಮಹಮ್ಮದೀಯರಾದರು. ತತ್ಪರಿಣಾಮವಾಗಿ ಬಂಗಾಳದಲ್ಲಿ ಬೇಸಾಯಗಾರರಲ್ಲಿ ಹಿಂದೂಗಳಿಗಿಂತ ಮಹಮ್ಮದೀಯರೇ ಹೆಚ್ಚಾಗಿದ್ದರು."

[c.w.vol VIII, p.330-]

ಪೌರೋಹಿತ್ಯಶಾಹಿ ಕ್ರೂರ ಹೃದಯಹೀನ..

ಕಳೆದ ಈ ನೂರಾರು ವರ್ಷಗಳು ನಿತ್ಯವೂ ನಿರಂತರವಾಗಿ ಬೆಳೆಯುತ್ತಿರುವ ಹೆಪ್ಪುಗಟ್ಟಿದ ಮೂಢನಂಬಿಕೆಗಳ ಹೊರೆಯ ಭಾರವನ್ನು ತಲೆಯ ಮೇಲೆ ಹೊತ್ತು, ನೂರಾರು ವರ್ಷಗಳವರೆಗೆ ಆ ಆಹಾರವು ಸ್ಪರ್ಶಾರ್ಹವೇ ಅಸ್ಪೃಶ್ಯವೆ ಎಂಬುದನ್ನು ಚರ್ಚಿಸುವುದರಲ್ಲಿ ನಿಮ್ಮೆಲ್ಲ ಶಕ್ತಿ ಸಾಮರ್ಥ್ಯವನ್ನು ವ್ಯಯ ಮಾಡುತ್ತಿರುವ ನೀವು, ಮಾನವೀಯತೆಯೆಲ್ಲ ನಿಮ್ಮಲ್ಲಿ ಜರ್ಜರಿತವಾಗಿ ನಶಿಸಿ ಯುಗ ಯುಗಾಂತರಗಳಿಂದ ಸಾಮಾಜಿಕ ದೌರ್ಜನ್ಯ ನಿಮ್ಮಿಮದ ಸದಾ ನಡೆಯುತ್ತಿರುವಾಗ ನೀವೇನು? ಬನ್ನಿ, ಮಾನವರಾಗಿ. ಪ್ರಗತಿಗೆ ನಿರಂತರ ವಿರುದ್ಧವಾಗಿರುವ ಪೂಜಾರಿ ಪುರೋಹಿತರನ್ನು ಒದ್ದು ಹೊರಹಾಕಿ. ಯಾಕೆಂದರೆ ಅವರೆಂದಿಗೂ ತಿದ್ದಿಕೊಳ್ಳುವುದಿಲ್ಲ. ಅವರ ಹೃದಯ ಎಂದಿಗೂ ದೊಡ್ಡದಾಗುವುದಿಲ್ಲ. ಅವರು ನೂರಾರು ವರ್ಷಗಳ ಮೂಢನಂಬಿಕೆ ಮತ್ತು ದೌರ್ಜನ್ಯದ ಕುನ್ನಿಗಳು. ಮೊಟ್ಟಮೊದಲು ಈ ಪೌರೋಹಿತ್ಯಶಾಹಿಯನ್ನು ಬುಡಸಮೇತ ಕಿತ್ತೊಗೆಯಿರಿ. ಬನ್ನಿ, ಮಾನವರಾಗಿ, ನಿಮ್ಮ ಸಂಕುಚಿತ ಬಿಲಗಳಿಂದ ಹೊರಬಂದು ವಿಶಾಲ ಜಗತ್ತನ್ನು ನೋಡಿ (ಬೇರೆ) ರಾಷ್ಟ್ರಗಳು ಹೇಗೆ ಮುಂದುವರೆಯುತ್ತಿವೆ ಎಂಬುದನ್ನು ನೋಡಿ! ನೀವು ಮಾನವನನ್ನು ಪ್ರೀತಿಸುವಿರಾ? ನಿಮ್ಮ ದೇಶವನ್ನು ಪ್ರೀತಿಸುವಿರಾ? ಹಾಗಾದರೆ ಬನ್ನಿ ಉತ್ತಮವಾದ ಉನ್ನತ ವಿಷಯಗಳಿಗಾಗಿ ಹೋರಾಡೋಣ".

[Quoted by A.B. Bardan in his booklet Vivekananda's Mesage, CPI Publications- p.6]

"ಪೂಜಾರಿಗಳು ದೇವರಿದ್ದಾನೆ ಎಂದು ನಂಬುತ್ತಾರೆ. ಆದರೆ ಈ ದೇವರನ್ನು ತಮ್ಮ ಮೂಲಕವೇ ತಿಳಿಯಬೇಕು ಮತ್ತು ತಮ್ಮ ಮೂಲಕವೆ ಆ ದೇವರ ಸಾನ್ನಿಧ್ಯ ಸೇರಬೇಕಂತೆ. ಪವಿತ್ರಾತ್ಮರಲ್ಲಿ ಅತ್ಯಂತ ಪವಿತ್ರಾತ್ಮರನ್ನು ಪೂಜಾರಿಗಳ ಅಪ್ಪಣೆಯಿಂದಲೇ ಕಾಣಬೇಕಂತೆ! ನೀವು ಅವರಿಗೆ ದಕ್ಷಿಣೆ ಕೊಡಬೇಕು. ಅವರ ಪೂಜೆ ಮಾಡಬೇಕು. ಸರ್ವಸ್ವವನ್ನೂ ಅವರ ಕೈಯಲ್ಲಿಡಬೇಕು. ಜಗತ್ತಿನ ಇತಿಹಾಸದ ಉದ್ದಕ್ಕೂ ಈ ಪ್ರವೃತ್ತಿ ಮತ್ತೆ ಮತ್ತೆ ತಲೆ ಎತ್ತಿದೆ. ಅಧಿಕಾರಕ್ಕಾಗಿ ಈ ಭಯಂಕರ ತೃಷ್ಣೆ, ಈ ವ್ಯಾಘ್ರ ತೃಷ್ಣೆ ಮಾನವನ ಸ್ವಭಾವವೆ ಆಗಿದೆ. ಪೂಜಾರಿ ನಿಮ್ಮ ಮೇಲೆ ಸವಾರಿ ಮಾಡುತ್ತಾನೆ. ನಿಮಗಾಗಿ ಸಾವಿರ ನೇಮಗಳನ್ನು ಹೇರುತ್ತಾರೆ. ಪೂಜಾರಿಗಳು, ಸರಳ ಸತ್ಯಗಳನ್ನು ಸುತ್ತಿ ಬಳಸಿ ನಿರ್ವಚನೆ ಮಾಡುತ್ತಾರೆ. ತಮ್ಮ ಉತ್ತಮಿಕೆಯನ್ನು ಸಮರ್ಥಿಸಿಕೊಳ್ಳಲು ಕತೆ ಕಟ್ಟುತ್ತಾರೆ....

[c.w.vol. VIII, p.93-95]

"ಪೌರೋಹಿತ್ಯಶಾಹಿ ಭಾರತಕ್ಕೆ ಒಂದು ಶಾಪ. ಮಾನವ ತನ್ನ ಸೋದರ ಮಾನವನನ್ನು ಅಧೋಗತಿಗೆ ತಳ್ಳಿ, ಆ ಅಧೋಗತಿಯಿಂದ ತಪ್ಪಿಸಿಕೊಳ್ಳಬಲ್ಲನೆ? ತನ್ನನ್ನು ನೋಯಿಸಿಕೊಳ್ಳದೆ ಇತರರನ್ನು ನೋಯಿಸಲು ಸಾಧ್ಯವೇ? ಬ್ರಾಹ್ಮಣರು ಮತ್ತು ಕ್ಷತ್ರಿಯರು ಜನಸಾಮಾನ್ಯರ ಮೇಲೆ ಎಸಗಿದ ದೌರ್ಜನ್ಯ ತಮ್ಮ ತಲೆಯ ಮೇಲೆಯೇ ಚಕ್ರಬಡ್ಡಿ ಸಹಿತ ಸುತ್ತಿಕೊಂಡಿದೆ."

[c.w.vol. IV, p.327-28]

"ಪೌರೋಹಿತ್ಯಶಾಹಿ ತನ್ನ ಸ್ವಭಾವದಲ್ಲಿಯೆ ಕ್ರೂರ ಮತ್ತು ಹೃದಯಹೀನ. ಆದ್ದರಿಂದ ಎಲ್ಲಿ ಪೌರೋಹಿತ್ಯಶಾಹಿ ತಲೆ ಎತ್ತುವುದೋ ಅಲ್ಲಿ ಧರ್ಮ ಅಧಃಪತನವಾಗುತ್ತದೆ. ವಿಶೇಷ ಸೌಲಭ್ಯಗಳ ಭಾವನೆಯನ್ನು ತ್ಯಜಿಸಿದರೆ ಮಾತ್ರ ಧರ್ಮ ಬರುತ್ತದೆ ಎಂದು ವೇದಾಂತ ಸಾರುತ್ತದೆ. ಆ ಭಾವನೆ ಉಂಟಾಗುವ ಮುನ್ನ ಧರ್ಮ ಬರುವುದೇ ಇಲ್ಲ."

[c.w.vol. I, p.428]

'ಗೋ ರಕ್ಷಣೆ'ಯ ಪ್ರಕರಣ

ಗೋ ಸಂರಕ್ಷಣಾ ಸಂಘವೊಂದಕ್ಕೆ ಸೇರಿದ ಉತ್ಸಾಹಿ ಪ್ರಚಾರಕನೊಬ್ಬ ಒಮ್ಮೆ ಸ್ವಾಮಿ ವಿವೇಕನಂದರನ್ನು ಕಾಣಲು ಬಂದ. ಈತ ಬಂದ ಸುದ್ದಿ ಕೇಳಿದ ವಿವೇಕಾನಂದರು ಒಳಗಿನಿಂದ ಎದ್ದು ನಡುಮನೆಗೆ ಬಂದರು. ಪ್ರಚಾರಕನು ಸ್ವಾಮೀಜಿಗೆ ವಂದಿಸಿದ ಮತ್ತು ಗೋಮಾತೆಯ ಚಿತ್ರವೊಂದನ್ನು ನೀಡಿದ. ಸ್ವಾಮೀಜಿ ಅದನ್ನು ಕೈಯಲ್ಲಿ ತೆಗೆದುಕೊಂಡು ಪಕ್ಕದಲ್ಲಿದ್ದವರಿಗೆ ಕೊಡುತ್ತಾ ಸಂಭಾಷಣೆ ಮುಂದುವರಿಸಿದರು.

ಸ್ವಾಮೀಜಿ: ನಿಮ್ಮ ಸಂಘದ ಗುರಿಯೇನು?

ಪ್ರಚಾರಕ: ನಾವು ಕಟುಕರ ಕೈಯಿಂದ ನಮ್ಮ ದೇಶದ ಗೋಮಾತೆಯನ್ನು ರಕ್ಷಿಸುತ್ತೇವೆ. ವಯಸ್ಸಾದ ಮತ್ತು ರೋಗ ಪೀಡಿತವಾದ ಗೋವುಗಳನ್ನು ಅಥವಾ ಕಟುಕರಿಂದ ಬಿಡಿಸಿ ತಂದ ಗೋವುಗಳನ್ನು ಅಲ್ಲಲ್ಲಿ ಸ್ಥಾಪಿಸಲಾಗಿರುವ ಗೋಶಾಲೆಗಳಿಗೆ ಸೇರಿಸಲಾಗಿದೆ.

ಸ್ವಾಮೀಜಿ: ಬಹಳ ಒಳ್ಳೆಯದು, ನಿಮ್ಮ ಆದಾಯದ ಮೂಲವೇನು?

ಪ್ರಚಾರಕ: ಮಾರ್ವಾಡಿ ವ್ಯಾಪಾರಿ ಸಮುದಾಯದವರು ನಮ್ಮ ಈ ಕೆಲಸಕ್ಕೆ ವಿಶೇಷ ನಮಗೆ ದೊಡ್ಡ ಮೊತ್ತವನ್ನು ಕೊಡುಗೆಯಾಗಿ ನೀಡಿದ್ದಾರೆ.

ಸ್ವಾಮೀಜಿ: ದೇಶದಲ್ಲಿ ಭೀಕರವಾದ ಕ್ಷಾಮವು ತಲೆದೋರಿದೆ. ಭಾರತ ಸರ್ಕಾರವು ಹಸಿವಿನಿಂದ ಸತ್ತ 9 ಲಕ್ಷ ಜನರ ಪಟ್ಟಿಯನ್ನು ಪ್ರಕಟಿಸಿದೆ. ನಿಮ್ಮ ಸಂಘವು ತೀವ್ರ ಬರದ ಈ ಸಂದರ್ಭದಲ್ಲಿ ಏನಾದರೂ ಸಹಾಯ ನೀಡಲು ಮುಂದಾಗಿದೆಯೇ?

ಪ್ರಚಾರಕ: ನಾವು ಕ್ಷಾಮ ಮತ್ತಿತರ ವಿಕೋಪಗಳ ಸಂದರ್ಭದಲ್ಲಿ ಸಹಾಯ ಮಾಡುವವರಲ್ಲ. ನಮ್ಮ ಸಂಘವು ಸ್ಥಾಪನೆಯಾಗಿರುವುದು ಗೋಮಾತೆಯ ರಕ್ಷಣೆಗಾಗಿ.

ಸ್ವಾಮೀಜಿ: ಕ್ಷಾಮದಿಂದ ಲಕ್ಷಾಂತರ ಜನರು, ಸ್ವಂತ ಸಹೋದರ ಸಹೋದರಿಯರು ಸಾವಿನ ದವಡೆಯಲ್ಲಿ ಸಿಕ್ಕಿ ಸಾಯುವಾಗ ಅವರಿಗೆ ಸಹಾಯ ನೀಡಬೇಕೆಂದು ನೀವು ಯೋಚಿಸಲಿಲ್ಲ, ನಿಮಗೆ ಸಹಾಯ ನೀಡುವಂತಹ ಅನುಕೂಲವಿದ್ದಾಗಲೂ ಕೂಡ!!

ಪ್ರಚಾರಕ: ಇಲ್ಲ, ಈ ಕ್ಷಾಮವು ಮನುಷ್ಯನ ಕರ್ಮದ ಮತ್ತು ಪಾಪದ ಫಲವಾಗಿ ಬಂದಿದೆ [illegible]

ಪ್ರಚಾರಕನ ಈ ಮಾತನ್ನು ಕೇಳಿದೊಡನೆ ಸ್ವಾಮಿ ವಿವೇಕಾನಂದರ ಮುಖ ಕೋಪದಿಂದ ಕೆಂಪೇರಿತು. ಆದರೂ ಆವೇಗವನ್ನು ಅದುಮಿಟ್ಟು ಅವರು ಹೇಳಿದರು.

'ಮನುಷ್ಯರ ಸಂಕಟಗಳಿಗೆ ಸ್ಪಂದಿಸದ ಸಂಘ ಸಂಸ್ಥೆಗಳ ಬಗೆಗೆ, ಅದೂ ಸ್ವಂತ ಸಹೋದರರು ಹಸಿವಿನಿಂದ ಸಾಯುವಂತಹ ಭೀಕರ ಪರಿಸ್ಥಿತಿಯಲ್ಲಿಯೂ ಹಿಡಿಯಷ್ಟು ಅನ್ನ ನೀಡದೇ ಪಶು-ಪಕ್ಷಿಗಳ ರಕ್ಷಣೆಗಾಗಿ ಆಹಾರದ ರಾಶಿಯನ್ನೇ ನೀಡುವ ಸಂಘಸಂಸ್ಥೆಗಳ ಬಗೆಗೆ ನನಗೆ ಯಾವ ಸಹಾನುಭೂತಿಯೂ ಇಲ್ಲ. ಇಂತಹ ಸಂಘ ಸಂಸ್ಥೆಗಳಿಂದ ಸಮಾಜಕ್ಕೆ ಏನಾದರೂ ಒಳ್ಳೆಯದಾಗಬಹುದೆಂಬ ನಂಬಿಕೆಯೂ ನನಗಿಲ್ಲ. ಮನುಷ್ಯ ತನ್ನ ಕರ್ಮದ ಫಲವಾಗಿ ಸಾಯುತ್ತಾನೆಂದಾದರೆ, ಗೋವು ಕೂಡ ತನ್ನ ಕರ್ಮದ ಫಲವಾಗಿಯೇ ಕಟುಕನ ಕೈಗೆ ಸಿಕ್ಕಿ ಸಾಯುತ್ತದೆ ಮತ್ತು ಅದಕ್ಕಾಗಿ ನಾವೇನೂ ಮಾಡಬೇಕಿಲ್ಲ" "ಪ್ರಚಾರಕ ಸ್ವಲ್ಪ ತಬ್ಬಿಬ್ಬಾಗಿ ಹೇಳಿದ ನೀವು ಹೇಳುವುದು ಸರಿಯೇ, ಆದರೆ ಶಾಸ್ತ್ರಗಳು ಗೋವು ನಮ್ಮ ಮಾತೆ ಎಂದಿಯೆಯಲ್ಲ".

ಸ್ವಾಮೀಜಿ ನಕ್ಕು ನುಡಿದರು. "ಹೌದು ಗೋವು ನಮ್ಮ ತಾಯಿ. ನನಗೆ ಅರ್ಥವಾಗುತ್ತದೆ. ಗೋವಲ್ಲದೆ ಇಂತಹ ನಿಪುಣ ಮಕ್ಕಳಿಗೆ ಜನ್ಮ ನೀಡಲು ಗೋವಲ್ಲದೇ ಮತ್ಯಾರಿಗೆ ತಾನೇ ಸಾಧ್ಯ".

ವಿವೇಕಾನಂದರ ವಿಚಾರಗಳ ಆಯ್ಕೆ

ನವಕರ್ನಾಟಕ ಪಬ್ಲಿಕೇಷನ್ ಪ್ರೈ ಲಿ. ಪ್ರಕಾಶನದ ಕೋ. ಚನ್ನಬಸಪ್ಪ ಅವರ **'ಶ್ರೀ ಸ್ವಾಮಿ ವಿವೇಕಾನಂದ ಹಿಂದು ಸನಾತನವಾದಿಯೇ?'** ಕೃತಿಯಿಂದ

ಪ್ರಚಾರಕ ಮತ್ತೆ ಈ ವಿಷಯದ ಕುರಿತು ಮಾತು ಮುಂದುವರಿಸಲಿಲ್ಲ. ಬಹುಶಃ ಸ್ವಾಮೀಜಿಗಳ ಮಾತಿನ ತೀಕ್ಷ್ಣ ವ್ಯಂಗ್ಯ ಆತನಿಗೆ ಅರ್ಥವಾಗಲಿಲ್ಲ.

ಸ್ವಾಮೀಜಿ ಹೇಳಿದರು " ಮನುಷ್ಯನನ್ನು ಮೊದಲು ಕಾಪಾಡಬೇಕಿದೆ. ಆತನಿಗೆ ಆಹಾರ, ಶಿಕ್ಷಣ ಮತ್ತು ಆಧ್ಯಾತ್ಮಿಕತೆಯನ್ನು ನೀಡಬೇಕಿದೆ".

ಆಯ್ಕೆ: 1979ರಲ್ಲಿ ಅದ್ವೈತ ಆಶ್ರಮ, 5 ದೆಹಲಿ ಎಂಟ್‌ಕಲೇ ರಸ್ತೆ, ಕೊಲ್ಕತ್ತಾ -700 014, ಇಲ್ಲಿಂದ ಪ್ರಕಟಿಸಲ್ಪಟ್ಟ "ಸ್ವಾಮಿ ವಿವೇಕಾನಂದರೊಂದಿಗಿನ ಮಾತುಕತೆ" ಕೃತಿಯಿಂದ.

ಈ ಬರಹದ ಇಂಗ್ಲೀಷ್ ಮೂಲವನ್ನು ಒದಗಿಸಿದ ಶ್ರೀಯುತ ಕೋ ಚನ್ನಬಸಪ್ಪನವರಿಗೆ ಕೃತಜ್ಞತೆಗಳು.

ಏನಾಗಿದೆ ಪೈಶಾಚಿಕ ಇಸ್ರೇಲ್ ದಾಳಿ ಸಮರ್ಥಿಸುವ ಚಿದಾನಂದಮೂರ್ತಿಗೆ?


ಅಲ್ಲಿ ದಿನವೂ ಕ್ಷಿಪಣಿಗಳು ದಾಳಿ ಇಡುತ್ತಿವೆ. ಗ್ರನೇಡುಗಳು ಸಿಡಿಯುತ್ತಿವೆ. ಬಾಂಬುಗಳನ್ನು ಸುರಿಯಲಾಗುತ್ತಿದೆ. ಇವೆಲ್ಲಾ ಬೀಳುತ್ತಿರುವುದೆಲ್ಲಿ? ಆಸ್ಪತ್ರೆಗಳ ಮೇಲೆ, ಶಾಲೆಗಳ ಮೇಲೆ, ಜನಗಳ ಮನೆಗಳ ಮೇಲೆ. ಅದು ಪ್ಯಾಲೆಸ್ತೇನ್ ದೇಶ. ಈ ಕೆಲವು ವಾರಗಳಲ್ಲಿ ಗಾಜಾ ಪಟ್ಟಿ ಪ್ರದೇಶದಲ್ಲಿ 1400 ಕ್ಕೂ ಹೆಚ್ಚು ಜೀವಗಳು ಉರುಳಿವೆ. ನಾಲ್ಕು ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಈ ಪ್ರದೇಶಕ್ಕೆ ತೈಲ, ಆಹಾರ, ಕೊನೆಗೆ ಔಷಧಿ ಪೂರೈಕೆಯನ್ನು ಕೂಡಾ ತಡೆಹಿಡಿಯಲಾಗಿದೆ. ಯಾರಾದರೂ ಎಷ್ಟಾದರೂ ಜನ ಸಾಯಲಿ ತಾನು ದಾಳಿ ನಿಲ್ಲಿಸುವುದಿಲ್ಲ ಎಂದಿತು. ಇಸ್ರೇಲಿ ಸರ್ಕಾರ, ಸೇನೆ. ವಿಶ್ವಸಂಸ್ಥೆಯ ಕದನ ವಿರಾಮದ ಸೂಚನೆಯನ್ನು ಧಿಕ್ಕರಿಸಲಾಯಿತು. ಸಂತ್ರಸ್ತರಿಗೆ ಅತ್ಯಾವಶ್ಯಕ ಆಹಾರ, ಔಷಧಿ ಒಯ್ಯುವ ವಿಶ್ವಸಂಸ್ಥೆಯ ಪರಿಹಾರ ತಂಡವೂ ಇಸ್ರೇಲ್‌ನ ದಾಳಿಗೆ ಗುರಿಯಾಗಿದೆ ಎಂದರೆ ಏನು ಪರಿಸ್ಥಿತಿ ಇದೆ ಅಲ್ಲಿ. ಜನವರಿಯಲ್ಲಿ ಒಮ್ಮೆ ಇಸ್ರೇಲ್ ನಡೆಸಿದ ದಾಳಿಗೆ ಆ ಶಾಲೆಯ 40 ಜನ ಮುಗ್ಧ, ನಿರಪರಾಧಿ ಮಕ್ಕಳು ಬಲಿಯಾಗಿ ಹೋದರು.

ಇಂತಹ ಇಸ್ರೇಲ್ ದೇಶ 'ಬೃಹತ್ ಭಾರತಕ್ಕೆ ಮಾದರಿಯಾಗಬೇಕು' ಎಂದು ವಿಜಯಕರ್ನಾಟಕದ ಲೇಖನವೊಂದರಲ್ಲಿ ಫರ್ಮಾನು ಹೊರಡಿಸಿದ್ದಾರೆ ಖ್ಯಾತ ಸಂಶೋಧಕ ಡಾ. ಎಂ.ಚಿದಾನಂದಮೂರ್ತಿ ಅವರು. ಮತಾಂಧತೆಯ ಅಮಲು ಏರಿದರೆ ಮನುಷ್ಯ ಎಂತಹ ನೀಚ ಮಟ್ಟದಲ್ಲಿ ಯೋಚಿಸುತ್ತಾನೆ ಅನ್ನುವುದಕ್ಕೆ ಚಿ.ಮೂ. ಅವರ ಲೇಖನವೇ ಒಂದು ಸಾಕ್ಷಿಯಾಗಿದೆ.


ಏನಾಗಿದೆ ಈ ಚಿದಾನಂದಮೂರ್ತಿಗೆ

ಇಸ್ರೇಲ್ ದೇಶದ ಹುಟ್ಟು, ಅದರ ಕೃಷಿ, ಕೈಗಾರಿಕೆ, ಇಸ್ರೇಲಿಗಳ ಶಿಸ್ತು, ಪರಿಶ್ರಮ, ದೇಶಪ್ರೇಮ, ಧರ್ಮ, ಭಾಷಾ ಪ್ರೇಮ, ದೇಶದ ಸಾಧನೆ, ಸರ್ವೋನ್ನತಿ, ಅವರು ನಡೆಸಿದ, ನಡೆಸುತ್ತಿರುವ 'ಯುದ್ಧ'ಗಳು ಚಿದಾನಂದ ಮೂರ್ತಿಯವರನ್ನು ಮೂಕವಿಸ್ಮಯಗೊಳಿಸಿದೆ. ಅವರೀಗ ಇಸ್ರೇಲ್‌ನ ಆರಾಧಕರು. ಮುಸ್ಲಿಂ ದ್ವೇಷ ಹಾಗೂ ಇಸ್ರೇಲ್‌ನ ಆರಾಧನೆಯಲ್ಲಿ ಅವರಿಗೆ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಪ್ಯಾಲೆಸ್ತೇನ್ ದೇಶದಮೇಲೆ, ಪ್ಯಾಲೆಸ್ತೇನ್ ಜನತೆಯ ಮೇಲೆ ನಡೆಸುತ್ತಾ ಬಂದಿರುವ ಘೋರ ದೌರ್ಜನ್ಯ ಅತ್ಯಾಚಾರಗಳೇನು ಕಾಣುವುದಿಲ್ಲ.

ಇಸ್ರೇಲ್ ಅಧಿಕೃತವಾಗಿ ಸ್ವತಂತ್ರ ರಾಜ್ಯವಾದುದು 1948 ರ ಮೇ 14 ರಂದು ಎನ್ನುತ್ತಾರೆ ಚಿ.ಮೂ. ಅವರು. ಅಸಲಿಗೆ ಹಿಂದೆ ಇಸ್ರೇಲ್ ಎಂಬ ಒಂದು ದೇಶವೇ ಅಸ್ತಿತ್ವದಲ್ಲಿರಲಿಲ್ಲ. ಇಸ್ರೇಲ್ ಎಂಬ ದೇಶ ಅಸ್ತಿತ್ವಕ್ಕೆ ಬಂದಿದ್ದೆ ಒಂದು ಘೋರ ದೌರ್ಜನ್ಯದ ಮೂಲಕ. ಅಪ್ಪಿತಪ್ಪಿಯೂ ಚಿ.ಮೂ. ಅದರ ಬಗ್ಗೆ ಸೊಲ್ಲೆತ್ತುವುದಿಲ್ಲ.



ಇಸ್ರೇಲ್ ದೇಶದ ಉದಯ ಎರಡನೇ ಮಹಾಯುದ್ಧ ಮತ್ತು ಅದಕ್ಕೂ ಹಿಂದಿನ ಚರಿತ್ರೆಯೊಂದಿಗೆ ತಳುಕುಹಾಕಿ ಕೊಂಡಿದೆ. ಯುರೋಪ್‌ನ ಜರ್ಮನಿ ಸೇರಿದಂತೆ ವಿವಿಧ ದೇಶಗಳಲ್ಲಿ ಯಹೂದಿಗಳು ಹರಡಿಕೊಂಡಿದ್ದರು. ಸ್ಥಳೀಯರಿಗೆ ತಾವು ಯಹೂದಿಗಳಿಂದ ತೀವ್ರ ಶೋಷಣೆಗೆ ಗುರಿಯಾಗಿದ್ದೇವೆ ಎಂಬ ಭಾವನೆ ಇತ್ತು.



ವಿಶ್ವಸಂಸ್ಥೆಯ ಪರಿಹಾರ ತಂಡದ ಮೇಲೂ ಇಸ್ರೇಲ್ ದಾಳಿ

ಇಂತಹ ಬಾಧಿತ ಜನರ ಅಸಮಾಧಾನವನ್ನೇ ತೀವ್ರ ಹಗೆತನದ ಜನಾಂಗ ದ್ವೇಷವನ್ನಾಗಿ ಪರಿವರ್ತಿಸಿದ ಜರ್ಮನಿಯ ನಾಝಿ ಹಿಟ್ಲರ್ ಯಹೂದಿ ಜನಾಂಗದ ಮೇಲೆ ಇತಿಹಾಸ ಕಂಡು ಕೇಳರಿಯದ ಭೀಭತ್ಸಕರವಾದ ದೌರ್ಜನ್ಯಗಳನ್ನು ಎಸಗಿದ. ಹೀಗೆ ಕ್ರೂರ ಹಿಂಸೆಗೆ ಗುರಿಯಾದ ಜರ್ಮನಿ ಮುಂತಾದ ಯುರೋಪಿನ ದೇಶಗಳ ಯಹೂದಿಗಳೆಲ್ಲಾ ದಿಕ್ಕುಕಾಣದೆ ನಿರಾಶ್ರಿತರಾದಾಗ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ವಿರುದ್ಧದ ಕ್ಯಾಂಪಿನಲ್ಲಿದ್ದ ಅಮೆರಿಕಾ, ಇಂಗ್ಲೆಂಡ್‌ಗಳ ಸಂಪೂರ್ಣ ಬೆಂಬಲದೊಂದಿಗೆ ಯೆಹೂದಿಗಳಿಗಾಗಿ ಒಂದು ದೇಶವನ್ನು ಸೃಷ್ಟಿಸಿಕೊಡುವ ಯತ್ನ ನಡೆಯಿತು. ಬೈಬಲ್‌ನಲ್ಲಿ ಇದೆ ಎನ್ನಲಾದ ಒಂದು ಉಲ್ಲೇಖವೇ ಇಲ್ಲಿ ಯೆಹೂದಿಗಳ ಹಕ್ಕು ಸ್ಥಾಪನೆಯ ಆಕ್ರಮಣಕ್ಕೆ ಆಧಾರ. ಬ್ರಿಟನ್‌ಗೆ ಈ ಭಾಗದಲ್ಲಿ ಇದ್ದ ಮಿಲಿಟರಿ ಹಿಡಿತ ಈ ಭಾಗ ಬ್ರಿಟನ್ ಫ್ರಾನ್ಸ್‌ಗಳ ವಸಾಹತುವಾಗಿದ್ದ ಪರಿಸ್ಥಿತಿ ಇಸ್ರೇಲ್ ದೇಶ ಸ್ಥಾಪನೆ. ಹೀಗೆ ಪ್ಯಾಲೆಸ್ತೇನ್‌ನೊಳಗೆ ಉದಯವಾದ ಇಸ್ರೇಲ್ ದೇಶ ಹಂತ ಹಂತವಾಗಿ ಪಾಲೆಸ್ತೇನಿಯನ್ನರ ತಾಯ್ನೆಲವನ್ನು ಕಬಳಿಸುತ್ತಾ ಕಬಳಿಸುತ್ತಾ ಬರುತ್ತಿದೆ. ವಿವಾದ ಬಗೆಹರಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆ ಸೂಚಿಸಿದ ಭಾಗಗಳು ಪ್ಯಾಲೆಸ್ತೈನಿಗೆ ಇಂದಿಗೂ ದಕ್ಕಲಿಲ್ಲ. ವಿಶ್ವ ಸಂಸ್ಥೆ ತೀರ್ಮಾನವನ್ನು ಜಾರಿ ಮಾಡದ ನಗ್ನ ದುರಾಕ್ರಮಣ ಚಿದಾನಂದಮೂರ್ತಿ ಅವರಿಗೆ ದೇಶ ಪ್ರೇಮವಾಗಿ ಕಾಣುತ್ತಿದೆ.

ತಮ್ಮ ತಾಯ್ನಾಡಿನ ಮೇಲಿನ ಆಕ್ರಮಣ ವನ್ನು ಪಾಲೆಸ್ತೇನ್ ಶಸಸ್ತ್ರ ಹೋರಾಟದ ಮೂಲಕ ಪ್ರತಿರೋಧಿಸುತ್ತಿದೆ. ಅದೆಲ್ಲಾ ಚಿ.ಮೂ. ಅವರಿಗೆ ಅರಬ್ಬರ ಭಯೋತ್ಪಾದಕ ಕೃತ್ಯವಾಗಿ ಕಾಣುತ್ತದೆ.

ಇಸ್ರೇಲಿನಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಮಿಲಿಟರಿ ಶಿಕ್ಷಣ ಕಡ್ಡಾಯವಂತೆ. ಇಸ್ರೇಲಿನಲ್ಲಿರುವ ಮುಸ್ಲಿಮರಿಗೆ ಮಿಲಿಟರಿ ಶಿಕ್ಷಣಕ್ಕೆ, ಮಿಲಿಟರಿಗೆ ಪ್ರವೇಶವಿಲ್ಲ. ಏಕೆಂದರೆ ಅರಬ್ಬರ ಬಗೆಗೆ ಸರ್ಕಾರಕ್ಕೆ ಗುಮಾನಿಯಂತೆ. ಮತದಾನದ ಹಕ್ಕು ನೀಡಿದ್ದರೂ ಅರಬ್ಬರ ಮೇಲೆ ಸರ್ಕಾರ ಸದಾ ನಿಗಾ ಇಟ್ಟಿರುವುದಂತೆ. ಗುಪ್ತಚರ ವಿಭಾಗಗಳ ಹತ್ತಿರಕ್ಕೂ ಅವರನ್ನು ಸೇರಿಸಲಾಗುವುದಿಲ್ಲವಂತೆ. ಇಲ್ಲಿ ಎಲ್ಲ ಬಗೆಯ ಅಂತರ್ಜಾತಿಯ ವಿವಾಹಗಳ ನಿಷೇಧಿಸಲಾಗಿದೆಯಂತೆ.. ಅದನ್ನೂ ಚಿದಾನಂದ ಮೂರ್ತಿ ಅವರೇ ಬರೆಯುತ್ತಾರೆ. ಅಂದರೆ ಅಲ್ಲಿ ಒಂದು ಭಯಾನಕ ಜನಾಂಗ ದ್ವೇಷಿ ಸರ್ವಾಧಿಕಾರ ಯಾರಿಗಾದರೂ ಎದ್ದು ಕಾಣುತ್ತದೆ. ಆದರೆ ಈ ಬಗ್ಗೆ ಹೆಮ್ಮೆ ಇದೆ ಚಿ.ಮೂ. ಅವರಿಗೆ. ಇಷ್ಟೆಲ್ಲಾ ಆದರೂ ಚಿ.ಮೂ. ರವರ ಪ್ರಕಾರ ಇಸ್ರೇಲ್‌ನ ಮುಸ್ಲಿಮರು ಕ್ರಿಶ್ಚಿಯನ್ನರಿಗೆ ವ್ಯಕ್ತಿ ಸ್ವಾತಂತ್ರ್ಯವುಂಟಂತೆ!

ಪಾಲಿಸ್ತೇನ್‌ನ ನೆಲವನ್ನು ಆಕ್ರಮಣ ಮಾಡಿ ಪ್ಯಾಲೆಸ್ತೇನಿಯನ್ನರ ನರಮೇಧ ಮಾಡುವ ಇಸ್ರೇಲ್ ನೀತಿಯನ್ನು ಇಸ್ರೇಲ್‌ನ ಯಹೂದಿಗಳು, ಮುಸ್ಲಿಮರು ಎಲ್ಲರೂ ಇರುವ ಇಸ್ರೇಲ್ ಕಮ್ಯುನಿಸ್ಟ್ ಪಕ್ಷ ಖಂಡತುಂಡವಾಗಿ ಖಂಡಿಸಿ ಹೋರಾಡುತ್ತಿದೆ. ತತ್ವಬದ್ಧವಾದ, ಮಾನವೀಯತೆಯ ಪರವಾದ, ದುರಾಕ್ರಮಣಗಳ ವಿರುದ್ಧವಾದ ಈ ಕಮ್ಯುನಿಸ್ಟ್ ಪಕ್ಷದ ನಿಲುವು ಚಿ.ಮೂ. ಅವರಿಗೆ 'ಇಸ್ರೇಲಿನ ಪರಂಪರಾಗತ ಸಂಸ್ಕೃತಿಯನ್ನು ನಾಶ ಮಾಡುವ ಕಮ್ಯುನಿಸ್ಟರು ಎಲ್ಲಾ ಕಡೆ ಮಾಡುವಂತಹ ಪ್ರಯತ್ನ'ವಾಗಿ ಕಾಣುತ್ತದೆ.

ಇಸ್ರೇಲ್ ಭಾರತಕ್ಕೆ ಮಾದರಿ ಎಂದಾಗ ಅವರ ಮನಸ್ಸಿನಲ್ಲೇನಿದೆ? ಅದನ್ನೂ ಕೂಡಾ ಅವರು ಮುಚ್ಚಿಡುವುದಿಲ್ಲ. ಭಾರತದ ಮುಸ್ಲಿಮರ ಮೇಲೆ ಸಂಘ ಪರಿವಾರ ಮಾಡುತ್ತಿರುವ, ಎಲ್ಲಾ ಪ್ರಮುಖ ಆರೋಪಗಳನ್ನು ಪಟ್ಟಿ ಮಾಡಿ ಪುನರುಚ್ಚರಿಸಿದ್ದಾರೆ ಚಿ.ಮೂ.

ಭಾರತದ 'ಸೆಕ್ಯುಲರ್ ಹಣೆಪಟ್ಟಿ' ಯನ್ನು ಕಿತ್ತೊಗೆಯಬೇಕೆಂಬ ತಹತಹವನ್ನು ತೋಡಿಕೊಂಡಿದ್ದಾರೆ. ಇಷ್ಟೆಲ್ಲಾ ಹೇಳಿದ ಮೇಲೆ ಪಾಪಾ ಯಾಕೋ ಅವರಿಗೆ ನಮ್ಮ ಗುಜರಾತ್‌ನ ನರೇಂದ್ರಮೋದಿ ನೆನಪಾಗಲೇ ಇಲ್ಲ. ಇಸ್ರೇಲ್‌ನವರೂ ಮಾದರಿಯಾಗಿ ತೆಗೆದುಕೊಳ್ಳಬಹುದಾದ ನಮ್ಮ ಮೋದಿಯನ್ನು ಬಿಟ್ಟು ಚಿ.ಮೂ.ರವರು ದೂರದ ಇಸ್ರೇಲ್‌ಗೆ [illegible] ಹೋದರು? ಹಿತ್ತಲಗಿಡ ಮದ್ದಲ್ಲವೇ?

■ ಆರ್.ಕೆ

ಆನೇಗುಂದಿ ಸೇತುವೆ ಕುಸಿತ....

ಪುಟ 6 ರಿಂದ

ಹೊಂಗಾಡಿದವು. ಅಷ್ಟೊತ್ತಿಗೆ ಆಗಲೇ ವಿರೂಪಾಕ್ಷ ದೇವಸ್ಥಾನದ ಬಳಿಯಿಂದ ವಿರೂಪಾಪುರ ಗಡ್ಡೆಗೆ ತೂಗು ಸೇತುವೆ ಕಾಮಗಾರಿ ಆರಂಭವಾಗಿ ಎರಡು ದಂಡೆಯ ಕಡೆ ದೊಡ್ಡ ಸ್ತಂಭಗಳು ನಿರ್ಮಾಣವಾಗಿ ಬಿಟ್ಟಿದ್ದವು. ಯುನೆಸ್ಕೋ ಆಕ್ಷೇಪದ ಹಿನ್ನೆಲೆಯಲ್ಲಿ ಆ ಯೋಜನೆ ಕೈ ಬಿಟ್ಟು ಎರಡು ಸ್ತಂಭಗಳನ್ನು ಒಡೆದು ಹಾಕಲಾಯಿತು. ಇದೇ ರೀತಿ ತಳವಾರ ಘಟ್ಟ-ಆನೆಗೊಂದಿ ಸೇತುವೆ ಕಾಮಗಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ಪೂರ್ಣಪ್ರಮಾಣದ ಈ ಸೇತುವೆಯನ್ನು ಯುನೆಸ್ಕೋ ಒಪ್ಪಿಕೊಳ್ಳಲೇ ಇಲ್ಲ. ಬೇರೆ ಕಡೆ ಸೇತುವೆ ನಿರ್ಮಿಸಬಹುದು. ಈ ಪ್ರದೇಶದಲ್ಲಿ ಸಲ್ಲದು ಎಂದೇ ಪಟ್ಟು ಹಿಡಿಯಿತು. ಈ ನಡುವೆ ಸೇತುವೆ ಪರ, ವಿರೋಧ ಚರ್ಚೆ ಆರಂಭಗೊಂಡು ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜಕಾರಣ ಪ್ರವೇಶವಾಯಿತು. ಇದನ್ನು ಶಮನ ಮಾಡಲು ಸರ್ಕಾರ ಕಂಡು ಉಪಾಯವೆಂದರೆ ಯುನೆಸ್ಕೋ ಮನವೊಲಿಸಿ ಸೇತುವೆ ಪರ ನಿರ್ಧಾರ ತೆಗೆದುಕೊಳ್ಳುವಂತೆ ಮಾಡಿತು.

- ಇದೊಂದು ತಾತ್ಕಾಲಿಕ ಸೇತುವೆಯಾಗಿರುತ್ತದೆ.
- ಸೇತುವೆಯ ಈಗಿರುವ ವಿನ್ಯಾಸವನ್ನು ಬದಲಿಸಿ ತೂಗು ಸೇತುವೆಯನ್ನಾಗಿ ದೇಶಿ ಮಾದರಿಯಲ್ಲಿ ರೂಪಿಸಲಾಗುವುದು.
- ಭಾರಿ ವಾಹನಗಳ ಓಡಾಟವನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗುವುದು.
- ಸೇತುವೆಯಿಂದ ಪ್ರಾರಂಭವಾಗುವ ರಸ್ತೆಯನ್ನು ಬದಲಿಸಿ ಹಂಪಿಯ ಕಡೆ ರಸ್ತೆ ಹೋಗದೇ ವೆಂಕಟಾಪುರ ಗ್ರಾಮದ ಮೂಲಕ ಬದಲಿ ರಸ್ತೆ ನಿರ್ಮಾಣ ಮಾಡಲಾಗುವುದು.

ಯುನೆಸ್ಕೋ ಈ ಎಲ್ಲಾ ಬದಲಾವಣೆಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದರೂ ತನ್ನ ಕಣ್ಗಾವಲಿನಲ್ಲಿ ಎಲ್ಲವೂ ನಡೆಯಬೇಕೆಂಬ ಶರತ್ತು ಹಾಕಿತು. ಬದಲಿ ರಸ್ತೆ ನಿರ್ಮಾಣ, ಭಾರಿ ವಾಹನಗಳ ಓಡಾಟ ನಿಷೇಧಕ್ಕಾಗಿ ಕಮಲಾಪುರ-ತಳವಾರ ಘಟ್ಟ ರಸ್ತೆಗೆ ಎರಡೂ ಕಡೆ ಕಬ್ಬಿಣದ ಚೌಕಟ್ಟು ನಿರ್ಮಾಣ ಎರಡನ್ನೂ ನಡೆಸಿ ಅದರ ಒಪ್ಪಿಗೆ ಪಡೆಯಿತು. ಸೇತುವೆ ವಿನ್ಯಾಸ ರೂಪಿಸಿ ಕಳಿಸಿಕೊಟ್ಟನಂತರವೇ ಕಾಮಗಾರಿ ಆರಂಭಿಸುವುದಾಗಿ ಮಾತು ನೀಡಿದ್ದ ಸರ್ಕಾರ ಯುನೆಸ್ಕೋ ಒಪ್ಪಿಗೆ ಪಡೆಯದೇ ಉಳಿದ 24 ಮೀಟರ್ಸ್ ಭಾಗವನ್ನು ಜೋಡಿಸಲು ಮುಂದಾಗಿ ಇಂತಹ ದುರಂತಕ್ಕೆ ಕಾರಣವಾಗಿ ಬಿಟ್ಟಿತು.

ದುರಂತದಲ್ಲಿ ಸಾವಿಗಿಡಾದ ಕಾರ್ಮಿಕರಿಗೆ ಕಟ್ಟಡ ಕಾರ್ಮಿಕರ ಕಾನೂನು ಅನುಸರಿಸಿ ಪರಿಹಾರ ನೀಡಬೇಕು ಎಂದು ಕಟ್ಟಡ ಕಾರ್ಮಿಕರ ಸಂಘಟನೆ ಈಗ ಹೋರಾಟದ ಹಾದಿ ಹಿಡಿದಿದೆ. ಆನೆಗೊಂದಿ ವೆಂಕಟಾಪುರ ಗ್ರಾಮದ ಸಾವಿಗೀಡಾದ 8 ಜನ ಕಾರ್ಮಿಕರ (ಅವರ ಶವಗಳು ಈಗ ಸಿಕ್ಕಿವೆ.) ಪರಿಹಾರವನ್ನು ಸರ್ಕಾರ ನೀಡಬೇಕು ಹಾಗೂ ಅವರ ಕುಟುಂಬಕ್ಕೆ ನೆರವಾಗಬೇಕು ಎಂದೇ ಹೋರಾಟಗಾರರ ಪ್ರಮುಖ ಬೇಡಿಕೆಯಾಗಿದೆ.


ಬಡವರ ಸಾವನ್ನು ಸಾವೇ ಎಂದು ಒಪ್ಪಿಕೊಳ್ಳದ ಸರ್ಕಾರ ಇದಕ್ಕೆ ಹೇಗೆ ಸ್ಪಂದಿಸುತ್ತದೆಯೋ ನೋಡಬೇಕು. ದುರಂತದ ತನಿಖೆ ನಡೆಸಲು ಅಧಿಕಾರಿಗಳ ಒಂದು ಸಮಿತಿಯನ್ನು ಸರ್ಕಾರ ರಚಿಸಿದೆ. ಅದು ಯಾವ ವರದಿ ನೀಡುತ್ತದೆಯೋ ಗೊತ್ತಿಲ್ಲವಾದರೂ ಅದು ತೇಪೆ ಹಚ್ಚಿ, ಇಡೀ ಪ್ರಕರಣವನ್ನು ತಿಪ್ಪೆಸಾರಿಸಿ ಹಾಕುತ್ತದೆ ಎಂಬ ಮಾತ್ರ ಯಾರಿಗೂ ಅನುಮಾನಗಳು ಉಳಿದಿಲ್ಲ



ಕಾಲವನ್ನು ಹಿಡಿಯೋರು ಯಾರು ಇಲ್ಲ ?


ೖಂ ಅನ್ನೋದು ಯಾರ ಕೈಗೂ ಸಿಗದೆ ಅವರಿಯದೆ ಓಡುವ ಕಾಡುಕುದುರೆ. ಅದನ್ನು ಿದು ಕಟ್ಟಿಹಾಕೋದಿರಲಿ ನಮ್ಮ ಕೆಲಸಗಳನ್ನು ದುಕೊಂಡ ಟೈಮಿಗೆ ಸರಿಯಾಗಿ ಮಾಡಿ ಂಗಿಸೋದೇ ಒಂದು ಸಾಹಸ. ಈಗಾಗಲೇ ದಿರುವಂತೆ ಸೂರ್ಯನ ಚಲನೆ ಮತ್ತು ಅದರ ತ್ತ ಸುತ್ತುವ ಭೂಮಿಯ ಚಲನೆಯ ಆಧಾರದ ಲಮಾನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಮಿ ತನ್ನ ಸುತ್ತ ತಾನು ಒಂದು ಸುತ್ತು ಭ್ರಮಿಸುವ ಸಮಯಕ್ಕೆ ಒಂದು ವೆಂತಲೂ ಮತ್ತು ಭೂಮಿಯು ರ್ಯನ ಸುತ್ತ ಪರಿಭ್ರಮಿಸಲು ಲುವ ಸಮಯಕ್ಕೆ ಒಂದು ರ್ಷವೆಂತಲೂ ಕಾಲಮಾನವನ್ನು ಧಿಪಡಿಸಿದ್ದೇವೆ.

1972ರವರೆಗೆ ಗ್ರೀನ್‌ವಿಚ್ ನ್ ಟೈಮ್ (ಜಿಎಂಟಿ) ಸಮಯದ ಾರದ ಮೇಲೆ ವಿಶ್ವದ ಎಲ್ಲ ಯಾರಗಳ ಮುಳ್ಳುಗಳನ್ನು ುಗಿಸಲಾಗುತ್ತಿತ್ತು. ಲಂಡನ್ನಿನ ನ್‌ವಿಚ್ ಎಂಬ ಪ್ರದೇಶದ ಮೇಲೆ ಭೂಮಧ್ಯ ಖೆ ಹಾದುಹೋಗುತ್ತದೆಯಾದ್ದರಿಂದ ಅದನ್ನು ಾರ ಗಿಟ್ಟು ಕೊಳ್ಳಲಾಗಿತ್ತು. ಅದರಿಂದ ರ್ವಕ್ಕಿರುವ ಮತ್ತು ಪಶ್ಚಿಮಕ್ಕಿರುವ ಪ್ರದೇಶಗಳು ಬೇರೆ ಬೇರೆ ಸಮಯಗಳನ್ನು ಚ್ ಸಮಯಕ್ಕನುಗುಣವಾಗಿ ಅಳವಡಿಸಿಕೊಂಡವು.



ಕಾಲಮಾನ ಸಂಕ್ಷಿಪ್ತ ಚರಿತ್ರೆ

ಕೈಗಾರಿಕಾ ಕ್ರಾಂತಿಗೆ ಮುಂಚೆ ಕಾಲದ ನಿಖರತೆಗೆ ಅಷ್ಟೇನೂ ಗಮನಕೊಡುತ್ತಿರಲಿಲ್ಲ. ಮುಂಜಾನೆಯಿಂದ ಆರಂಭಿಸಿ ಸೂರ್ಯನ ಸ್ಥಾನಕ್ಕನುಗುಣವಾಗಿ ದಿನನಿತ್ಯದ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಅಲ್ಲದೆ ಜಗತ್ತಿನ ಹಲವು ನಗರ ದೇಶಗಳಲ್ಲಿ ಹಲವು ಕಾಲಮಾನಗಳು ಚಾಲ್ತಿಯಲ್ಲಿದ್ದವು. ಆದರೆ, 1800ರ ನಂತರದಲ್ಲಿ ಕೈಗಾರಿಕಾ ಕ್ರಾಂತಿಯು ಆಗಮನದಿಂದ ವಿವಿಧ ಕಾಲಮಾನಗಳು ತೊಡಕನ್ನುಂಟು ಮಾಡತೊಡಗಿದವು. ಕ್ರಮೇಣ 1840ರಲ್ಲಿ ಬ್ರಿಟನ್ ರೈಲು ಕಂಪನಿಯು ಅಧಿಕೃತವಾಗಿ ತನ್ನ ಕಾಲಮಾನವನ್ನು ಇನ್ನಿತರ ಪ್ರದೇಶಗಳಿಗೆ ನಿಗಧಿಗೊಳಿಸಿತು.



1880ರಲ್ಲಿ ಬ್ರಿಟನ್ನಿನ ಹಲವು ಪ್ರದೇಶಗಳು ತಮ್ಮ ಸಮಯವನ್ನು ಇದಕ್ಕೆ ನಿಗದಿಪಡಿಸಿಕೊಂಡವು. ಇದರ ಹಿಂದೆಯೇ 1884ರಲ್ಲಿ ವಾಷಿಂಗ್ಟನ್ ಸಮ್ಮೇಳನದಲ್ಲಿ ಗ್ರೀನ್‌ವಿಚ್ ಸಮಯವನ್ನು ಜಾಗತಿಕ ಕಾಲಮಾನವೆಂದು ಅಂಗೀಕರಿಸಲಾಯಿತು.

ಪರಮಾಣು (ಅಟಾಮಿಕ್) ಗಡಿಯಾರ

1955ರಲ್ಲಿ ವಿಶ್ವದ ಮೊದಲ ಪರಮಾಣು ಗಡಿಯಾರವನ್ನು ಕಂಡುಹಿಡಿಯುವುದ ರೊಂದಿಗೆ ಗ್ರೀನ್‌ವಿಚ್ ಕಾಲಮಾನಕ್ಕೆ ಕುತ್ತು ಬಂದಿತು. ಪರಮಾಣು ಗಡಿಯಾರಗಳು ನಿಖರವಾಗಿ ಸಮಯವನ್ನು ತಿಳಿಸಬಲ್ಲವಾದ್ದ ರಿಂದ ಅವುಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಯಿತು. ಅದರಂತೆ ಕೇಸಿಯಮ್ ಎಂಬ ಪರಮಾಣುವು ತನ್ನಿಂದ 9,192,631,770 ಗಳಷ್ಟು ಶಕ್ತಿ ವರ್ಗಾವಣೆ ಮಾಡಲು ತಗಲುವ ಸಮಯವನ್ನು ಒಂದು ಸೆಕೆಂಡ್ ಎಂದು ನಿಗದಿಪಡಿಸಲಾಯಿತು. 1967ರಿಂದೀಚೆಗೆ ಪರಮಾಣು ಗಡಿಯಾರದ ಆಧಾರದ ಮೇಲೆ ಸಂಯೋಜಿತ ಸಾರ್ವತ್ರಿಕ ಕಾಲ (ಯುನೈಟೆಡ್ ಯುನಿವರ್ಸಲ್ ಟೈಂ) ಎಂಬ ಕಾಲಮಾನವನ್ನು ಅಳವಡಿಸಿಕೊಂಡು ವಿಶ್ವದ ಅಧಿಕೃತ ಕಾಲಮಾನವೆಂದು ಬಳಸಲಾಗುತ್ತಿದೆ.

ನಿಧಾನಗೊಳ್ಳುತ್ತಿರುವ ಭೂಮಿಯ ಪರಿಭ್ರಮಣೆ

ಭೂಮಿಯ ಮೇಲಿನ ಸಾಗರದಲೆಗಳ ಸೆಳೆತ, ಭೂಕಂಪ, ಚಂಡಮಾರುತ, ಇತ್ಯಾದಿಗಳಿಂದಾಗಿ ಭೂಮಿಯ ಪರಿಭ್ರಮಣೆ ನಿಧಾನಗೊಳ್ಳುತ್ತಿದೆ. ಅಂದರೆ, ಸೂರ್ಯನ ಸುತ್ತ ಸುತ್ತುವ ಭೂಮಿಯ ಪರಿಭ್ರಮಣೆಯು ನಿಖರವಾಗಿ ಒಂದುವರ್ಷವೇನೂ ಅಲ್ಲ. ಅದಕ್ಕಿಂತಲೂ ಹೆಚ್ಚಾಗುತ್ತಾ ಸಾಗಿದೆ. ಭೂಮಿಯ ನಿಧಾನ ಚಲನೆಯಿಂದ ಹಗಲಿನ ಅವಧಿಯು ಹೆಚ್ಚಾಗುತ್ತಾ ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ, ಒಂದು ದಿನಕ್ಕೆ 24 ಘಂಟೆಗಳು, 1 ಘಂಟೆಗೆ 60 ನಿಮಿಷಗಳು. ಆದರೆ 1 ನಿಮಿಷಕ್ಕೆ 60 ಸೆಕೆಂಡುಗಳೂ ಇರಬಹುದು, ಕೆಲವೊಮ್ಮೆ ಅದು 59 ನಿಮಿಷ ಅಥವಾ 61 ನಿಮಿಷಗಳು ಇರಬಹುದು. ಈಗಾಗಿ, ಪ್ರತಿ 19 ತಿಂಗಳಿಗೊಮ್ಮೆ ಒಂದೊಂದು ಹೆಚ್ಚುವರಿ (ಲೀಪ್) ಸೆಕೆಂಡ್‌ನ್ನು ಸೇರಿಸಲಾಗುತ್ತದೆ. ಮೊದಲ ಹೆಚ್ಚುವರಿ ಸೆಕೆಂಡನ್ನು 1972ರ ಜೂನ್ 30ರಂದು ಸೇರಿಸಲಾಯಿತು. 2009ರ ಹೊತ್ತಿಗೆ ಸುಮಾರು 24 ಹೆಚ್ಚುವರಿ ಸೆಕೆಂಡುಗಳನ್ನು ಸೇರಿಸಲಾಗಿದೆ.

ಮುಂದಿನ ವರ್ಷಗಳಲ್ಲಿ ಭೂಮಿಯ ಚಲನೆಯು ಮತ್ತಷ್ಟು ನಿಧಾನಗೊಳ್ಳುವುದರಿಂದ ಪ್ರತಿ 250 ದಿನಗಳಿಗೊಮ್ಮೆ ಹೆಚ್ಚುವರಿ ಸೆಕೆಂಡನ್ನು ಸೇರಿಸಬೇಕಾಗುತ್ತದೆ. 22ನೇ ಶತಮಾನದ ಹೊತ್ತಿಗೆ ವರ್ಷಕ್ಕೆರಡು ಬಾರಿ ಹೆಚ್ಚುವರಿ ಸೆಕೆಂಡನ್ನು ಸೇರಿಸಬೇಕಾಗುತ್ತದೆ. ○

ಸ್‌ಎಫ್‌ಐನಿಂದ ಭಾವೈಕ್ಯತಾ ಸಮಾವೇಶ...

ೀ 7ರಿಂದ

ಖ್ಯ ಕಾರಣವಾಗಿರುವುದರಿಂದ ನಾವುಗಳು ಡರ ವಿರುದ್ಧವೂ ಹೋರಾಡಬೇಕಿದ್ದು ಮುವಾದ- ಭಯೋತ್ಪಾದನೆ ಒಂದೇ ನಾಣ್ಯದ ಡು ಮುಖಗಳಿದ್ದಂತೆ ಎಂದರು.

ನಂತರ ಮುಖ್ಯ ಅತಿಥಿಗಳಾಗಿ ಮಾತನಾಡಿದ ಎಫ್‌ಐನ ಅಖಿಲ ಭಾರತ ಅಧ್ಯಕ್ಷರಾದ .ಪಿ.ಕೆ. ಬಿಜುರವರು ಇಂದು ಎಬಿವಿಪಿ ಘಟನೆಯವರು ಭಗತ್‌ಸಿಂಗ್‌ನ ಭಾವಚಿತ್ರವನ್ನು ಸಿಕೊಳ್ಳುತ್ತಿದ್ದಾರೆ. ಅವರ ವಿಚಾರಗಳನ್ನೆಲ್ಲ, ನಾವೇ ವಾದ ಭಗತ್‌ಸಿಂಗ್ ವಾರಸುದಾರರು ಕರ್ನಾಟಕ ಅಧಿಕಾರದಲ್ಲಿರುವ ಬಿಜೆಪಿ ಶಿಕ್ಷಣವನ್ನು ವಾದೀಕರಿಸಲು ಹೊರಟಿದೆ. ಸರ್ಕಾರಿ ಾಲೇಜುಗಳಲ್ಲಿ ಸರಿಯಾದ ಮೂಲಭೂತ ರ್ಯಗಳಿಲ್ಲ, ಬಡತನದಿಂದ ನರಳುತ್ತಿರುವ

ಸಂದರ್ಭದಲ್ಲಿ ಎಲ್ಲ ಶಾಲೆಗಳಲ್ಲೂ ಮಕ್ಕಳಿಗೆ ಯೋಗ ತರಬೇತಿ, ಪ್ರಾಣಾಯಾಮಗಳನ್ನು ಹೇಳಿಕೊಡುವ ಮೂಲಕ ಅವರಲ್ಲಿ ಮೌಢ್ಯವನ್ನು ತುಂಬುವ ಕೆಲಸವನ್ನು ನಡೆಸುತ್ತಿದೆ. ಎಸ್‌ಎಫ್‌ಐ ದೇಶದಲ್ಲೇ ಅತಿದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದ್ದು 44 ಲಕ್ಷ ಸದಸ್ಯತ್ವವನ್ನು ಹೊಂದಿದೆ. ಪ್ರತಿವರ್ಷ 1 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಹೊಸದಾಗಿ ಎಸ್‌ಎಫ್‌ಐನ ಸದಸ್ಯತ್ವವನ್ನು ಪಡೆಯುತ್ತಿದ್ದಾರೆ ಎಂದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಂ.ಕೆ.ನೀಲಾ, ಡಿವೈಎಫ್‌ಐನ ರಾಜ್ಯ ಉಪಾಧ್ಯಕ್ಷರಾದ ಕಾಂ.ಬಿ.ರಾಜಶೇಖರ ಮೂರ್ತಿ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಕಾಂ.ಹೆಚ್.ಆರ್.ನವೀನ್ ಕುಮಾರ್ ವಹಿಸಿದ್ದರು. ಪ್ರಾರಂಭದಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್.ಅನಂತ್‌ನಾಯಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಾಜ್ಯಸಮಿತಿ ಸದಸ್ಯರಾದ ಕಾಂ.ವಿಜಯ್‌ಕುಮಾರ್ ಸೋನಾರೆ ಎಲ್ಲರನ್ನು ಸ್ವಾಗತಿಸಿದರು. ಬಹಿರಂಗಸಭೆ ಮುಗಿದ ನಂತರ ವೈವಿದ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಎಡ-ಪ್ರಗತಿಪರ ಜಾತ್ಯಾತೀತ ವಿದ್ಯಾರ್ಥಿ ಯುವಜನ ಸಂಘಟನೆಗಳಿಂದ ಜಂಟಿ ಕಾರ್ಯಾಚರಣೆಗೆ ತೀರ್ಮಾನ : ಸರ್ಕಾರದ ಈ ಕಾರ್ಯಕ್ರಮದ ವಿರುದ್ಧ ಎಸ್‌ಎಫ್‌ಐ ನ ನೇತೃತ್ವದಲ್ಲಿ ಈಗಾಗಲೇ ಕೆಲವು ಕಡೆಗಳಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದ್ದು, ರಾಜ್ಯಾದ್ಯಂತ ಶಾಲಾ-ಕಾಲೇಜುಗಳಲ್ಲಿ ವ್ಯಾಪಕ ಪ್ರಚಾರಾಂದೋಲನವನ್ನು ಕೈಗೊಳ್ಳಲಾಗಿದೆ. ಇದರ ಜೊತೆಗೆ ರಾಜ್ಯದ ಎಡ-ಜಾತ್ಯಾತೀತ, ಪ್ರಗತಿಪರ ವಿದ್ಯಾರ್ಥಿ ಯುವಜನ ಸಂಘಟನೆಗಳನ್ನು ಒಂದೆಡೆ ಸೇರಿಸಿ ಜಂಟಿ ಕಾರ್ಯಾಚರಣೆಗಳನ್ನು ನಡೆಸಲು ತಯಾರಿಗಳು ನಡೆಯುತ್ತಿವೆ. ○

ಕವಿತೆ

ಬಾಣ ಹೂಡುತ್ತೇವೆ

ಹೌದು
ನಾವು ಸೀತಯರಲ್ಲ
ಕಲ್ಲಾಗಿ ನಿಂತ ಅಹಲ್ಯೆಯರಲ್ಲ
ಸತ್ತ ಗಂಡನಿಗೆ ರೋಧಿಸಿದ
ಸತ್ಯವಾನನ ಸಾವಿತ್ರಿಯರಲ್ಲ
ಶೂರ್ಪನಖಿಯರಂತೂ ಅಲ್ಲವೇ ಅಲ್ಲ...

ನೀವು
ಹಚ್ಚಿಟ್ಟು ಬಂದ ಬೆಂಕಿ ಗುಡಿ-ಚರ್ಚು-ಮಸೀದಿಗಳ
ನುಗ್ಗಿ
ಮನೆ-ಮನಗಳ ಸುಟ್ಟು
ಬಯಲು-ಆಲಯದೊಳು
ಬೆತ್ತಲಾಗಿ ನಿಂತವರು....

ಹಗಲು ಕಳೆದರೆ ಸಾಕು
ಕುಣಿಯಲು ಹೇಳುತ್ತದೆ
ತುತ್ತಿನ ಚೀಲ
ಮಸುಕು ಮಬ್ಬಿನಲಿ
ಯಾರದೋ ಬಾಟಲಿಗೆ
ಸುರಿಯುವಾಗ ಮದ್ಯ
ಥಟ್ಟನೆ ನೆನಪಾಗುತ್ತದೆ
ಖಾಲಿಯಾದ ಅವ್ವನ ಔಷಧಿ ಬಾಟಲು
ಬಿಟ್ಟ ಕಣ್ಣು ಬಿಡದೆ
ನೋಡುತ ಕುಳಿತವನಿಗೆ
ಹೇಳಬೇಕಿದೆ
ತೊಟ್ಟ ತುಂಡು ಬಟ್ಟೆಯೊಳಗೆ
ಅಪ್ಪನ ರೋಗಕೆ
ಡಾಕ್ಟರು ಕೊಟ್ಟ ಚೀಟಿಯಿದೆಯೆಂದು...

ನಾವು ನಿಮಗೆ ಹೇಳಬೇಕಿದೆ
ನಿಮ್ಮ ಶ್ರೀ ಶ್ರೀ...ಗಳ ದಿವ್ಯಸಾನಿಧ್ಯದಲ್ಲಿ
ಹಚ್ಚಿಟ್ಟ ದೀಪವೊಂದು
ಧರೆಯ ಸುಡುವುದಾದರೆ
ಹೆಜ್ಜೆ ಹಾಕುವುದಿಲ್ಲ
ನಾವು ಸೀತೆಯರಂತೆ
ಕಾಡಿನೆಡೆಗೆ...

ನೀವು ಹಿಡಿದ ಪಂಜು
ಬೆಳಕು ತೋರದೆ
ಸುಟ್ಟು ಬೂದಿ ಮಾಡುವುದಾದರೆ

ನಾವು ಕಲ್ಲಾಗಿ ನಿಲ್ಲುವುದಿಲ್ಲ
ನೀವು ಕೊಟ್ಟ ಶಾಪಕೆ...

ದರದರನೆ ಎಳೆದಾಡಿ (ನಿಮ್ಮ?)
ರಾಮರಾಜ್ಯ ಸ್ಥಾಪಿಸುವುದಾದರೆ
ಬಿಲ್ಲು ಬಾಣ ಹೂಡುವುದಾದರೆ

ನಾವು ಬೇಡುವುದಿಲ್ಲ
ಮಾನ ಉಳಿಸಿರೆಂದು
ಜೀವ ಉಳಿಸಿರೆಂದು

ಬದಲಾಗಿ
ಶೀಲ ಶಂಕಿಸಿದ ರಾಮ
ಕಲ್ಲಾಗಿಸಿದ ಗೌತಮ
ಮೂಗು ಕೊಯ್ದ ಲಕ್ಷ್ಮಣರನ್ನ
ಸಾಲಾಗಿ ನಿಲ್ಲಿಸಿ
ಕೈಯ್ಯ ಬಿಲ್ಲು ಕಸಿದು
ಬಾಣ ಹೂಡುತ್ತೇವೆ..

ನಿಮ್ಮ ಶಾಪಗಳು
ನಮ್ಮನ್ನು ತಟ್ಟದಂತೆ

ಸೀತೆ ಕಾಡಿಗ್ಹೋಗದಂತೆ
ಅಹಲ್ಯೆ ಕಲ್ಲಾಗದಂತೆ
ತಡೆಯುತ್ತೇವೆ..

● ಬಿ.ಶ್ರೀನಿವಾಸ

'ವಾರ್ಸಾ' : ನಗರವೊಂದರ ಆತ್ಮಕ



ವಾರ್ಸಾ ಪೋಲೆಂಡ್ ದೇಶದ ಒಂದು ನಗರ. ವೈಭವಯುತ ನಗರವೇ. ರಾತ್ರಿಯಲ್ಲಿ ಬಣ್ಣ ಬಣ್ಣದ ಬೆಳಕಿನಲ್ಲಿ ಥಳಥಳಿಸುವ ಗಾಜಿನ ಹೊದಿಕೆಯ ಕಟ್ಟಡಗಳು, ಷೋರೂಮುಗಳು, ಹೋಟೆಲ್‌ಗಳಿಂದ ಕೂಡಿದ ನಗರ. ನಗರದ ಮೇಲೆ ಧಾರಾಕಾರ ಮಂಜು ಸುರಿಯುತ್ತಿದೆ. ರಸ್ತೆಯಲ್ಲಿ ಕತ್ತಲು ಬೆಳಕಿನಾಟ. ವಿಧ ವಿಧದ ಕಾರುಗಳು, ಭವ್ಯವಾದ ಬಸ್ಸುಗಳು ಮತ್ತೇನೇನೋ ಆಗೀಗ ಹಾದುಹೋಗುತ್ತಿವೆ.

ಮೈ ತುಂಬಾ ಬೆಚ್ಚನೆಯ ಉಣ್ಣೆಯ ಬಟ್ಟೆಯನ್ನುಟ್ಟ, ಉಣ್ಣೆಯ ಟೋಪಿ ತೊಟ್ಟ ಜನರು ಅಲ್ಲಲ್ಲಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾರೆ. ವಾಹನಗಳ ನಡುವೆ ರಸ್ತೆಯ ಮೇಲೆ ಸುರಿದು ಬೀಳುವ ಹಿಮವನ್ನು ಪಕ್ಕಕ್ಕೆ ಸರಿಸಿ ಹಾದಿ ಸರಾಗ ಮಾಡುವ ದೈತ್ಯ ಬುಲ್‌ಡೋಜರ್‌ನಂತಹ ಯಂತ್ರವೊಂದನ್ನು ಅಲ್ಲಲ್ಲಿ ಓಡಾಡುತ್ತಿದೆ.

ಆತನ ವಯಸ್ಸು 50ರ ಮೇಲಿದೆ. ಆತ ತನ್ನ ಮಗಳನ್ನು ಹುಡುಕುತ್ತಾ ನಗರದಲ್ಲಿ ಅಲೆಯುತ್ತಿದ್ದಾನೆ. ಯಾವ್ಯಾವುದೋ ಸುಳಿವು ಹಿಡಿದು ಬಾಗಿಲು ತಟ್ಟುತ್ತಾನೆ. ಹೀಗೆ ಒಂದು ಮನೆಯ ಬಾಗಿಲು ಬಡಿದು ಕೇಳಿದರೆ 'ಪೋಲೀಸರಿಗೆ ಫೋನ್ ಮಾಡುತ್ತೇನೆ' ಎನ್ನುತ್ತಾಳೆ ಕಿಟಕಿಯಿಂದ ಮಾತನಾಡುವ ಮುದುಕಿ. ಮತ್ತೊಂದು ಕಟ್ಟಡದ ಬಾಗಿಲು ಬಡಿದರೆ ಸಿಗುವ ಯುವತಿಗೆ ತನ್ನ ಸಾಲಬಾಧೆಯಿಂದ ಹೇಗಾದರೂ ತಪ್ಪಿಸಿಕೊಳ್ಳುವ ತವಕ. ತನ್ನ ದೇಹವನ್ನೇ ಒಪ್ಪಿಸಿ ಸಾಲ ತೀರಿಸಲು ಬೇಕಾಗುವಷ್ಟು ದುಡ್ಡು ಕೇಳುವ ಧಾವಂತ.

ದಾರಿ ಹೋಕನೊಬ್ಬನನ್ನು ವ್ಯಕ್ತಿಯೊರ್ವ ಹಿಂದಿನಿಂದ ಬಂದು ಹಿಡಿದುಕೊಂಡು ಚಾಕು ತೋರಿಸಿ ಇರುವುದನ್ನು ಒಪ್ಪಿಸಲು ಕೇಳುತ್ತಾನೆ. ದರೋಡೆಕೋರನ ಮುಸುಡಿಗೆ ಬಿದ್ದ ಹೊಡೆತಕ್ಕೆ ಚೂರಿ ಎತ್ತಲೋ ಹಾರಿ ಬೀಳುತ್ತದೆ. ದರೋಡೆಕೋರನ 'ನಸೀಬು' ಚೆನ್ನಾಗಿಲ್ಲ. ಮತ್ತೊಂದು ಕಾರು ಅಪಹರಣಕ್ಕೆ ಕೈ ಹಾಕಿದರೆ ಒಳಗಿದ್ದ ಯುವತಿ ಬಂದೂಕು ಹಣೆಗಿಡಬೇಕೇ? ದರೋಡೆಕೋರರನ್ನು ಎದುರಿಸುವುದು ಜನರಿಗೆ ಅಷ್ಟೊಂದು ಅಭ್ಯಾಸವಾಗಿದೆ.!!

ಕಾರಿನ ಮಾಲೀಕನ ಬೈಯ್ಗುಳಕ್ಕೆ ದರೋಡೆಕೋರ ಹೇಳಿದ, 'ನಿನಗೂ ನಾಲ್ಕು ಜನ ಮಕ್ಕಳಿದ್ದು, ನೀನೂ ಒಬ್ಬ ನಿರುದ್ಯೋಗಿಯಾಗಿದ್ದರೆ, ಆಗ ನಿನಗೆ ಜೀವನ ಎಷ್ಟು ಕಷ್ಟ ಅಂತ ಗೊತ್ತಾಗುತ್ತಿತ್ತು'!!!

ಇಲ್ಲೊಬ್ಬ ಯುವಕ ಇದ್ದಾನೆ. ಕಾರು ಕೊಳ್ಳುವವನಂತೆ ಶೋ ರೂಮಿನೊಳ ಹೊಕ್ಕಿದ್ದಾನೆ. ಮಾತನಾಡುತ್ತಾ ಮಾತನಾಡುತ್ತಾ ಹೊಸ ಮಾಡೆಲ್ ಕಾರೊಂದರಲ್ಲಿ ಕೂತು-ಷೋ ರೂಮಿನಲ್ಲಿ ತನಗೊಂದು ಕೆಲಸ ಕೊಡಲೇಬೇಕು, ಇಲ್ಲವಾದರೆ ತಾನು ಕಾರಿಂದ ಹೊರಗೇ ಬರುವುದಿಲ್ಲ- ಎಂದು ಚಂಡಿ ಹಿಡಿದಿದ್ದಾನೆ. ಕೆಲಸ ಕೋರಿ ಹಾಕಿದ್ದ ಆತನ ಅರ್ಜಿ ಈಗಾಗಲೇ ತಿರಸ್ಕೃತವಾಗಿದೆ. ಮಾಲೀಕರು ಅವನಿಗೆ ನಾಲ್ಕು ಒದ್ದು ಹೊರ ದಬ್ಬುತ್ತಾರೆ. ಅವನು ಮರಳು ಮಾಡಲು ಬಯಸುತ್ತಿರುವ ಅವನ ಪ್ರೇಯಸಿ ಹೊರಗೆ ಅಲ್ಲಿಯೇ ಇದ್ದಾಳೆ. ಕಾರು ಖರೀದಿ ವಿಚಾರದಲ್ಲಿ ಬಂದ ಭಿನ್ನಾಭಿಪ್ರಾಯವೇ ಮಾಲೀಕರು ತನ್ನನ್ನು ಹೊರತಳ್ಳಲು ಕಾರಣವೆನ್ನುತ್ತಾನೆ ಅವನು. 'ನಿನ್ನ ಜನ್ಮದಿನಕ್ಕೆ ಎಂತಹ ಕಾರಿನ ಗಿಫ್ಟ್ ಬೇಕು', ನೋಡು ಎಂದು ಇನ್ನಷ್ಟು ಶೋ ರೂಂ ಸುತ್ತಿಸುವ ಅವನಿಗೆ ಪ್ರೇಯಸಿಯ ಪರ್ಸಿನ ಪುಡಿಗಾಸಿನ ಆಸರೆ. ಇವನೊಬ್ಬ 'ಪ್ರೇಮೋದ್ಯೋಗಿ'.

ಮಗಳನ್ನು ಹುಡುಕುತ್ತಿರುವ ಅಪ್ಪ ಕೊನೆಗೂ ಮಗಳು ಕೆಲಸ ಮಾಡುತ್ತಿರುವ ಹೋಟೆಲ್ ಪತ್ತೆ ಹಚ್ಚುತ್ತಾನೆ. ಅಲ್ಲಿ ಕಂಡ ಯುವತಿಯ ಹೆಸರು, ವಯಸ್ಸು, ವಿಳಾಸ, ದಾಖಲೆ ಎಲ್ಲವೂ ತನ್ನ



ಮಗಳದ್ದೇ. ಆದರೆ ಅವಳು ಆತನ ಮಗಳಲ್ಲ. ನಾಲ್ಕು ಬಡಿದ ಮೇಲೆ ಯುವತಿ ಬಾಯ್ಬಿಟ್ಟದ್ದೇನು? ಇವಳಿಗೆ ಹೊಸ ಹೆಸರು, ಗುರುತು ಬೇಕಿತ್ತು. ಅವಳಿಗೆ ದುಡ್ಡು ಬೇಕಿತ್ತು. ಯುವತಿಯರಿಬ್ಬರು ಅದಲು ಬದಲಾಗಿದ್ದಾರೆ..! ಮಗಳು ಸಿಗಲಿಲ್ಲ.

ನಿಂತ ಟ್ರಕ್ಕಿನೊಳಗಿಂದ ಸೇಬು ಕದಿಯುವ ಅಪ್ಪ- ಮಗ. ಚೆಂದದ ಯುವತಿಯೊಬ್ಬಳನ್ನು ಕಾರಲ್ಲಿ ಕೂರಿಸಿಕೊಂಡು ನಗರದಲ್ಲೆಲ್ಲಾ ಸುತ್ತುತ್ತಾನೆ ಮತ್ತೊಬ್ಬ. ಯಾಕೋ ಎಲ್ಲೂ ಸರಿ[...] 'ವ್ಯವಹಾರ'ವೇ ಕುದುರುವುದಿಲ್ಲ. ಇವ[...] ಅಡ್ಡಾಡುವಾಗ ದಾರಿಗಡ್ಡ ಸಿಗುವ ಆ ಮುದ[...] ಬಗ್ಗೆ ಕನಿಕರ ತೋರುವವರು ಹಲವರು. ಅ[...] ಸಹಾಯಬೇಕಾಗಿದೆ. ಅವನ ತೊಂದರೆ ಎ[...] ಮುದುಕ ತಾನು ವಾಸಿಸುವುದಲ್ಲಿ!? ಅದನ್ನೇ ಮ[...] ಹೋಗಿದ್ದಾನೆ.!! ಹಲವು ವ್ಯಕ್ತಿಗ[...] ಒಬ್ಬರಿಗೊಬ್ಬರಿಗೂ ಸಂಬಂಧವಿಲ್ಲ. ಆದ[...] ಅವರೆಲ್ಲರ ಆಕಸ್ಮಿಕ ಭೇಟಿ ಆಗಾಗ್ಗೆ.

ಮನೆ, ಮಾಡು, ವಾಹನದ ಛಾವಣಿ, [...] ಮೇಲಿನ ಟೋಪಿಯ ಮೇಲೂ ಸುರಿದು [...] ಬೀಳುವ ಹಿಮದ ಆ ನಗರ ಮೈ ಕೊರೆಯ[...] ಹೊರಗಿನ ಥಂಡಿಯಲ್ಲೂ ನಿರುದ್ಯೋಗ, ಹ[...] ಹಾದರ, ಕಳ್ಳತನ, ದರೋಡೆ, ಕೊಲೆಗಳ[...] ಬೆಂಕಿಯಲ್ಲಿ ಒಳಂಗಿದೊಳಗೆ ಸುಟ್ಟು ಹೋಗು[...]

ಚಿತ್ರದ ನಿರ್ದೇಶಕರು ಡರಿಯಸ್ ಗಜೆವ[...] ಇದು ಪೋಲೆಂಡ್ ದೇಶದ ಚಿತ್ರ. [...] ಹೇಳಬೇಕೆಂದರೆ ಸಿನಿಮಾಕ್ಕೊಂದು ಕತೆಯೇ [...] ಬಿಡಿ ಬಿಡಿ ಚಿತ್ರಗಳೇ ಕತೆ ಹೇಳುತ್ತವೆ. ಅ[...] ಅಂತಿಂಥ ಕತೆಯಲ್ಲ. ಬಿಡಿ ಬಿಡಿ ಚಿತ್ರಗಳ[...] ಪೋಣಿಸಿಕೊಂಡರೆ ಅಲ್ಲಿ ಪೋಲೆಂಡ್ ದೇಶದ [...] ನಗರದ ಆತ್ಮ ಸಿಗುತ್ತದೆ. ಅದು ಆ ನಗರದ [...] ಅಂತ ಬೇಕಾದರೂ ಅಂದುಕೊಳ್ಳಬಹುದು ಅಥ[...] ಬಂಡವಾಳಶಾಹಿಯ ಆತ್ಮ ಅಂತ ಬೇಕಾದ[...] ನಾವು ಅಂದು ಕೊಳ್ಳಬಹುದು. ತೀರ್ಮಾನ ನ[...] ಸೇರಿದ್ದು.

(ಈ ಚಿತ್ರ ಬೆಂಗಳೂರಿನಲ್ಲಿ ನಡೆದ ಮೂರ[...] ಅಂತರ್ರಾಷ್ಟ್ರೀಯ ಚಲನಚಿತ್ರೋತ್ಸವದ[...] ಪ್ರದರ್ಶಿತವಾಯಿತು)

ಪ್ರಶಸ್ತಿಯ ವಿವಾದ... ಸಿನಿಮಾ - ಸಂಸ್ಕೃತಿ ಕುರಿತು

ಚಲನಚಿತ್ರ ಪ್ರಶಸ್ತಿಗಳು ಹಲವು ಬಾರಿ ವಿವಾದಗಳನ್ನು ಹುಟ್ಟು ಹಾಕುತ್ತವೆ ಹಾಗೂ ಹಲವು ಬಗೆಯ ಚರ್ಚೆಗಳನ್ನು ಹುಟ್ಟು ಹಾಕುತ್ತವೆ.

ಕಲಾತ್ಮಕ ಚಲನಚಿತ್ರಗಳು ವ್ಯಾಪಾರಿ ಚಲನಚಿತ್ರಗಳು ಎಂಬ ವಿಭಜನೆ ಸರಿಯೇ? ಅಂತಹ ವರ್ಗೀಕರಣವೇ ಈಗ ಅಪ್ರಸ್ತುತವಲ್ಲವೇ? ಒಳ್ಳೆಯ ಚಿತ್ರ, ಕೆಟ್ಟ ಎಂಬ ಎರಡೇ ವಿಭಾಗವಷ್ಟೇ ವಾಸ್ತವವಲ್ಲವೇ?

ಬಿಡುಗಡೆಯನ್ನೇ ಕಾಣದ, ಜನರು ನೋಡದ ಸಿನಿಮಾಗಳಿಗೆ ಪ್ರಶಸ್ತಿ ಕೊಡುವುದು ಸರಿಯೇ? ಎಂಬಂತಹ ಪ್ರಶ್ನೆಗಳನ್ನು ಎತ್ತಲಾಗಿದೆ. ಪ್ರಶಸ್ತಿಗಾಗಿಯೇ ಸಿನಿಮಾ ತಯಾರಿಸುವವರಿಗೂ ಇದ್ದಾರೆಂದೂ ಟೀಕಿಸಲಾಗಿದೆ.

ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿದ ಜನಪ್ರಿಯ ತಾರೆಯರ ಚಿತ್ರವೇ ಹಲವು ಓಡದೆ ಮುಗ್ಗರಿಸುತ್ತವೆ. ಕೆಟ್ಟ ಚಿತ್ರವೊಂದಕ್ಕೆ ಜನ ಮುಗಿಬಿದ್ದರೆ, ಅದನ್ನು ಜನಪ್ರಿಯ ಚಿತ್ರವೆಂದು ಪರಿಗಣಿಸಿ ಬಹುಮಾನ ಕೊಡಬಹುದಾ?

ಸಿನಿಮಾ ಮಾಧ್ಯಮವನ್ನು ಎಷ್ಟು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ ಎನ್ನುವ ಪ್ರಯೋಗ ಶೀಲತೆಯೇ ಪ್ರಶಸ್ತಿಯ ಮಾನದಂಡ. ಉತ್ತಮವಾಗಿರುವುದು ಜನಪ್ರಿಯವಾಗದಿರುವ ಸಮಸ್ಯೆ ಬರಿ ಕನ್ನಡಕ್ಕೆ ಮಾತ್ರ ಸೀಮಿತವಾದ ಸಮಸ್ಯೆಯಲ್ಲ. ಇಡೀ ವಿಶ್ವದಲ್ಲೆಲ್ಲಾ ಎಲ್ಲಾ ಭಾಷೆಗಳಲ್ಲೂ ಇಂತಹ ಸಮಸ್ಯೆಗಳಿವೆ ಎಂಬ ವಾದ ಮಾತುಗಳು ಕೇಳಿ ಬಂದಿವೆ.

ಈ ಎಲ್ಲಾ ಪ್ರಶ್ನೆಗಳು ಹಾಗೂ ವಾದದ ಬಗೆಗೆ ತೀರ್ಪುಕೊಡುವುದು ಈ ಬರಹದ ಉದ್ದೇಶ ಅಲ್ಲ. ಆ ಚರ್ಚೆ ಆರೋಗ್ಯಕರವಾಗಿ ಮುಂದುವರಿಯಲಿ. ಆದರೆ ಈ ಸಂದರ್ಭದಲ್ಲಿ ಉತ್ತಮವಾದ, ಗಂಭೀರ (ಮತ್ತಿದರಲ್ಲಿ ಹಾಸ್ಯ ಇರಬಾರದೆಂದೇನಿಲ್ಲ) ಚಿತ್ರಗಳು ಜನರನ್ನು ತಲುಪುತ್ತಿಲ್ಲವಲ್ಲ ಎಂಬುದು ಮತ್ತಷ್ಟು ಚರ್ಚೆಯಾಗಬೇಕಾದ ಬಹಳ ಮುಖ್ಯವಾಗಿ ಪ್ರಶ್ನೆ ಅನಿಸುತ್ತದೆ.

ಜನರು ಇಂತಹ ಚಿತ್ರಗಳನ್ನು ನೋಡುವುದಿಲ್ಲ ಅಂತ ದೂರುವುದರಲ್ಲಿ ಹೆಚ್ಚು ಅರ್ಥವಿಲ್ಲ. ಬೆಂಗಳೂರಿನಲ್ಲಿ ಮೊನ್ನೆ ಮೊನ್ನೆ ಯವರೆಗೂ ಯಾವುದಾದರೂ ಒಂದು ಗಂಭೀರ ಚಿತ್ರ ಬಿಡುಗಡೆಯಾಗಿದೆ ಎಂದರೆ ಅದು ಮೆಜೆಸ್ಟಿಕ್‌ನ ನರ್ತಕಿ ಚಿತ್ರಮಂದಿರದ ಕೆಳಗಿನ ಸಪ್ನಾ ಚಿತ್ರಮಂದಿರ ಅನ್ನುವುದು ಖಾತ್ರಿ ಎನ್ನುವಂತಿತ್ತು. ಒಂದು ಉದ್ದನೆಯ ಓಣಿಯಂತಹ ಪಾರ್ಕಿಂಗ್ ಜಾಗದಲ್ಲಿ ಹೇಗೋ ವ್ಯವಸ್ಥೆ ಮಾಡಿರುವ ಆ ಚಿತ್ರ ಮಂದಿರವನ್ನು ನೋಡಿದರೆ ಅಲ್ಲಿ ಯಾರಿಗೂ ಕೂರುವ ಮನಸ್ಸೇ ಬರುವುದಿಲ್ಲ.

ಈಗೀಗ ಮಲ್ಟಿಪೆಕ್ಸ್, ಪಿ.ವಿ.ಆರ್.ನಂತಹ ಚಿತ್ರಮಂದಿರಗಳು ಬಂದಿವೆ ಎಂದರೂ ಅಲ್ಲಿನ ಟಿಕೆಟ್ ಬೆಲೆ ಕೇಳಿದರೆ ಎದೆ ಒಡೆಯುತ್ತದೆ. ಅವೆಲ್ಲಾ ಬರೀ ಐ.ಟಿ.-ಬಿ.ಟಿ. ಮುಂತಾದ ಶ್ರೀಮಂತರನ್[...] ಗಮನದಲ್ಲಿಟ್ಟುಕೊಂಡು ಕಟ್ಟಲಾಗಿರುವ[...] ಚಿತ್ರಮಂದಿರಗಳು. ಸಾಮಾನ್ಯ ಜನರಿಗೆ ಎಲ್ಲಿದ[...] ಅಲ್ಲಿ ಅವಕಾಶ.

ಇದು ಥಿಯೇಟರ್‌ಗಳ ಕತೆ. ಇನ್[...] ಚಿತ್ರರಂಗದ ಒಳಗಿನ ಚಿತ್ರಣ ಏನು? ಒಂದು[...] ಕಡೆಯಿಂದ ಜನರ ಮನಸ್ಸಿನಲ್ಲಿ ಜಡ್ಡುಗಟ್ಟಿರುವ[...] ಹಳಸಲು, ಸಾಂಪ್ರದಾಯಿಕ ಮೌಲ್ಯಗಳನ್ನ[...] ವೈಭವೀಕರಿಸುವ ಸಿನಿಮಾಗಳು[...] ಮತ್ತೊಂದೆಡೆಯಿಂದ ಜನರ ಅಭಿರುಚಿಯನ್ನ[...] ಹಾಳು ಮಾಡುವ ಹಿಂಸೆ, ಕ್ರೌರ್ಯ[...] ಅತಿರಂಜಿತ, ಅತಿರೇಕದ, ಅತಿಭಾವುಕ[...] ಅವಾಸ್ತವಿಕ, ಮಸಾಲೆ ಚಿತ್ರಗಳು. ಜನರ[...] ಆಲೋಚನೆಯ ಉಸಿರಾಟಕ್ಕೆ ಹೊಸಗಾಳಿ[...] ಸಿಗುವುದಾದರೂ ಎಲ್ಲಿಂದ ಗಂಭೀರ ನಿರ್ದೇಶನ[...] ಸಿನಿಮಾಗೆ ಥಿಯೇಟರ್. ಸಿಗುವುದಿಲ್ಲವೆಂಬ[...]

ಪುಟ 11[...]

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027. Published by G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12, 18th Cross, S.R.Nagar, BANGALORE - 560 027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.N[...]
Editor S.Y.GURUSHANTH